## ಅಧ್ಯಾಯ 3

# ಆಸ್ಯ ಸೀಮೆಯಲ್ಲಿರುವ ಏಳು ಸಭೆಗಳಿಗೆ ಬರೆದ ಪತ್ರಗಳು

# (ಭಾಗ 2)

### ಸಾರ್ದಿಸ್: ಗತಕಾಲದಲ್ಲಿ ಜೀವಿಸುತ್ತಿದ್ದ ಸಭೆ (3:1-6)

**[1]ಸಾರ್ದಿಸಿನಲ್ಲಿರುವ ಸಭೆಯ ದೂತನಿಗೆ ಬರೆ - ದೇವರ ಏಳು ಆತ್ಮಗಳೂ ಏಳು ನಕ್ಷತ್ರಗಳೂ ಉಳ್ಳಾತನು ಹೇಳುವದೇನಂದರೆ - ನಿನ್ನ ಕೃತ್ಯಗಳನ್ನು ಬಲ್ಲೆನು; ಜೀವಿಸುವವನು ಎಂದು ಹೆಸರು ನಿನಗಿದ್ದರೂ ಸತ್ತವನಾಗಿದ್ದೀ ಎಂಬುದನ್ನು ಬಲ್ಲೆನು. [2]ಎಚ್ಚರವಾಗಿರು; ಸಾಯುವ ಹಾಗಿದ್ದ ಉಳಿದವುಗಳನ್ನು ದೃಢಪಡಿಸು. ನನ್ನ ದೇವರ ಮುಂದೆ ನಿನ್ನ ಕೃತ್ಯಗಳಲ್ಲಿ ಒಂದಾದರೂ ಸಂಪೂರ್ಣವಾದದ್ದೆಂದು ನಾನು ಕಾಣಲಿಲ್ಲ. [3]ಆದದರಿಂದ ನೀನು ಹೊಂದಿದ ಉಪದೇಶವನ್ನೂ ಅದನ್ನು ಕೇಳಿದ ರೀತಿಯನ್ನೂ ನೆನಪಿಗೆ ತಂದುಕೊಂಡು ಅದನ್ನು ಕಾಪಾಡಿಕೋ ಮತ್ತು ದೇವರ ಕಡೆಗೆ ತಿರುಗಿಕೋ. ನೀನು ಎಚ್ಚರವಾಗಿಲ್ಲದಿದ್ದರೆ ಕಳ್ಳನು ಬರುವಂತೆ ಬರುವೆನು; ನಾನು ಯಾವ ಗಳಿಗೆಯಲ್ಲಿ ನಿನ್ನ ಮೇಲೆ ಬರುವೆನೋ ಅದು ನಿನಗೆ ತಿಳಿಯುವದೇ ಇಲ್ಲ. [4]ಆದರೂ ತಮ್ಮ ವಸ್ತ್ರಗಳನ್ನು ಮೈಲಿಗೆ ಮಾಡಿಕೊಳ್ಳದಿರುವ ಸ್ವಲ್ಪ ಜನರು ಸಾರ್ದಿಸಿನೊಳಗೆ ನಿನ್ನಲ್ಲಿದ್ದಾರೆ; ಅವರು ಯೋಗ್ಯರಾಗಿರುವದರಿಂದ ಶುಭ್ರವಸ್ತ್ರಗಳನ್ನು ಧರಿಸಿಕೊಂಡು ನನ್ನ ಜೊತೆಯಲ್ಲಿ ನಡೆಯುವರು. [5]ಜಯಶಾಲಿಗೆ ಹೀಗೆ ಶುಭ್ರವಸ್ತ್ರಗಳನ್ನು ಹೊದಿಸುವರು. ಜೀವಬಾದ್ಯರ ಪಟ್ಟಿಯಿಂದ ಅವನ ಹೆಸರನ್ನು ನಾನು ಅಳಿಸಿಬಿಡದೆ ಅವನು ನನ್ನವನೆಂದು ನನ್ನ ತಂದೆಯ ಮುಂದೆಯೂ ಆತನ ದೂತರ ಮುಂದೆಯೂ ಒಪ್ಪುವೆನು. [6]ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ.**

ಐದನೆಯ ಪತ್ರವು ಥುವತ್ತೈರದ ದಕ್ಷಿಣ-ಆಗ್ನೇಯ ದಿಕ್ಕಿನಲ್ಲಿದ್ದ ಒಂದು ಕಾಲದ ಹೆಸರುವಾಸಿ ಪಟ್ಟಣವಾದ ಸಾರ್ದಿಸಿನಲ್ಲಿರುವ ಸಭೆಗೆ ಆಗಿರುತ್ತದೆ ಈ ಸಭೆಯು ಯಾವ ಒಳ್ಳೇದರ ಬಗ್ಗೆಯೂ - ಕನಿಷ್ಠ ಇಡೀ ಸಭಿಕರಿಗೆ ಸಂಬಂಧಿಸಿದಂತೆ - ಹೇಳದ ಎರಡು ಸಭೆಗಳಲ್ಲಿ (ಲವೊದಿಕೀಯವು ಇನ್ನೊಂದು ಸಭೆಯಾಗಿದೆ) ಇದೊಂದು ಸಭೆ ಎಂಬ ನೆಚ್ಚಲಾಗದ ಭಿನ್ನತೆಯನ್ನು ಹೊಂದಿರುತ್ತದೆ. ಹಾಗಿದ್ದರೂ, ಈಗಲೂ ಸರಿಯಾದದ್ದನ್ನು ಮಾಡುವದಕ್ಕೆ ಪ್ರಯತ್ನಿಸುತ್ತಿದ್ದ ಕೆಲವು ಮಂದಿ ನಂಬಿಗಸ್ತರನ್ನು ಸಾರ್ದಿಸ್ ಸಭೆಯು ಹೊಂದಿತ್ತು (ವ. 4).

ಏಳು ಸಭೆಗಳು ಅನೇಕ ಸಾರಿ ಅವುಗಳ ಸುತ್ತಲಿದ್ದ ಸಮುದಾಯಗಳಿಂದ

ಬಾಧೆಗೊಳಗಾಗಿದ್ದವೆಂಬುದನ್ನು ನಾವು ನೋಡಿದ್ದೇವೆ. ಸಭೆಯ ಸಮುದಾಯದ ಮೇಲೆ ಪ್ರಭಾವವನ್ನು ಬೀರತಕ್ಕದ್ದು (ಮತ್ತಾಯ 5:13-16), ಆದರೆ ಬಹಳಷ್ಟು ಸಾರಿ ಅದಕ್ಕೆ ವ್ಯತಿರೀಕ್ತವಾಗಿರುತ್ತದೆ. ಈ ಪರಿಸ್ಥಿತಿಗೆ ಒಂದು ಪ್ರಧಾನ ಉದಾಹರಣೆಯೆಂದರೆ ಸಾರ್ದಿಸಿನಲ್ಲಿರುವ ಸಭೆಯೇ ಆಗಿದೆ. ಪಟ್ಟಣದ ಮೂರು ಗುಣಲಕ್ಷಣಗಳು ಸಭೆಯಲ್ಲಿ ಪ್ರತಿಬಿಂಬಿತವಾಗಿದ್ದವು:

1. *ಸಾರ್ದಿಸಿಗೆ ಗತಕಾಲದ ಮಹಿಮೆಯ ಇತಿಹಾಸವಿತ್ತು.* ಅದು ಆಸ್ಯ ಸೀಮೆಯಲ್ಲಿಯೇ ಅತ್ಯಂಥ ಹಳೆಯ ನಗರವಾಗಿತ್ತು ಮತ್ತು ಒಂದು ಕಾಲದಲ್ಲಿ ಎಲ್ಲಾ ಪಟ್ಟಣಗಳಿಗಿಂತ ಶ್ರೇಷ್ಠವಾಗಿತ್ತು. ಸಾರ್ದಿಸ್ ಕ್ರಿ.ಪೂ. 560ರಲ್ಲಿ, ಲೂದ್ಯದ ಕಡೇ ಅರಸನಾದ Croesusನ ಆಳ್ವಿಕೆಯ ಅಡಿಯಲ್ಲಿ ಪ್ರಾಚೀನ ಸಾಮ್ರಾಜ್ಯದ ರಾಜಧಾನಿ ಆಯಿತು, ಆತನು ಕ್ರಿ.ಪೂ. 546ರಲ್ಲಿ ಮರಣಿಸಿದನು. ಮೂಲ ಪಟ್ಟಣವು Tmolus ಪರ್ವತದ ಮೇಲೆ ಕಟ್ಟಲ್ಪಟ್ಟಿತ್ತು. ಪರ್ವತದ ಕೆಳಗಡೆಯಲ್ಲಿ ಬಂಗಾರ-ಹೊಂದಿದ ಮರುಳಿನಿಂದ ಕೂಡಿದ ನಡಿಯಿತ್ತು, ಅದು Croesusನ ಐಶ್ವರ್ಯಕ್ಕೆ ಕೊಡುಗೆಯನ್ನು ನೀಡಿತ್ತು. "Croesusನಷ್ಟು ಐಶ್ವರ್ಯವಂತ" ಎಂಬ ಮಾತು ಈಗಲೂ ಬಳಕೆಯಲ್ಲಿರುತ್ತದೆ. Croesusನು ಪ್ರಥಮ ಅಧಿಕೃತ ಸರ್ಕಾರಿ ನಾಣ್ಯಗಳ ಬಳಕೆಯನ್ನು ಪ್ರತಿಷ್ಠಾಪಿಸಿದ್ದನು; ಆದದರಿಂದ, ಆಧುನಿಕ ಅರ್ಥದ ಮಾತಿನ ಪ್ರಕಾರ ಹಣ ತನ್ನ ಮೂಲವನ್ನು ಸಾರ್ದಿಸಿನಲ್ಲಿ ಹೊಂದಿತ್ತೆಂದು ಹೇಳಬಹುದು. ಅದು ಸರ್ಕಾರಿ ಮುದ್ರೆಯೊಂದಿಗೆ ಖಾತ್ರಿಗೊಳಿಸಲ್ಪಟ್ಟ ಪ್ರಮಾಣೀಕೃತ ನಾಣ್ಯಗಳನ್ನು ವಿತರಿಸಿದ ಪ್ರಥಮ ಪಟ್ಟಣ ಇದಾಗಿತ್ತು. ಪರ್ಶಿಯಾದ ಅರಸನಾದ ಮಹಾ ಕೋರೇಷ (Cyrus) ಪಟ್ಟಣವನ್ನು ಮುತ್ತಿಗೆ ಹಾಕಿದಾಗ, ಆತನು 600 ಮಿಲಿಯನ್ ಡಾಲರ್ ಮೌಲ್ಯಕ್ಕೆ ಸಮಾನವಾದ ಬಂಗಾರದ ನಾಣ್ಯಗಳ ಐಶ್ವರ್ಯವನ್ನು ಹೊತ್ತೊಯ್ದನು. ಐಶ್ವರ್ಯದ ಇನ್ನೊಂದು ಮೂಲವೆಂದರೆ ಪಟ್ಟಣವು ಮೂರು ಕರಾವಳಿ ಪಟ್ಟಣಗಳ ಅಡ್ಡರಸ್ತೆಗಳ ಮತ್ತು ಪ್ರಮುಖ ಒಳರಸ್ತೆಗಳ ಸಮೀಪದಲ್ಲಿತ್ತು ಎಂಬ ವಾಸ್ತವಾಂಶವೇ ಆಗಿದೆ. ಅದು ಹೀಗೆ ಒಂದು ಐಶ್ವರ್ಯಭರಿತವಾದ ವಾಣಿಜ್ಯ ನಗರವಾಯಿತು.

2. *ಸಾರ್ದಿಸ್ ಪಟ್ಟಣವು ಅತಿ ದೃಢವಿಶ್ವಾಸದ ಒಂದು ಇತಿಹಾಸ ಹೊಂದಿತ್ತು.* ಮೂಲ ಪಟ್ಟಣವು Tmolus ಪರ್ವತದ ಚಾಚು ಪ್ರದೇಶದಲ್ಲಿ ಕಟ್ಟಲ್ಪಟ್ಟಿತ್ತು, ಅದು ಒಂದು ಸ್ವಾಭಾವಿಕ ದುರ್ಗನಗರವನ್ನು ರೂಪಿಸಿತ್ತು. ವ್ಯಾಪಕವಾದ ಹಾಗೂ ಫಲವತ್ತಾದ ಸಮಭೂಮಿಯ ಮೇಲಿಂದ 1,500 ಅಡಿಗಳಷ್ಟು ಎತ್ತರದಲ್ಲಿರುವ ಚಾಚು ಪ್ರದೇಶವು ಹೆಚ್ಚುಕಡಿಮೆ ಲಂಬವಾಗಿ ನಿಂತಿರುವ ಮೃದುವಾಗ ಬದಿಗಳನ್ನು ಹೊಂದಿದೆ. ಆ ಪಟ್ಟಣವನ್ನು ಒಂದು ಇಕ್ಕಟ್ಟಾದ ಒಡ್ಡುದಾರಿ (ತ್ತರಿಸಿದ ಕಾಲುದಾರಿ) ಮೂಲಕ ಪ್ರವೇಶಿಸಬಹುದಾಗಿದ್ದು ಅದನ್ನು ಕೆಲವು ವ್ಯಕ್ತಿಗಳು ಕಾವಲಾಗಿದ್ದು ಕಾಪಾಡಬಹುದಾಗಿತ್ತು. ಅದೊಂದು ಅಜೇಯ ಸ್ಥಾನದಲ್ಲಿರುವಂತೆ ಕಂಡಿತ್ತು.

ಒಂದು ಸಂದರ್ಭದಲ್ಲಿ, ಅರಸನಾದ Croesusನಿಗೆ ತಾನು ಪರ್ಶಿಯಾದ ಅರಸನಾದ ಕೋರೇಷನನ್ನು ಸೋಲಿಸಬಲ್ಲನೆಂಬುದಾಗಿ ಒಂದು ದೈವೋಕ್ತಿಯು ಹೇಳಿತೆಂದು ನಂಬಿದ್ದನು. ಅನ್ಯಧರ್ಮಿಯ ದೈವೋಕ್ತಿಗಳು ತಮ್ಮನ್ನು ಸುಳ್ಳು ಎಂದು ಸಾಭಿತುಗೊಳ್ಳುವದರಿಂದ ಕಾಪಾಡಿಕೊಳ್ಳುವ ಉದ್ದೇಶದಿಂದ ತಮ್ಮ "ಪ್ರೇರಿತ" ಎನ್ನಿಸಿಕೊಳ್ಳುವ ಘೋಷಣೆಗಳಲ್ಲಿ ಬೇಕೆಂದೇ ಅಸ್ಪಷ್ಟವಾಗಿರುತ್ತಿದ್ದವು. Croesusನು ವಿಫಲಗೊಂಡಾಗ, ಆತನು ಪುನಃ ತನ್ನ "ಅಜೇಯವಾದ" ಭದ್ರಕೋಟೆಯನ್ನು ಸೇರಿಕೊಂಡನು. ಆ ಒಡ್ಡು ದಾರಿಯನ್ನಲ್ಲದೆ ಬೇರೆ ಇನ್ನಾವದಾದರೂ ದಾರಿಯನ್ನು ಕಂಡು ಹಿಡಿಯುವವರಿಗೆ ಕೋರೇಷನು ಬಹುಮಾನವನ್ನು ಘೋಷಿಸಿದನು. ಒಬ್ಬ ಪರ್ಶಿಯಾದ ಸೈನಿಕನು ನೋಡುತ್ತಿರುವ ವೇಳೆ ಕೆಳಕ್ಕೆ ಬಿದ್ದ ಸಾರ್ದಿಸ್

ಸೈನಿಕನ ಶಿರಸ್ತ್ರಾಣವು ಪರ್ವತದ ಬದಿಯಿಂದ ಉರುಳಿ ಬಂದಿತು. ಸ್ವಲ್ಪ ಸಮಯದ ಬಳಿಕ, ತನ್ನ ಶಿರಸ್ತ್ರಾಣವನ್ನು ತೆಗೆದುಕೊಳ್ಳಲು ಸಾರ್ದಿಸಿನ ಸೈನಿಕನು ಪರ್ವತದ ಕೆಳಕ್ಕೆ ಬಂದಿರುವದು ಕಂಡಿತು. ಪರ್ಶಿಯಾದ ಸೈನಿಕನು ಮನಸ್ಸಿನಲ್ಲಿಯೇ ತರ್ಕಿಸಿಕೊಂಡಿದ್ದೇನೆಂದರೆ ಸಾರ್ದಿಸಿನ ಸೈನಿಕನು ಪರ್ವತದ ಇಳಿಜಾರಿನಲ್ಲಿ ಕೆಳಕ್ಕೆ ಬರುವದಾದರೆ, ಪರ್ಶಿಯನ್ನರು ಮೇಲಕ್ಕೆ ಹೋಗಬಹುದಲ್ಲಾ ಎಂಬದೆ. ಆತನು ಆ ಜಾಗವನ್ನು ಗುರುತಿಟ್ಟುಕೊಂಡನು ಮತ್ತು ಆ ರಾತ್ರಿಯಲ್ಲಿ ಪರ್ಶಿಯನ್ ಸೈನಿಕರು ಚಿಕ್ಕ ಗುಂಪಾಗಿ ಬೆಟ್ಟವನ್ನು ಏರಿದರು. ಸಾರ್ದಿಸಿನವರ ಅತಿಯಾದ ಆತ್ಮವಿಶ್ವಾಸದ ಕಾರಣದಿಂದಾಗಿ ಪಟ್ಟಣವನ್ನು ಕಾವಲು ಕಾಯದೆ ಬಿಟ್ಟಿರುವದನ್ನು ಅವರು ಕಂಡರು - ಮತ್ತು ಪಟ್ಟಣವು ಪತನಗೊಂಡಿತು.[1] ಸುಮಾರು ನೂರು ವರ್ಷಗಳ ನಂತರದಲ್ಲಿ ಅದೇ ರೀತಿಯ ಇನ್ನೊಂದು ಪತನವು ಸಂಭವಿಸಿತು.

3. *ಪ್ರಥಮ ಶತಮಾನದ ಅಂತ್ಯದ ಹೊತ್ತಿಗೆ, ಸಾರ್ದಿಸ್ ಪಟ್ಟಣವು ಗತಕಾಲದ ಮಹಿಮೆಯಲ್ಲಿ ಜೀವಿಸುತ್ತಿತ್ತು.* ಕೊರೇಷನು ಪಟ್ಟಣವನ್ನು ವಶಕ್ಕೆ ತೆಗೆದುಕೊಂಡ ನಂತರ, ಸಾರ್ದಿಸಿನವರಿಗೆ ಯುದ್ಧಾಯುಧಗಳನ್ನು ತಯಾರಿಸಿಕೊಳ್ಳಲು ಅನುಮತಿಯಿರಲಿಲ್ಲ. ತಂದೆಗಳು ತಮ್ಮ ಪುತ್ರರಿಗೆ ಕೇವಲ ತಂತಿವಾದ್ಯವನ್ನು ನುಡಿಸುವದನ್ನು, ನೃತ್ಯ, ಅಥವಾ ವ್ಯಾಪಾರಗಳನ್ನು ಮಾತ್ರವೇ ಕಲಿಸಿ ಕೊಡುವದಕ್ಕೆ ಸಾಧ್ಯವಿತ್ತು. William Barclayನು ಸಾರ್ದಿಸ್ ಪಟ್ಟಣವನ್ನು "ಒಂದು ಹವ್ಯಾಸಿ ನೃತ್ಯ-ವೃಂದದ ಸಂಗೀತಗಾರರ ಹಾಗೂ ಅಂಗಡಿಯವರ ಒಂದು ಪಟ್ಟಣ" ಎಂದು ಕರೆದನು.[2] ಅನಂತರ, ಕ್ರಿ.ಶ. 17ರಲ್ಲಿ, ಪಟ್ಟಣವು ಒಂದು ಭೂಕಂಪದಿಂದ ನಾಶಗೊಂಡಿತು. ಅದು ಪುನಃ ನಿರ್ಮಿಸಲ್ಪಟ್ಟಿತು ಆದರೆ ತನ್ನ ಮೊದಲಿನ ಮಹಿಮೆಯನ್ನು ಪುನಃ ಪಡೆದುಕೊಳ್ಳಲು ಎಂದಿಗೂ ಸಾಧ್ಯವೇ ಆಗಲಿಲ್ಲ. ಪ್ರಕಟನೆ 3:1-6 ಬರೆಯುವ ಹೊತ್ತಿಗೆ, ಸಾರ್ದಿಸ್ ಗತಕಾಲದಲ್ಲಿ ಜೀವಿಸುತ್ತಿದ್ದ ಒಂದು ಕೀಳು-ದರ್ಜೆಯ ಪಟ್ಟಣವಾಗಿತ್ತು. ನಾವು ಮುಂದೆ ನೋಡುವ ಪ್ರಕಾರ, ಸಾರ್ದಿಸಿನಲ್ಲಿರುವ ಸಭೆಯು ದುರಾದೃಷ್ಟಕರವಾಗಿ ಆ ಪಟ್ಟಣದ ಅದೇ ಮೂರು ಗುಣಸ್ವಭಾವಗಳನ್ನು ಹೊಂದಿತ್ತು.

**ವಚನ 1.** ಪತ್ರವು ಹೀಗೆ ಆರಂಭಗೊಳ್ಳುತ್ತದೆ, **ಸಾರ್ದಿಸಿನಲ್ಲಿರುವ ಸಭೆಯ ದೂತನಿಗೆ ಬರೆ** (1:16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಸಾರ್ದಿಸಿನಲ್ಲಿ ಸಭೆಯು ಯಾವಾಗ ಸ್ಥಾಪಿಸಲ್ಪಟ್ಟಿತೆಂಬುದು ತಿಳಿದು ಬಂದಿರುವದಿಲ್ಲ. ಅದು ಪೌಲನು ಎಫೆಸದಲ್ಲಿ ಸೇವೆಯನ್ನು ಮಾಡುತ್ತಿರುವ ವೇಳೆಯಲ್ಲಿ ಆರಂಭಿಸಲ್ಪಟ್ಟಿರುವ ಸಾಧ್ಯತೆಯಿರುತ್ತದೆ (ಅಪೊಸ್ತಲರ ಕೃತ್ಯಗಳು 19:1, 8-10). ಸುವಾರ್ತೆಯು ಸಾರ್ದಿಸಿಗೆ ಒಂದು ಗಮನಾರ್ಹವಾದ ರೀತಿಯಲ್ಲಿ ಬಂದಿರಬಹುದೆಂಬುದನ್ನು 3ನೇ ವಚನವು ಸೂಚಿಸಬಹುದಾಗಿದೆ.

ಯೇಸುವು ಸಾರ್ದಿಸಿ ಸಭೆಯಲ್ಲಿನ ರೋಗಗಳನ್ನು ಪರೀಕ್ಷಿಸಿ ಪರಿಹಾರವನ್ನು ಕೊಡುವದಕ್ಕೆ ಮುಂಚೆ, ತನ್ನನ್ನು **ದೇವರ ಏಳು ಆತ್ಮಗಳೂ ಏಳು ನಕ್ಷತ್ರಗಳೂ ಉಳ್ಳಾತನು** ಎಂಬುದಾಗಿ ಪರಿಚಯಿಸಿಕೊಳ್ಳುತ್ತಾನೆ. ಈ ಬಿರುದು ಎಲ್ಲಾ ಪತ್ರಗಳಲ್ಲಿಯೇ ಅತ್ಯಂಥ ಆದರಣೆಯುಂಟು ಮಾಡುವಂತದ್ದಾಗಿದೆ. ಎಫೆಸದಲ್ಲಿರುವ ಸಭೆಗೆ ಬರೆದ ಪತ್ರದಲ್ಲಿ, ಯೇಸು ತನ್ನನ್ನು ಏಳು ನಕ್ಷತ್ರಗಳನ್ನು ಹಿಡಿದಿರುವಾತನು ಎಂದು ಸಹ ಹೇಳಿಕೊಂಡನು, ಆದರೆ ಆತನು ಇದನ್ನು ತಾನು ಸಭೆಗಳನ್ನು ಪರಿಶೀಲಿಸುತ್ತಾ ಅವುಗಳ ಮಧ್ಯದಲ್ಲಿ ನಡೆದಾಡುತ್ತಿದ್ದೇನೆಂಬ ವ್ಯಾಕುಲಗೊಳಿಸುವ ಸತ್ಯದೊಂದಿಗೆ ಜೋಡಿಸುತ್ತಾನೆ (2:1). 3:1ರಲ್ಲಿನ ಇಡೀ ಬಣ್ಣನೆಯು ಪ್ರೋತ್ಸಾಹಕರವಾಗಿರುತ್ತದೆ. **ಏಳು ಆತ್ಮಗಳು** ಎಂಬ ಪದವು ಮೊದಲು 1:4ರಲ್ಲಿ ಕಂಡು ಬಂದಿತು, ಅಲ್ಲಿ ಅದು ಬಹುಶಃ ಪವಿತ್ರಾತ್ಮನನ್ನು ಸೂಚಿಸಿತ್ತು (1:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಕ್ರೈಸ್ತರಿಗೆ ಸಹಾಯ ಮಾಡಿ ಅವರನ್ನು ಬಲಗೊಳಿಸುವದಕ್ಕೆ ಪವಿತ್ರಾತ್ಮನು

ಕೊಡಲ್ಪಟ್ಟಿದ್ದಾನಾದ್ದರಿಂದ (ಅಪೊಸ್ತಲರ ಕೃತ್ಯಗಳು 2:38; 5:32; ರೋಮಾ 8:11, 13, 26), ಯೇಸುವು "ಏಳು ಆತ್ಮಗಳನ್ನು" ಉಳ್ಳಾತನಾಗಿದ್ದಾನೆಂಬ ವಾಸ್ತವಾಂಶವು ಆತನು ಕ್ರೈಸ್ತರನ್ನು ಆದರಿಸುವದಕ್ಕೆ ಸಿದ್ಧನಾಗಿ ಮತ್ತು ಶಕ್ತನಾಗಿ ಇದ್ದಾನೆಂಬುದನ್ನು ಸೂಚಿಸುತ್ತದೆ. ಆತನು **ಏಳು ನಕ್ಷತ್ರಗಳು** ಉಳ್ಳಾತನು ಎಂದು ಘೋಷಿಸುವ ಮೂಲಕ ಅದೇ ಸಂದೇಶವು ತಿಳಿಯಪಡಿಸಲ್ಪಟ್ಟಿತು. 1:16ರ ಪ್ರಕಾರ, ಯೇಸು ಈ ನಕ್ಷತ್ರಗಳನ್ನು ಬಲಗೈಯಲ್ಲಿ ಹಿಡಿದಿರುತ್ತಾನೆ, ಅದು ಸುರಕ್ಷತೆಯನ್ನು ಒದಗಿಸುವ ಆತನ ಶಕ್ತಿಶಾಲಿ ಹಸ್ತವಾಗಿದೆ. ಈ ಚಿತ್ರವು ತನ್ನ ಜನರನ್ನು ಕಾವಲಾಗಿದ್ದು ಕಾಪಾಡುವದಕ್ಕೆ ಆತನಿಗಿರುವ ಸಾಮರ್ಥ್ಯವನ್ನು ಸೂಚಿಸುತ್ತದೆ (1:16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಸಾರ್ದಿಸಿನಲ್ಲಿರುವ ಸಭೆಯು ಯಾವದೇ ಸಾಮಾನ್ಯವಾದ ಶ್ಲಾಘನೆಯನ್ನು ಪಡೆದುಕೊಳ್ಳಲಿಲ್ಲವಾದ್ದರಿಂದ, ಯೇಸು ಏಕೆ ಪತ್ರವನ್ನು ಈ ಸಾಂತ್ವನದ ಸಂದೇಶದೊಂದಿಗೆ ಆರಂಭಿಸಿದನು? ಬಹುಶಃ, ಆತನು "ಸ್ವಲ್ಪ ಜನರನ್ನು" ಪ್ರೋತ್ಸಾಹಿಸುವದಕ್ಕೆ ಬಯಸಿದನು (ವ. 4).

ಪತ್ರದ ಮುಖ್ಯ ಭಾಗವು ಎಫೆಸ ಹಾಗೂ ಥಯವತ್ತೈರದ ಸಭೆಗಳಿಗೆ ಬರೆದ ಪತ್ರಗಳಲ್ಲಿ ಯೇಸುವು ಬಳಸಿದ ಅದೇ ಮಾತುಗಳಿಂದ ಆರಂಭಗೊಳ್ಳುತ್ತದೆ: **ನಾನು ನಿನ್ನ ಕೃತ್ಯಗಳನ್ನು ಬಲ್ಲೆನು.** ಯೇಸು ಆ ಎರಡು ಸಭೆಗಳನ್ನು ಶ್ಲಾಘನೆ ಮಾಡಿದ್ದನು. ಆತನು ಎಫೆಸದಲ್ಲಿರುವ ಕ್ರೈಸ್ತರಿಗೆ ಹೀಗೆ ಹೇಳಿದ್ದನು, "*ನಿನ್ನ ಕೃತ್ಯಗಳನ್ನೂ* ನಿನ್ನ ಪ್ರಯಾಸವನ್ನೂ ತಾಳ್ಮೆಯನ್ನೂ *ಬಲ್ಲೆನು*. ನೀನು ದುಷ್ಟರನ್ನು ಸಹಿಸಲಾರಿ . . ." (2:2; ಒತ್ತಿ ಹೇಳಿದ್ದು ನನ್ನದು). ಆತನು ಥುವತ್ತೈರದಲ್ಲಿರುವವರಿಗೆ ಪ್ರಶಂಸೆಯ ಮಾತುಗಳನ್ನಾಡುತ್ತಾ ಹೀಗೆ ಹೇಳಿದನು, "*ನಿನ್ನ ಕೃತ್ಯಗಳನ್ನೂ* ನಿನ್ನ ಪ್ರೀತಿಯನ್ನೂ ನಂಬಿಕೆಯನ್ನೂ ಪರೋಪಕಾರವನ್ನೂ ತಾಳ್ಮೆಯನ್ನೂ ಬಲ್ಲೆನು. ಇದಲ್ಲದೆ ನಿನ್ನ ಕಡೇ ಕೃತ್ಯಗಳು ನಿನ್ನ ಮೊದಲಿನ ಕೃತ್ಯಗಳಿಗಿಂತ ಹೆಚ್ಚಾದವುಗಳೆಂದು ಬಲ್ಲೆನು" (2:19; ಒತ್ತಿ ಹೇಳಿದ್ದು ನನ್ನದು). ಯೇಸು ಬಳಿಕ "ನಿನ್ನ ಕೃತ್ಯಗಳನ್ನು ಬಲ್ಲೆನು" ಎಂಬದಾಗಿ ಫಿಲದೆಲ್ಫಿಯ ಮತ್ತು ಲವೊದಿಕೀಯ ಸಭೆಗಳಿಗೆ ಬರೆದ ಪತ್ರಗಳಲ್ಲಿ ಪುನರಾವರ್ತಿಸುತ್ತಾನೆ (ವಚನಗಳು 8, 15).

ಏಳು ಪತ್ರಗಳು ಬೇರೆ ಬೇರೆಯಾಗಿ ವಿತರಿಸಲ್ಪಡಲಿಲ್ಲ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ಏಳು ಸಭೆಗಳೊಳಗೆ ಒಂದು ತನಗೆ ಬರೆದ ಪತ್ರವನ್ನು ಕೇಳಿಸಿಕೊಳ್ಳುವದಕ್ಕೆ ಕೂಡಿ ಬಂದ ವೇಳೆ, ಸದಸ್ಯರು ಇತರ ಏಳು ಪತ್ರಗಳನ್ನು ಸಹ ಕೇಳಿಸಿಕೊಂಡರು. ಹೀಗೆ, ಸಾರ್ದಿಸಿನ ಸಭೆಗೆ ಬರೆದ ಪತ್ರವು ಓದಲ್ಪಡುವದಕ್ಕೆ ಮುನ್ನವೇ, ಸಾರ್ದಿಸಿನ ಕ್ರೈಸ್ತರು ಇತರ ನಾಲ್ಕು ಸಭೆಗಳನ್ನು ಯೇಸುವು ಶ್ಲಾಘನೆ ಮಾಡುವದನ್ನು ಕೇಳಿಸಿಕೊಂಡರು. ಎಫೆಸ ಹಾಗೂ ಥುವತ್ತೈರದಲ್ಲಿನ ಸಭೆಗಳಿಗೆ ತನ್ನ ಅಭಿನಂದನೆಗಳನ್ನು ತಿಳಿಸುವದರ ಜೊತೆಯಲ್ಲಿ, ಯೇಸುವು ಸಂಕಟದ ಹೊರತಾಗಿಯೂ ನಂಬಿಗಸ್ತಿಕೆಯಿಂದ ಇದ್ದದಕ್ಕಾಗಿ ಸ್ಮುರ್ನದ ಸಭೆಯನ್ನು ಮತ್ತು ಆತನ ಹೆಸರನ್ನು ಗಟ್ಟಿಯಾಗಿ ಹಿಡಿದುಕೊಂಡಿರುವದಕ್ಕಗಿ ಪೆರ್ಗಮದ ಸಭೆಯನ್ನು ಶ್ಲಾಘನೆ ಮಾಡಿದ್ದನು. ಸಾರ್ದಿಸಿನಲ್ಲಿನ ಸಭೆಯು ಅತ್ಯಂಥ ಹೆಸರಾಂತ ಗತಕಾಲವನ್ನು ಹೊಂದಿತ್ತಾದ್ದರಿಂದ, ಅದರ ಸದಸ್ಯರು ಯೇಸುವಿನಿಂದ ಅತ್ಯಂಥ ದಾರಾಳವಾದ ಪ್ರಶಂಸೆಯನ್ನು ನಿರೀಕ್ಷಿಸಿದ್ದರು. ಬದಲಾಗಿ, ಅವರು ಅತ್ಯಂಥ ನೋವುಭರಿತ ರೋಗನಿರ್ಣಯಾತ್ಮಕ ವಿಶ್ಲೇಷಣೆಯನ್ನು ಕೇಳಿಸಿಕೊಂಡರು. ಮೂಲ ವಾಕ್ಯದಲ್ಲಿ ಮೌಲ್ಯಮಾಪನಕ್ಕೆ ಕೇವಲ ಆರು ಮಾತುಗಳು ಸಾಕಾಗಿದ್ದವು, ಆದರೆ ಜೋರಾಗಿ ಹೊಡೆಯುವ ಭಾಷೆಯನ್ನು ಊಹಿಸಿಕೊಳ್ಳುವದು ಕಷ್ಟಕರವಾಗುವದು: **ಜೀವಿಸುವವನು ಎಂದು**

**ಹೆಸರು ನಿನಗಿದ್ದರೂ ಸತ್ತವನಾಗಿದ್ದೀ.**

ಸಭೆಯು **ಜೀವಿಸುವವರಾಗಿ** ಇರುವದಕ್ಕೆ **ಹೆಸರು** ಹೊಂದಿತ್ತು - ಸಹೋದರರ ಮಧ್ಯದಲ್ಲಿ ಆತ್ಮೀಕ ಪೌರುಷಕ್ಕೆ ಖ್ಯಾತಿ ಹೊಂದಿತ್ತು. ನೀನು ಯಾರೆಂದು ಜನರು ಯೋಚಿಸುತ್ತಾರೋ ಅದು *ಖ್ಯಾತಿಯಾದರೆ*, ನೀನು ನಿಜವಾಗಿಯೂ ಏನಾಗಿದ್ದೀಯೋ ಅದು *ಗುಣಸ್ವಭಾವ* ಆಗಿರುತ್ತದೆಂದು ಒಬ್ಬರು ಹೇಳಿದ್ದಾರೆ. ಬಹುಶಃ ಸಾರ್ದಿಸಿನಲ್ಲಿನ ಸಭೆಯು "ಅದು ಕ್ರಿಸ್ತನಿಗಾಗಿ ಜೀವಂತವಾಗಿರುವ ಸಭೆಯೆಂದರೆ ಅದೇ ನೋಡಪ್ಪಾ!" ಎಂದು ಜನರು ಹೇಳುವಷ್ಟರ ಮಟ್ಟಿಗೆ ಮನಸೆಳೆಯುವಂತಹ ಸೇವೆಗಳನ್ನು - ಗಂಭೀರ ಸೊಬಗಿನ ಪ್ರಾರ್ಥನೆಗಳು, ಅಂದವಾದ ಹಾಡುವಿಕೆ, ಗಮನ ಸೆಳೆಯುವಂತಹ ಬೋಧನೆ, ಕರ್ತನ ಭೋಜನವನ್ನು ಘನತೆಯಿಂದ ಆಚರಿಸುವದು, ಅಳತೆ ಮೀರಿದ ಕಾಣಿಕೆ ಕೊಡುವಿಕೆ - ಹೊಂದಿತ್ತೆಂದು ತೋರುತ್ತದೆ. ಹೇಗೂ, ಮನುಷ್ಯನು ನೋಡುವ ರೀತಿಯಲ್ಲಿ ದೇವರು ನೋಡುವವನಲ್ಲ (1 ಸಮುವೇಲ 16:7). ಕರ್ತನು ಸಭೆಯನ್ನು **ಸತ್ತವನಾಗಿದ್ದೀ** - ಆತ್ಮೀಕವಾಗಿ ಸತ್ತವನು - ಎಂದು ಘೋಷಿಸಿದನು, ಅದು 1 ತಿಮೊಥೆ 5:6ರಲ್ಲಿ ಪ್ರಸ್ತಾಪಿಸಲಾಗಿರುವ ಸ್ತ್ರೀಯಂತೆ ಆಗಿತ್ತು, ಆಕೆಯು "ಬದುಕಿರುವಾಗಲೂ ಸತ್ತವಳೇ" ಆಗಿದ್ದಳು. ಕರ್ತನೊಂದಿಗೆ ಅದರ ಸಂಬಂಧವು ಸರಿಯಾಗಿ ಇರಲಿಲ್ಲವಾದ ಕಾರಣ, ಸಾರ್ದಿಸಿನಲ್ಲಿರುವ ಸಭೆಯು ಒಂದು ಖ್ಯಾತಿಯನ್ನು ಹೊಂದಿತ್ತು ಆದರೆ ವಾಸ್ತವಿಕತೆಯನ್ನು ಹೊಂದಿರಲಿಲ್ಲ, ವೇಷವನ್ನು ಹೊಂದಿತ್ತು ಆದರೆ ಶಕ್ತಿಯನ್ನಲ್ಲ.

**ವಚನ 2.** ಸಾರ್ದಿಸಿನ ಸಭೆಯು ಮರಣಾಂತಿಕವಾದ ವ್ಯಾಧಿಯನ್ನು ಹೊಂದಿದೆ ಎಂದು ಯೇಸುವು ಹೇಳುವದಕ್ಕೆ ಕಾರಣವಾದ ನಾಲ್ಕು ನಿರ್ದಿಷ್ಟವಾದ ರೋಗಲಕ್ಷಣಗಳನ್ನು ಮುಂದಿನ ನಾಲ್ಕು ವಚನಗಳು ಪ್ರಸ್ತಾಪಿಸುತ್ತವೆ ಅಥವಾ ಸೂಚ್ಯಾರ್ಥವನ್ನು ನೀಡುತ್ತವೆ:

1. *ನಿದ್ರಾವಸ್ಥೆ.* ಸಭೆಯು ತನ್ನ ಜವಾಬ್ದಾರಿಗಳ ವಿಷಯದಲ್ಲಿ ಅಸಡ್ಡೆಯಿಂದ ಇತ್ತು. ಯೇಸು ಅದರ ಸದಸ್ಯರಿಗೆ **ಎಚ್ಚರವಾಗಿರು** ಎಂದು ಹಿತವಚನ ನೀಡುತ್ತಾನೆ.

2. *ಉತ್ಸಾಹಶೂನ್ಯತೆ.* ಒಂದು ಕಾಲದಲ್ಲಿ ಸಾರ್ದಿಸಿನಲ್ಲಿರುವ ಕ್ರೈಸ್ತರು ಹುರುಪಿನಿಂದ ಇದ್ದರು, ಆದರೆ ಯೇಸು ಹೀಗೆ ಹೇಳಿದನು, **ನನ್ನ ದೇವರ ಮುಂದೆ ನಿನ್ನ ಕೃತ್ಯಗಳಲ್ಲಿ ಒಂದಾದರೂ ಸಂಪೂರ್ಣವಾದದ್ದೆಂದು ನಾನು ಕಾಣಲಿಲ್ಲ.** Πληρόω (*plēroō*) ಎಂಬುದರಿಂದ ಬರುವ ಗ್ರೀಕ್ ಪದದ ಅರ್ಥವು **ಸಂಪೂರ್ಣವಾದದ್ದು** ಅಥವಾ "ಪರಿಪೂರ್ಣಗೊಂಡದ್ದು" (KJV) ಎಂದಾಗಿರುತ್ತದೆ. ಸಭೆಯು ಗಮನಾರ್ಹವಾದ ಕೃತ್ಯಗಳನ್ನು ಆರಂಭಿಸಿತ್ತು ಆದರೆ ಆಸಕ್ತಿಯನ್ನು ಕಳೆದುಕೊಂಡಿತ್ತು; ಅವರು ಏನನ್ನೂ ಪೂರ್ತಿಗೊಳಿಸಿರಲಿಲ್ಲ. ಈ ವಚನವು ನಾವು ಯಾವದನ್ನು ಆರಂಭಿಸುತ್ತೇವೋ ಅದನ್ನು ಪೂರ್ತಿಗೊಳಿಸುವದರ ಅಗತ್ಯತೆಯ ಕುರಿತಾದ ಒಂದು ಮುಖ್ಯವಾದ ವಾಕ್ಯಭಾಗವಾಗಿರುತ್ತದೆ. **ನನ್ನ ದೇವರ** ಎಂಬ ಪದಗುಚ್ಛವು ಯೇಸು ಹಾಗೂ ತಂದೆಯ ನಡುವೆ ಒಂದು ಆಪ್ತವಾದ ಸಂಬಂಧವಿರುತ್ತದೆಂಬುದನ್ನು ತೋರ್ಪಡಿಸುತ್ತದೆ (ನೋಡಿರಿ ಯೋಹಾನ 20:17).

3. *ಉದಾಸೀನತೆ.* 4ನೇ ವಚನದಲ್ಲಿ ಯೇಸು ಹೀಗೆ ಹೇಳಿದನು, "ಆದರೂ ತಮ್ಮ ವಸ್ತ್ರಗಳನ್ನು ಮೈಲಿಗೆ ಮಾಡಿಕೊಳ್ಳದಿರುವ ಸ್ವಲ್ಪ ಜನರು ಸಾರ್ದಿಸಿನೊಳಗೆ ನಿನ್ನಲ್ಲಿದ್ದಾರೆ," ಉಳಿದವರು ವಸ್ತ್ರಗಳನ್ನು ಮೈಲಿಗೆ ಮಾಡಿಕೊಂಡಿದ್ದರೆಂಬ ಸೂಚ್ಯಾರ್ಥವಾಗುತ್ತದೆ. ಸಾರ್ದಿಸಿನ ಕ್ರೈಸ್ತರಲ್ಲಿ ಅನೇಕರು "ತಮ್ಮ ಅನ್ಯಧರ್ಮಿಯ ನೆರೆಹೊರೆಯವರಿಂದ ಭಿನ್ನವಾಗಿ ಗುರುತಿಸಲಾಗದಂಥ ಜೀವಿತಗಳನ್ನು ನಡಿಸುವವರಾಗಿ ಮಾರ್ಪಟ್ಟಿದ್ದರು."[3] ಅವರು "ಪ್ರಪಂಚದ ದೋಷವು ಹತ್ತದಂತೆ ನೋಡಿಕೊಳ್ಳಿರಿ" ಎಂಬ ಆಜ್ಞೆಯನ್ನು ಅಸಡ್ಡೆ ಮಾಡುವವರಾಗಿದ್ದರು (ಯಾಕೋಬ 1:27; ನೋಡಿರಿ ಯೂದನು 23).

4. *ಭಾವವಶ್ಯತೆ.* ಸಾರ್ದಿಸಿನಲ್ಲಿರುವ ಸಭೆಗೆ ಬರೆದ ಪತ್ರವನ್ನು ನಾವು ಅಧ್ಯಯನ ಮಾಡಿದ ಹಾಗೆ, ಬೇರೆ ಸಭೆಗಳು ಅನುಭವಿಸಿದಂಥಹ ಯಾವದೇ ಸಂಕಷ್ಟಗಳು ಮತ್ತು ಸಮಸ್ಯೆಗಳ ಬಗ್ಗೆ ಇಲ್ಲಿ ಯಾವದೇ ಪ್ರಸ್ತಾಪ ಮಾಡಲ್ಪಡದಿರುವಿಕೆಯ ವಾಸ್ತವಾಂಶದಿಂದ ಹೊಡೆಯಲ್ಪಡುತ್ತೇವೆ. ಸ್ಪಷ್ಟವಾಗಿರುವ ಪ್ರಕಾರ, ಸೆಣಸಾಡುವದಕ್ಕೆ ಸಾರ್ದಿಸಿನ ಸಭೆಯಲ್ಲಿನ ಕ್ರೈಸ್ತರಿಗೆ ಯಾವದೇ ಸುಳ್ಳು ಬೋಧಕರು ಇರಲಿಲ್ಲ (ನೋಡಿರಿ 2:2, 6, 14, 15, 20). ಅವರು ಅವಿಶ್ವಾಸಿಗಳಾದ ಯೆಹೂದ್ಯರಿಂದ ಹಿಂಸೆ ಪಡಿಸಲ್ಪಟ್ಟಿರಲಿಲ್ಲ (ನೋಡಿರಿ 2:9; 3:9). ಅವರು ಸ್ವಲ್ಪ ಸಮಯದಲ್ಲಿಯೇ ಸೆರೆಮನೆಗೆ ಹಾಕಲ್ಪಡುವವರಾಗಿರಲಿಲ್ಲ (ನೋಡಿರಿ 2:10). ನಂಬಿಕೆಗೋಸ್ಕರವಾಗಿ ಯಾವನೂ ಮರಣಿಸಿರಲಿಲ್ಲ (ನೋಡಿರಿ 2:13). ಅವರಿಗೆ ಸಮಾಧಾನ ಇತ್ತು - ಆದರೆ ಅದೊಂದು ಸಮಾಧಿಯಲ್ಲಿರುವಂತಹ ಸಮಾಧಾನ ಆಗಿತ್ತು.

ಸಾರ್ದಿಸನಲ್ಲಿನ ಕ್ರೈಸ್ತರು ಈಗಲೂ ಆರಾಧನೆಗಾಗಿ ಕೂಡಿ ಬರುತ್ತಿದ್ದರು, ಆದರೆ ಈಗ ಅವರು ಸಮುದಾಯದಲ್ಲಿ ರಣೋತ್ಸಾಹದಿಂದ ತಮ್ಮ ನಂಬಿಕೆಯನ್ನು ಹಂಚಿಕೊಳ್ಳುವವರಾಗಿರಲಿಲ್ಲ. ಅವರು ತಮ್ಮ ಅನ್ಯಧರ್ಮಿಯ ನೆರೆಯವರೊಂದಿಗೆ ಸುಖಕರವಾಗಿ ಸಹಬಾಳ್ವೆಯನ್ನು ನಡಿಸುತ್ತಿದ್ದರು. Warren Wiersbeನು "ಅವರು ಅವಸಾನದಲ್ಲಿದ್ದ ಸಾಕ್ಷಿ ಮತ್ತು ಒಂದು ಕ್ಷೀಣಿಸುತ್ತಿರುವ ಸೇವೆಯೊಂದಿಗೆ ಇದ್ದ ಸಭ್ಯ ಜನರಾಗಿದ್ದರು"[4] ಎಂಬ ಮುಕ್ತಾಯಕ್ಕೆ ಬರುತ್ತಾನೆ. ಬಹುಶಃ ಅವರು "ಒಂದು ಮೂಲೆಯಲ್ಲಿ ಕೂಡಿ ಬರುತ್ತಿದ್ದ ಸಭ್ಯರಾದ, ಹಾನಿಕಾರಕವಲ್ಲದೆ ಧಾರ್ಮಿಕ ಗುಂಪು" ಎಂದು ಪರಿಗಣಿಸಲ್ಪಟ್ಟಿದ್ದರು. ಅವರು ಪಾಪದೊಂದಿಗೆ ಆಕ್ರಮಣ ಮಾಡದಿರುವಿಕೆಯ ಒಪ್ಪಂದವನ್ನು ಮಾಡಿಕೊಂಡಿದ್ದರು - ಹೀಗೆ ಸೈತಾನನು ಅವರನ್ನು ಅವರ ಪಾಡಿಗೆ ಬಿಟ್ಟು ಬಿಡುವವನಾಗಿದ್ದನು.

ಸಾರ್ದಿಸಿನಲ್ಲಿರುವ ಸಭೆಯು ಮಾರಕವಾಗಿ ವ್ಯಾಧಿಗೊಳಗಾಗಿ ಇದ್ದಿರಬಹುದು, ಆದರೆ ಕರ್ತನು ಮೊದಲು ಆತ್ಮೀಕ CPR ಕೊಟ್ಟು ಪ್ರಯತ್ನಿಸುವ ಮುಂಚೆಯೇ ಮರಣ ಪ್ರಮಾಣ ಪತ್ರವನ್ನು ಕೊಡುವವನಾಗಿರಲಿಲ್ಲ. ಆತನ ಭಾವೋದ್ರಿಕ್ತ ಮನವಿಯನ್ನು ಕೇಳಿಸಿಕೊಳ್ಳಿರಿ: **ಎಚ್ಚರವಾಗಿರು; ಸಾಯುವ ಹಾಗಿರುವ ಉಳಿದವುಗಳನ್ನು ದೃಢಪಡಿಸು. ಉಳಿದವುಗಳನ್ನು** ಎಂಬುದು ಸಭೆಯಲ್ಲಿ ಇನ್ನೂ ಜೀವಂತವಾಗಿರುವ *ಯಾವದೇ ಸಂಗತಿ* ಎಂದು ಸೂಚಿಸುತ್ತದೆ - ಅವರ ಹೃದಯಗಳಲ್ಲಿ ಉಳಿದಿರುವ ಯಾವದೇ ಆತ್ಮೀಕ ಜೀವಿತದ ಕಿಡಿ, ಅವರ ಸತ್ಯದ ಕುರಿತ ಜ್ಞಾನ, ಮತ್ತು ಸಭೆಯವರಲ್ಲಿ ಇನ್ನೂ ನಂಬಿಗಸ್ತರಾಗಿರುವ ಯಾರಾದರೂ ಮಿಕ್ಕವರನ್ನು ಪ್ರೇರಣೆಗೊಳಿಸಿ ಪ್ರೋತ್ಸಾಹ ಮಾಡುವಂಥವರು.

ಯೇಸು ಈಗಾಗಲೇ ಅವರನ್ನು "ಸತ್ತವನಾಗಿದ್ದೀ" ಎಂದು ಘೋಷಣೆ ಮಾಡಿದ್ದನಾದ್ದರಿಂದ, ಆತನು "ಸಾಯುವ ಹಾಗಿರುವ *ಉಳಿದವುಗಳನ್ನು* ದೃಢಪಡಿಡು" ಎಂದು ಕರೆ ನೀಡುವದು ಒಂದು ಆಶ್ಚರ್ಯವೆಂಬಂತೆ ತೋರಬಹುದಾಗಿದೆ. ಅವರು ಸತ್ತವರಾಗಿಯೂ ಅದೇ ವೇಳೆಯಲ್ಲಿ ಸಾಯದೆಯೂ ಹೇಗೆ ಇರುವದಕ್ಕೆ ಸಾಧ್ಯವಿತ್ತು? ಮಹಾನ್ ವೈದ್ಯನು ಎಂದಿಗೂ ನಿರೀಕ್ಷೆಯನ್ನು ಕಳೆದುಕೊಳ್ಳುವದಿಲ್ಲ. ಆತನು ಎಂದಿಗೂ "ಬಹುಶಃ ಸ್ವಲ್ಪ ನಿರೀಕ್ಷೆಯಿರಬಹುದು" ಎಂದು ಹೇಳುವದಿಲ್ಲ. ಬದಲಾಗಿ, ಆತನು "ನಿರೀಕ್ಷೆ ಇರುತ್ತದೆ - ನೀವು ನನ್ನ ಅಪ್ಪಣೆಗಳನ್ನು ಅನುಸರಿಸುವದಾದರೆ" ಎಂದು ಹೇಳುವನು.

ಸಾರ್ದಿಸಿನಲ್ಲಿರುವ ಸಭೆಯ ಸದಸ್ಯರು ಏನು ಮಾಡಬೇಕಾದ ಅಗತ್ಯವಿತ್ತು? ಮೊದಲನೆಯದಾಗಿ, ಅವರಿಗೆ *ಎಚ್ಚರಗೊಳ್ಳಿರಿ*, *ಗ್ರಹಿಸಿಕೊಳ್ಳಿರಿ*, ಮತ್ತು *ಗುರುತಿಸಿಕೊಳ್ಳಿರಿ* ಎಂದು ಹೇಳಲಾಯಿತು. ಯೇಸು ಹೀಗೆ ಹೇಳಿದನು "ಎಚ್ಚರವಾಗಿರು; . . . ಉಳಿದವುಗಳನ್ನು

ದೃಢಪಡಿಸು." **ಎಚ್ಚರವಾಗಿರು** ಎಂಬುದನ್ನು ಅನುವಾದಿಸಿರುವ γίνου γρηγορῶν (*ginou grēgorōn*) ಎಂಬ ಗ್ರೀಕ್ ಪದವು ವರ್ತಮಾನಕಾಲರೂಪದಲ್ಲಿ ಇದ್ದು ಮುಂದುವರೆಯುವ ಕ್ರಿಯೆಯನ್ನು ಸೂಚಿಸುತ್ತದೆ: ಅವರು ಕೇವಲ "ಎಚ್ಚರವಾಗಿ" ಇರುವ ಅಗತ್ಯತೆಯು ಮಾತ್ರವೇ ಇರಲಿಲ್ಲ, ಆದರೆ *ನಿರಂತರವಾಗಿ* ಎಚ್ಚರಿಕೆಯಿಂದಿರುವ ಅಗತ್ಯತೆಯೂ ಇತ್ತು. ಯಾರೋ ಒಬ್ಬರು ಹೀಗೆ ಹೇಳಿದ್ದಾರೆ, "ನಿತ್ಯವಾಗಿ ಎಚ್ಚರಿಕೆಯಿಂದಿರುವದು ಸ್ವಾತಂತ್ರ್ಯದಮ ಬೆಲೆಯಾಗಿರುತ್ತದೆ." ಅವರು ತಮ್ಮ ಆತ್ಮೀಕ ಸ್ಥಿತಿಯ ಕುರಿತು "ಎಚ್ಚರವಾಗಿರುವ" ಅಗತ್ಯವಿತ್ತು (ನೋಡಿರಿ ರೋಮಾ 13:11-14; ಎಫೆಸ 5:14), ತಾವು ಗತಕಾಲದ ಮಹಿಮೆಯಲ್ಲಿ ಜೀವಿಸುತ್ತಿದ್ದಾರೆಂಬುದನ್ನು ಗ್ರಹಿಸಿಕೊಳ್ಳಬೇಕಿತ್ತು, ಮತ್ತು ತಮ್ಮ ಆತ್ಮೀಕ ಅಪಾಯವನ್ನು ಗುರುತಿಸಿಕೊಳ್ಳಬೇಕಿತ್ತು. ಗತಕಾಲ*ದಿಂದ ಕಲಿತುಕೊಳ್ಳುವದು* ಬಯಸತಕ್ಕದ್ದೇ, ಆದರೆ ಗತಕಾಲ*ದಲ್ಲಿ ಜೀವಿಸುವದು* ವಿನಾಶಕರವಾದದ್ದು.

**ವಚನ 3.** ಎರಡನೆಯದಾಗಿ, ಅವರಿಗೆ *ನೆನಪಿಗೆ ತಂದುಕೋ*, *ಕಾಪಾಡಿಕೋ*, ಮತ್ತು *ಪಶ್ಚಾತ್ತಾಪ ಪಡು* ಎಂದು ಅಪ್ಪಣೆ ಕೊಡಲಾಯಿತು. ಯೇಸು ಹೀಗೆ ಹೇಳಿದನು, **ಆದದರಿಂದ ನೀನು ಹೊಂದಿದ ಉಪದೇಶವನ್ನೂ ಅದನ್ನು ಕೇಳಿದ ರೀತಿಯನ್ನೂ ನೆನಪಿಗೆ ತಂದುಕೊಂಡು ಅದನ್ನು ಕಾಪಾಡಿಕೋ ಮತ್ತು ದೇವರ ಕಡೆಗೆ ತಿರುಗಿಕೋ** (ನೋಡಿರಿ 2:5). **ನೆನಪಿಗೆ ತಂದುಕೊಂಡು** ಎಂಬುದನ್ನು ಅನುವಾದಿಸಿರುವ μνημονεύω (*mnēmoneuō*) ಎಂಬ ಗ್ರೀಕ್ ಪದವು ಕೇವಲ ಜ್ಞಾಪಿಸಿಕೊಳ್ಳುವದು ಎಂದಷ್ಟೇ ಅರ್ಥವನ್ನು ಕೊಡುವದಿಲ್ಲ, ಆದರೆ ಮನಸ್ಸಿನಲ್ಲಿ *ಇಟ್ಟುಕೊಳ್ಳುವದನ್ನು* ಸೂಚಿಸುತ್ತದೆ. **ಕಾಪಾಡಿಕೋ** ಎಂಬುದನ್ನು ಅನುವಾದಿಸಿರುವ τηρέω (*tēreō*) ಎಂಬ ಗ್ರೀಕ್ ಪದವು ವರ್ತಮಾನಕಾಲ ಆಜ್ಞಾರ್ಥಕರೂಪದಲ್ಲಿದ್ದು, ಅವರು ಈ ಸಂಗತಿಗಳನ್ನು *ನಿರಂತರವಾಗಿ* ಹಿಡಿದುಕೊಂಡಿರಬೇಕಾದ ಅಗತ್ಯತೆಯಿರುತ್ತದೆಂಬುದನ್ನು ಒತ್ತಿ ಹೇಳುತ್ತದೆ. ಅವರು ತಾವು ಕೇಳಿಸಿಕೊಂಡ ಬೋಧನೆಯನ್ನು ನೆನಪಿಸಿಕೊಳ್ಳಬೇಕಾಗಿರುವಾಗ ಅವರಾದರೋ ತಮಗೆ ಸಿಕ್ಕ ಪ್ರಶಂಸೆಗಳನ್ನು ನೆನಪಿಸಿಕೊಳ್ಳುತ್ತಲಿದ್ದರು. ಅವರು ನಂಬಿಕೆಯ ಪ್ರಾಥಮಿಕ ವಿಷಯಗಳ ಕಡೆಗೆ ಹಿಂದಿರುಗಿ ಹೋಗಬೇಕಾದ ಮತ್ತು ಆ ಸತ್ಯಗಳನ್ನು ಹಿಡಿದುಕೊಂಡಿರಬೇಕಾದ ಅಗತ್ಯವಿತ್ತು. ಬಳಿಕ, ಅವರು ತಮ್ಮ ಸ್ವಸಂತುಷ್ಟಿಗಾಗಿ ಪಶ್ಚಾತ್ತಾಪ ಪಟ್ಟು ಅವಶ್ಯಕವಾದ ಬದಲಾವಣೆಗಳನ್ನು ಮಾಡಿಕೊಳ್ಳಲು ಶಕ್ತರಾಗುವವರಾಗಿದ್ದರು.

ಅವರು ಕರ್ತನ ಅಪ್ಪಣೆಗಳನ್ನು ನಿರ್ಲಕ್ಷ್ಯ ಮಾಡಿದ್ದರೆ ಏನಾಗುವದು? ಯೇಸು ಹೀಗೆ ಎಚ್ಚರಿಕೆ ಕೊಟ್ಟನು, **ನೀನು ಎಚ್ಚರವಾಗಿಲ್ಲದಿದ್ದರೆ ಕಳ್ಳನು ಬರುವಂತೆ ಬರುವೆನು; ನಾನು ಯಾವ ಗಳಿಗೆಯಲ್ಲಿ ನಿನ್ನ ಮೇಲೆ ಬರುವೆನೋ ಅದು ನಿನಗೆ ತಿಳಿಯುವದೇ ಇಲ್ಲ.** ಬೇರೊಂದು ಕಡೆಯಲ್ಲಿ ಒಬ್ಬ ಕಳ್ಳನು ಅನಿರೀಕ್ಷಿತವಾಗಿ ಬರುವ ದೃಷ್ಟಾಂತವನ್ನು *ಎರಡನೆಯ ಬರೋಣ*ದ ಗಳಿಗೆಯು ಯಾವ ಮನುಷ್ಯನಿಗೂ ತಿಳಿಯದು ಎಂಬುದನ್ನು ಒತ್ತಿ ಹೇಳುವದಕ್ಕೆ ಬಳಸಲಾಗಿದೆ (ಮತ್ತಾಯ 24:42-44; ಲೂಕ 12:39, 40; 1 ಥೆಸಲೋನಿಕ 5:2, 4; 2 ಪೇತ್ರ 3:10). ಹೇಗೂ, ಪ್ರಕಟನೆ 3:3ರಲ್ಲಿ "ಇದು ಸ್ಪಷ್ಟವಾಗಿ ಪಶ್ಚಾತ್ತಾಪ ಪಡದ ಪಾಪಿಗಳ ಮೇಲೆ ನ್ಯಾಯತೀರ್ಪಿನೊಂದಿಗೆ *ಒಂದು ಮಿತಿಯಾದ ಬರುವಿಕೆ* ಆಗಿರುತ್ತದೆ."[5] ಪರ್ಶಿಯನ್ನರು ಬೆಟ್ಟದ ಇಳಿಜಾರುಗಳನ್ನು ಏರಿ ಹೋಗಿ ಸಾರ್ದಿಸಿನ ನಾಗರೀಕರು ಸಿದ್ಧರಾಗಿಲ್ಲದಿರುವದನ್ನು ಕಂಡ ಪ್ರಕಾರವೇ, ಅವರು ಆತನನ್ನು ಎದುರು ನೋಡಿರದ ಗಳಿಗೆಯಲ್ಲಿ ಯೇಸುವು ಬರಲಿದ್ದನು. ಸಾರ್ದಿಸಿನಲ್ಲಿನ ಸಭೆಯು ಆತನ ಬರೋಣಕ್ಕೆ ಸಿದ್ಧತೆಯಿಲ್ಲದರೆ ಇರುವದಾದರೆ ಫಲಿತಗಳು ವಿನಾಶಕರವಾಗಿರಲಿದ್ದವು. ಮುಂಚಿನ ಪತ್ರಗಳಲ್ಲಿ, ತಾನು ಬಂದಾಗ ಏನು ಮಾಡುವನೆಂಬ ಬಗ್ಗೆ ಯೇಸುವು ಹೇಳಿದ್ದನು (2:5, 16). ಆತನು ಸಾರ್ದಿಸಿನಲ್ಲಿದ್ದ ಪಶ್ಚಾತ್ತಾಪ ಪಡದವರಿಗೆ ಯಾವ ವಿವರಗಳನ್ನೂ

ನೀಡಲಿಲ್ಲ, ಆದರೆ "ಅವರ ಗತಿಯು ವಿವರಿಸಲ್ಪಡದೆ ಬಿಟ್ಟಿದೆ ಎಂಬ ಕಾರಣಕ್ಕೆ ಕಡಿಮೆ ಭಯಾನಕವಾಗಿರುವದಿಲ್ಲ."[6]

**ವಚನ 4.** ಯೇಸುವು ಸಭೆಯ ರೋಗಗಳನ್ನು ಬಯಲುಗೊಳಿಸಿ ಪರಿಹಾರೋಪಾಯವನ್ನು ಕೊಟ್ಟಿದ್ದನಾದ್ದರಿಂದ, ಆತನು ಆ ಹಂತದಲ್ಲಿ ಜಯ ಹೊಂದುವವರಿಗೆ ವಾಗ್ದಾನಗಳನ್ನು ಮಾಡುವದರೊಂದಿಗೆ ಪತ್ರವನ್ನು ಮುಕ್ತಾಯಗೊಳಿಸಿರಬಹುದಿತ್ತು. ಹೇಗೂ, ಆತನು ಅದನ್ನು ಮಾಡುವದಕ್ಕೆ ಮುಂಚೆ, ಆತನು ಸಭೆಯಲ್ಲಿದ್ದ ನಂಬಿಗಸ್ತರಾದ ಕೆಲವರಿಗೆ ಮನ್ನಣೆಯನ್ನು ಕೊಡುವದಕ್ಕೆ ಬಯಸಿದ್ದನು: **ಆದರೂ ತಮ್ಮ ವಸ್ತ್ರಗಳನ್ನು ಮೈಲಿಗೆ ಮಾಡಿಕೊಳ್ಳದಿರುವ ಸ್ವಲ್ಪ ಜನರು ಸಾರ್ದಿಸಿನೊಳಗೆ ನಿನ್ನಲ್ಲಿದ್ದಾರೆ.**

**ವಸ್ತ್ರಗಳು** ಎಂಬುದು ಕ್ರೈಸ್ತರ ಜೀವಿತಗಳನ್ನು ಸೂಚಿಸುತ್ತದೆ. ಅದೇ ರೀತಿಯ ಸಾಂಕೇತಿಕ ಭಾಷೆಯು ಬೈಬಲಿನುದ್ದಕ್ಕೂ ಸಿಕ್ಕುತ್ತದೆ (ನೋಡಿರಿ ಗಲಾತ್ಯ 3:27; ಎಫೆಸ 4:22, 24; ಪ್ರಕಟನೆ 7:9). **ಮೈಲಿಗೆ** ಎಂಬುದನ್ನು ಅನುವಾದಿಸಿರುವ μολύνω (*molunō*) ಎಂಬ ಗ್ರೀಕ್ ಪದದ ಅರ್ಥವು ಕೈ ತಪ್ಪಿ ಏನೋ ಒಂದು ಬಿದ್ದು ಆಗಿರುವ ಚಿಕ್ಕ ಕಲೆ ಎಂದಾಗಿರುವದಿಲ್ಲ. ಬದಲಾಗಿ, ಈ ಪದವು ಹೊಲಸಿನಿಂದ ಲೇಪಿಸಿಕೊಂಡಿರುವದು, ಮಣ್ಣು ಮತ್ತು ಕೆಸರಿನಲ್ಲಿ ಹೊರಳಾಡುವದರ ಫಲಿತವಾಗಿ ಹೊಲಸಾಗುವ ರೀತಿಯನ್ನು ಸೂಚಿಸುತ್ತದೆ. KJVಯಲ್ಲಿ "ಹೊಲೆಮಾಡಿಕೊಂಡ" ಎಂದಿದ್ದು ಅದು "ಮೈಲಿಗೆ" ಎಂಬುದಕ್ಕಿಂತ ಬಲವಾದ ಪದವೆಂದು ತೋರುತ್ತದೆ ಮತ್ತು ಗ್ರೀಕ್ ಪದದ ಅರ್ಥವಿವರಣೆಗೆ ಅನುಗುಣವಾಗಿರುತ್ತದೆ. ಸಾರ್ದಿಸ್ ಪಟ್ಟಣವು, ಅನ್ಯಧರ್ಮಿಯ ಲೇಖಕರ ಮಧ್ಯದಲ್ಲಿ ಸಹ ಅದರ ಅನೈತಿಕತೆಗೆ (ಜಾರತ್ವಕ್ಕೆ) ಹೆಸರುವಾಸಿಯಾಗಿತ್ತು. ಖಂಡಿತವಾಗಿಯೂ ತಮ್ಮ ಸುತ್ತಲಿರುವ ಸಂಸ್ಕೃತಿಯ ಅಲೆಗಳಲ್ಲಿ ಕೊಚ್ಚಿಕೊಂಡು ಹೋಗದಂತೆ ಇರುವದು ಕ್ರೈಸ್ತರಿಗೆ ಒಂದು ಹೋರಾಟವಾಗಿತ್ತು. ಹಾಗಿದ್ದರೂ, ಕೊಚ್ಚಿಕೊಂಡು ಹೋಗದೆ ಇದ್ದ **ಸ್ವಲ್ಪ ಜನರು** (ಕ್ರೈಸ್ತರು) **ಸಾರ್ದಿಸಿನೊಳಗೆ** ಇದ್ದರು.

ದೇವರು ಯಾವಾಗಲೂ ತನಗೆ ನಂಬಿಗಸ್ತರಾದ ಕೆಲವರನ್ನಾದರೂ ಹೊಂದಿದ್ದನು. ಭಕ್ತಿಹೀನತೆಯ ದಿನದಲ್ಲಿ, ದೇವರಿಗೆ ನೋಹ ಮತ್ತು ಆತನ ಕುಟುಂಬವು ಇತ್ತು. ವಿಗ್ರಹಾರಾಧನೆಯ ದಿನವೊಂದರಲ್ಲಿ, ದೇವರು ತನಗಾಗಿ ಅಬ್ರಹಾಮ ಮತ್ತು ಆತನ ಸಂತತಿಯನ್ನು ಹೊಂದಿದ್ದನು. ಸೊದೋಮ ಮತ್ತು ಗೊಮೋರ ಪಟ್ಟಣಗಳಲ್ಲಿ ಸಹ, ದೇವರು "ನೀತಿವಂತನಾದ ಲೋಟ" ನನ್ನು ಹೊಂದಿದ್ದನು (2 ಪೇತ್ರ 2:7). ಯೇಸು ಹೀಗೆ ಹೇಳಿದನು, "ನಿತ್ಯಜೀವಕ್ಕೆ ಹೋಗುವ ಬಾಗಲು ಇಕ್ಕಟ್ಟು, ದಾರಿ ಬಿಕ್ಕಟ್ಟು; ಅದನ್ನು ಕಂಡುಹಿಡಿಯುವವರು *ಸ್ವಲ್ಪ ಜನ*" (ಮತ್ತಾಯ 7:14; ಒತ್ತಿ ಹೇಳಿದ್ದು ನನ್ನದು). ಅದೇ ರೀತಿಯಲ್ಲಿಯೇ, ನಂಬಿಗಸ್ತರಾಗಿ ಉಳಿದಿದ್ದ ಸ್ವಲ್ಪ ಜನರು ದೇವರಿಗಾಗಿ ಸಾರ್ದಿಸಿನ ಸಭೆಯಲ್ಲಿದ್ದರು.

ಯೇಸುವು ಸ್ವಲ್ಪ ಜನರಿಗೆ ಈ ವಾಗ್ದಾನವನ್ನು ಕೊಟ್ಟನು, **ಶುಭ್ರವಸ್ತ್ರಗಳನ್ನು ಧರಿಸಿಕೊಂಡು ನನ್ನ ಸಂಗಡ ನಡೆಯುವರು.** ಒಬ್ಬರ ಸಂಗಡ ನಡೆಯುವದೆಂದರೆ ಅದು ಸಹವಾಸ, ಅನ್ಯೋನ್ಯತೆ, ಮತ್ತು ಒಮ್ಮತವನ್ನು ಸೂಚಿಸುತ್ತದೆ (ನೋಡಿರಿ ಆದಿಕಾಂಡ 5:22, 24; 6:9; ಆಮೋಸ 3:3). **ಶುಭ್ರವು** ಶುದ್ಧತೆ, ಸಂಭ್ರಮ, ಮತ್ತು ವಿಜಯಕ್ಕೆ ಸಂಬಂಧಿಸಿದ್ದಾಗಿದೆ. "ಶುಭ್ರವಸ್ತ್ರಗಳನ್ನು ಧರಿಸಿಕೊಂಡು" ಯೇಸುವಿನ ಸಂಗಡ ನಡೆಯುವದೆಂದರೆ ಆತನ ವಿಜಯದಲ್ಲಿ ಪಾಲುಗಾರರಾಗುವದು ಎಂದರ್ಥವಾಗಿದೆ. ಇಲ್ಲಿ, ಯೇಸು ಈಗಷ್ಟೆ ಯುದ್ಧದಲ್ಲಿ ಜಯಶಾಲಿಗಳಾಗಿ ಹಿಂದಿರುಗಿರುವ ತನ್ನ ಸಂಗಡಿಗರ ಜೊತೆಯಲ್ಲಿ ಅರಸನು ವಿಜಯೋತ್ಸಾಹದಿಂದ ಪ್ರವೇಶಿಸುವ ದೃಶ್ಯವನ್ನು ಬಣ್ಣಿಸುತ್ತಾನೆ (ನೋಡಿರಿ 2 ಕೊರಿಂಥ 2:14).

ಬಳಿಕ ಯೇಸು **ಯೋಗ್ಯರಾಗಿರುವದರಿಂದ** ಎಂದು ಸೇರಿಸಿ ಹೇಳುತ್ತಾನೆ. ಅವರು ಪರಿಪೂರ್ಣರಾಗಿದ್ದರೆಂದು ಈ ಪದಗುಚ್ಛದ ಅರ್ಥವಲ್ಲ, ಯಾಕೆಂದರೆ ನಾವೆಲ್ಲರೂ ಪಾಪಿಗಳಾಗಿದ್ದೇವೆ (ರೋಮಾ 3:10, 23) ಮತ್ತು ನಮ್ಮಲ್ಲಿ ಯಾರೂ ದೇವರ ಆಶೀರ್ವಾದಗಳಿಗೆ ಅರ್ಹರಲ್ಲ (ನೋಡಿರಿ ಆದಿಕಾಂಡ 32:10; ಲೂಕ 17:10). ಬದಲಾಗಿ, "ದೇವರ ವಾಕ್ಯವು ಕೆಲವೊಂದು ಯೋಗ್ಯತೆಯನ್ನು ಮನುಷ್ಯನಿಗೆ ಅನ್ವಯಿಸುತ್ತದೆ, ಅದು ಎಂದಿಗೂ ಸಂಪೂರ್ಣವಾದದ್ದಲ್ಲ ಆದರೆ ಯಾವಾಗಲೂ ಸಂಬಂಧ ಸೂಚಕವಾಗಿರುತ್ತದೆ."[7] (ನೋಡಿರಿ ಪ್ರಕಟನೆ 5:2-4.) ಕಷ್ಟಕರವಾದ ಪರಿಸ್ಥಿತಿಗಳ ನಡುವೆಯೂ ಧೀರತನದ ಪ್ರಯಾಸಗಳನ್ನು ಪಡುತ್ತಿದ್ದವರಿಗೆ ಯೇಸುವಿನ ಮಾತುಗಳು ಪ್ರಶಂಸೆಯನ್ನು ವ್ಯಕ್ತಪಡಿಸುವವುಗಳಾಗಿದ್ದವು. ನಮ್ಮ ಸುತ್ತಲಿರುವವರೆಲ್ಲಾ - ಇತರ ಕ್ರೈಸ್ತರು ಸಹ - ಅಪನಂಬಿಗಸ್ತರಾಗಿರುವ ವೇಳೆ ನಂಬಿಗಸ್ತರಾಗಿರುವದೆಂದರೆ ಅಷ್ಟು ಸುಲಭವಾಗಿರುವದಿಲ್ಲ. ನಂಬಿಗಸ್ತರಾಗಿರುವ ಸ್ವಲ್ಪ ಜನರಿಗೋಸ್ಕರ ದೇವರಿಗೆ ಸ್ತೋತ್ರವಾಗಲಿ!

**ವಚನ 5.** ಸಾರ್ದಿಸಿನಲ್ಲಿರುವ ಬಹಳಷ್ಟು ಮಂದಿಗೆ ಪರಿಸ್ಥಿತಿಯು ನಿರೀಕ್ಷೆರಹಿತವಾಗಿತ್ತೆಂದು ಯೇಸುವು ಹೇಳುತ್ತಿದ್ದಾನೋ? ಇಲ್ಲವೇ ಇಲ್ಲ. ಅವರು "ಎಚ್ಚರವಾಗುವರು" ಮತ್ತು "ದೇವರ ಕಡೆಗೆ ತಿರುಗಿಕೊಳ್ಳುವರು" (ವಚನಗಳು 2, 3), ಅವರು ನಂಬಿಗಸ್ತರಾದ ಸ್ವಲ್ಪ ಜನರಿಗಾಗಿ ವಾಗ್ದಾನ ಮಾಡಿದ ಅದೇ ಆಶೀರ್ವಾದಗಳನ್ನು ಹೊಂದುವದಕ್ಕೆ ಸಾಧ್ಯವಿತ್ತು: **ಜಯಶಾಲಿಗೆ ಹೀಗೆ ಶುಭ್ರವಸ್ತ್ರಗಳನ್ನು ಹೊದಿಸುವರು. ಜೀವಬಾಧ್ಯರ ಪಟ್ಟಿಯಿಂದ ಅವನ ಹೆಸರನ್ನು ನಾನು ಅಳಿಸಿಬಿಡದೆ ಅವನು ನನ್ನವನೆಂದು ನನ್ನ ತಂದೆಯ ಮುಂದೆಯೂ ಆತನ ದೂತರ ಮುಂದೆಯೂ ಒಪ್ಪುವೆನು.**

ಜಯಶಾಲಿಗಳಿಗೆ ಯೇಸು *ಆತ್ಮೀಕ ವಸ್ತ್ರಗಳನ್ನು* ವಾಗ್ದಾನ ಮಾಡಿದನು: **ಜಯಶಾಲಿಗೆ ಹೀಗೆ ಶುಭ್ರವಸ್ತ್ರಗಳನ್ನು ಹೊದಿಸುವರು.** ಇವುಗಳು ನಂಬಿಗಸ್ತರಾದ ಸ್ವಲ್ಪ ಜನರಿಗೆ ವಾಗ್ದಾನ ಮಾಡಲ್ಪಟ್ಟ ಅದೇ ವಸ್ತ್ರಗಳೇ ಆಗಿರುತ್ತವೆ (ವ. 4) - ಯಜ್ಞದ ಕುರಿಯಾದಾತನ ರಕ್ತದಲ್ಲಿ ತೊಳೆಯಲ್ಪಟ್ಟ ವಸ್ತ್ರಗಳು (7:14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ವಿಪರ್ಯಾಸವೆಂದರೆ, ಸಾರ್ದಿಸ್ ಪಟ್ಟಣವು ತನ್ನ ಗಾಢ-ಬಣ್ಣದ ಉಡುಪುಗಳಿಗಾಗಿ ಪ್ರಸಿದ್ಧವಾಗಿತ್ತು. ಉಣ್ಣೆಗೆ ಬಣ್ಣವನ್ನು ಹಾಕುವ ಕಲೆಯು ಆ ಪಟ್ಟಣದಿಂದಲೇ ಉಗಮವಾಗಿರಬಹುದಾಗಿದೆ.

ಯೇಸುವು ಜಯಶಾಲಿಗೆ *ಒಂದು ಗಮನಾರ್ಹವಾದ ನಿರಂತರತೆಯನ್ನು* ವಾಗ್ದಾನ ಮಾಡುತ್ತಾನೆ: **ಜೀವಬಾಧ್ಯರ ಪಟ್ಟಿಯಿಂದ ಅವನ ಹೆಸರನ್ನು ನಾನು ಅಳಿಸಿ ಬಿಡದೆ.** ಜೀವಬಾಧ್ಯರ ಪಟ್ಟಿಯು ದೇವರಿಗೆ ನಂಬಿಗಸ್ತರಾದ ಜನರ ಹೆಸರುಗಳಿರುವ ದಾಖಲೆಯಾಗಿರುತ್ತದೆ (ಕೀರ್ತನೆ 69:28; ಮಲಾಕಿ 3:16; ಇಬ್ರಿಯ 12:23) ಮತ್ತು ಅದು ಶಾಸ್ತ್ರಗಳುದ್ದಕ್ಕೂ ಪ್ರಸ್ತಾಪಿಸಲ್ಪಟ್ಟಿದೆ. ಮೋಶೆಯು ಇಸ್ರಾಯೇಲ್ಯರಿಗೋಸ್ಕರ ದೇವರ ಮುಂದೆ ಮೊರೆಯಿಡುತ್ತಿರುವ ವೇಳೆ, ಆತನು ಹೀಗೆ ಹೇಳಿದನು, "ಆದರೂ ನೀನು ಕರುಣವಿಟ್ಟು ಅವರ ಪಾಪಗಳನ್ನು ಕ್ಷಮಿಸಬೇಕು. ಇಲ್ಲವಾದರೆ ನೀನು ಬರೆದಿರುವ [ಜೀವಿತರ] ಪಟ್ಟಿಯಿಂದ ನನ್ನ ಹೆಸರನ್ನೂ ಅಳಿಸಿಬಿಡಬೇಕೆಂದು ಕೇಳಿಕೊಳ್ಳುತ್ತೇನೆ." ಅದಕ್ಕೆ ಪ್ರತ್ಯುತ್ತರವಾಗಿ ದೇವರು ಹೀಗೆ ಹೇಳಿದನು, "ಯಾರಾರು ನನ್ನ ಮಾತನ್ನು ಮೀರಿ ಪಾಪಮಾಡಿದ್ದಾರೋ ಅವರ ಹೆಸರುಗಳನ್ನೇ ನನ್ನ ಬಳಿಯಲ್ಲಿರುವ ಪಟ್ಟಿಯಿಂದ ನಾನು ಅಳಿಸಿಬಿಡುವೆನು" (ವಿಮೋಚನಕಾಂಡ 32:32, 33). ಎಪ್ಪತ್ತು ಮಂದಿ ಶಿಷ್ಯರು ಒಂದು ಬೋಧನೆಯ ಪ್ರವಾಸವನ್ನು ಮುಗಿಸಿಕೊಂಡು ಹಿಂದಿರುಗಿ ಬಂದ ವೇಳೇ, ಯೇಸು ಅವರಿಗೆ ಹೀಗೆ ಹೇಳಿದನು, "ಆದರೂ ದೆವ್ವಗಳು ನಮಗೆ ಅಧೀನವಾಗಿವೆ ಎಂದು ಸಂತೋಷಪಡದೆ ನಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆ

ಎಂದು ಸಂತೋಷಪಡಿರಿ" (ಲೂಕ 10:20). ಫಿಲಿಪ್ಪಿ 4:3ರಲ್ಲಿ ಪೌಲನು ತನ್ನ ಜೊತೆಗೆಲಸದವರ ಕುರಿತು ಹೀಗೆ ಬರೆದನು, "ಅವರು . . . ನನ್ನ ಕೂಡ ಸುವಾರ್ತೆಗೋಸ್ಕರ ಪ್ರಯಾಸ ಪಟ್ಟವರು, ಅವರವರ ಹೆಸರುಗಳು ಜೀವಬಾಧ್ಯರ ಪಟ್ಟಿಯಲ್ಲಿ ಬರೆದವೆ." ಪ್ರಕಟನೆ 20ನೇ ಅಧ್ಯಾಯದಲ್ಲಿ ಮಹಾ ನ್ಯಾಯತೀರ್ಪಿನ ದಿನದ ದೃಶ್ಯದಲ್ಲಿ, ನಾವು ಹೀಗೆ ಓದುತ್ತೇವೆ:

> ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವದನ್ನು ಕಂಡೆನು. ಆಗ ಪುಸ್ತಕಗಳು ತೆರೆಯಲ್ಪಟ್ಟವು; ಮತ್ತು ಜೀವಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು. ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು . . . ಯಾವನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು (20:12, 15).

"ಯಜ್ಞದ ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಯಾರಾರ ಹೆಸರುಗಳು ಬರೆದವೆಯೋ" ಅವರು ಮಾತ್ರವೇ ಪರಲೋಕವನ್ನು ಪ್ರವೇಶಿಸುವವರಾಗಿದ್ದಾರೆ (21:27; ನೋಡಿರಿ 13:8; 17:8). ನಾವು ರಕ್ಷಣೆ ಹೊಂದಿದ ವೇಳೆ (ಮಾರ್ಕ 16:16), ನಮ್ಮ ಹೆಸರುಗಳು ಜೀವಬಾಧ್ಯರ ಪಟ್ಟಿಯಲ್ಲಿ ಬರೆಯಲ್ಪಡುತ್ತವೆ. ಹೇಗೂ, ನಾವು ಕರ್ತನಿಗೆ ನಂಬಿಗಸ್ತರಾಗಿ ಉಳಿಯದೆ ಹೋದರೆ ನಮ್ಮ ಹೆಸರುಗಳು ಅಳಿಸಿ ಹಾಕಲ್ಪಡುವವು (ನೋಡಿರಿ ಯಾಕೋಬ 5:19, 20).

ಅಂತಿಮವಾಗಿ, ಯೇಸುವು ಜಯಶಾಲಿಗಳಿಗೆ *ಒಂದು ವಿಶೇಷವಾದ ಅರಿಕೆ*ಯ ವಾಗ್ದಾನವನ್ನು ಮಾಡಿದನು: **ಅವನು ನನ್ನವನೆಂದು ನನ್ನ ತಂದೆಯ ಮುಂದೆಯೂ ಆತನ ದೂತರ ಮುಂದೆಯೂ ಒಪ್ಪುವೆನು.** ಯೇಸುವು ಭೂಮಿಯ ಮೇಲಿನ ತನ್ನ ಸೇವೆಯ ವೇಳೆ ಈ ವಾಗ್ದಾನವನ್ನು ಮಾಡಿದ್ದನು:

> ಹಾಗಾದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ, ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು. ಆದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನ್ನವೆಂದು ಹೇಳುವನೋ ಅವನನ್ನು ನಾನು ಸಹ ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನನ್ನವನಲ್ಲವೆಂದು ಹೇಳುವೆನು (ಮತ್ತಾಯ 10:32, 33; ನೋಡಿರಿ ಲೂಕ 12:8, 9).

ನಾವು ಯೇಸುವಿನಲ್ಲಿ ನಮ್ಮ ನಂಬಿಕೆಯನ್ನು ಅರಿಕೆ ಮಾಡಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ಆತನು ನಮ್ಮ ಹೆಸರುಗಳನ್ನು ಅರಿಕೆ ಮಾಡುವನು (ಅಪೊಸ್ತಲರ ಕೃತ್ಯಗಳು 8:37-39; ರೋಮಾ 10:9, 10), ಆದರೆ ಅದು ಆತನ ವಾಗ್ದಾನವನ್ನು ಮುಗಿದು ಹೋಗುವಂತೆ ಮಾಡುವದಿಲ್ಲ. ನಮಗೆ ಆತನನ್ನು ಅರಿಕೆ ಮಾಡುವದಕ್ಕೆ ಅಥವಾ ನಿರಾಕರಣೆ ಮಾಡುವದಕ್ಕೆ ಅವಕಾಶವು ದೊರೆಯದೆ ಒಂದು ದಿನವೂ ಗತಿಸಿ ಹೋಗುವದಕ್ಕೆ ಸಾಧ್ಯವಿಲ್ಲ. ಈ ಪರಿಸ್ಥಿತಿಯು ವಿಶೇಷವಾಗಿ ಪ್ರಥಮ ಶತಮಾನದ ಕ್ರೈಸ್ತರ ವಿಷಯದಲ್ಲಿ ಸತ್ಯವಾಗಿತ್ತು, ಅವರಿಗೆ ಯೇಸುವನ್ನು ನಿರಾಕರಿಸಿ ಚಕ್ರವರ್ತಿಯೇ ನಾಯಕನೆಂದು ಅರಿಕೆ ಮಾಡಬೇಕೆಂಬ ನಿರಂತರವಾದ ಒತ್ತಡವನ್ನು ಹಾಕಲಾಗುತ್ತಿತ್ತು. ಅವರು ಧೈರ್ಯವಾಗಿ ಆತನನ್ನು ಅರಿಕೆ ಮಾಡುತ್ತಲಿರುವದಾದರೆ, ಆತನು ನಿರಂತರವಾಗಿ ಪರಲೋಕದಲ್ಲಿ ಅವರ ಹೆಸರುಗಳನ್ನು ಅರಿಕೆ ಮಾಡುತ್ತಲಿರುವನು ಎಂಬುದನ್ನು ಅವರು ತಿಳಿದುಕೊಳ್ಳಬೇಕೆಂದು ಆತನ ಬಯಕೆಯಾಗಿತ್ತು.

**ವಚನ 6.** ಪತ್ರವು ಪರಿಚಿತವಿರುವ ಮಾತುಗಳಿಂದ ಮುಕ್ತಾಯಗೊಳ್ಳುತ್ತದೆ, **ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ.** ಸಾರ್ದಿಸಿನಲ್ಲಿರುವ ಕ್ರೈಸ್ತರಿಂದ ಕರ್ತನಿಂದ ಹೇಗೆ ಗದರಿಕೆಯನ್ನು ಪಡೆದುಕೊಂಡರೆಂಬುದು ತಿಳಿದು ಬಂದಿರುವದಿಲ್ಲ. ಭರವಸೆಯೊಂದಿಗೆ ಹೇಳುವದಾದರೆ, ಅವರ ಮನಸ್ಸಾಕ್ಷಿಗಳು ಸ್ಪರ್ಶಿಸಲ್ಪಟ್ಟವು ಮತ್ತು ಜೀವಿತಗಳ ಮೇಲೆ ಪರಿಣಾಮ ಬೀರಿತ್ತು. ಸಾರ್ದಿಸಿನಲ್ಲಿರುವ ಸಭೆಯು ಕನಿಷ್ಠ ಗಾತ್ರದಲ್ಲಿ ಬೆಳೆಯಿತೆಂದು ಪುರಾವೆಗಳು ಸೂಚಿಸುತ್ತವೆ; ಒಂದು ಹೃದಯಂಗಮವಾದ ಸಭಾಕಟ್ಟಡವು ನಿರ್ಮಿಸಲ್ಪಟ್ಟಿತು ಮತ್ತು ಅನಂತರದ ವರ್ಷಗಳಲ್ಲಿ ಗಮನಾರ್ಹವಾದ ನಾಯಕರು ಎದ್ದರು ಎಂಬುದನ್ನು ಇತಿಹಾಸವು ಹೇಳುತ್ತದೆ. ಹೇಗೂ, ಇಂದು, ಗತಕಾಲದ ಮಹಿಮೆಯು ಹೊರಟು ಹೋಗಿದೆ – ಪಟ್ಟಣ ಹಾಗೂ ಸಭೆ ಎರಡರ ಮಹಿಮೆಯೂ ಇಲ್ಲವಾಗಿದೆ. ಪಟ್ಟಣದ ಕೆಳಭಾಗದ ಹೃದಯಸ್ಪರ್ಶಿ ಅವಶೇಷಗಳು ಕಂಡು ಹಿಡಿಯಲ್ಪಟ್ಟಿದೆ, ಅದರಲ್ಲಿ ಒಂದು ಪ್ರಾಚೀನ ಸಭಾಮಂದಿರ, ವ್ಯಾಯಾಮ ಶಾಲೆ, ಮತ್ತು ದೇವಾಲಯ ಸೇರಿರುತ್ತವೆ. ದುರಾದೃಷ್ಟಕರವಾಗಿ, ಪಟ್ಟಣದ ಕುರಿತಾಗಿ ಈಗ ಉಳಿದಿರುವದೆಲ್ಲಾ ಎಂದರೆ ಕೇವಲ ಅವಶೇಷಗಳು ಮಾತ್ರವೇ, ಮತ್ತು ದೇವರ ಜನರ ಯಾವದೇ ಸಭೆಯು ಇರುವದಿಲ್ಲ

## ಫಿಲದೆಲ್ಫಿಯ: ತನಗಿರುವದರಲ್ಲಿ ತನಗೆ ಸಾಧ್ಯವಾದದ್ದನ್ನು ಮಾಡಿದಂಥ ಸಭೆ (3:7-13)

**[7]ಫಿಲದೆಲ್ಫಿಯ ಸಭೆಯ ದೂತನಿಗೆ ಬರೆ - ಪರಿಶುದ್ಧನೂ ಸತ್ಯವಂತನೂ ದಾವೀದನ ಬೀಗದ
ಕೈಯುಳ್ಳವನೂ ಯಾರೂ ಮುಚ್ಚಕೂಡದಂತೆ ತೆರೆಯುವವನೂ ಯಾರೂ ತೆರೆಯದಂತೆ
ಮುಚ್ಚುವವನೂ ಆಗಿರುವಾತನು ಹೇಳುವದೇನಂದರೆ - [8]ನಿನ್ನ ಕೃತ್ಯಗಳನ್ನು ಬಲ್ಲೆನು; ನಿನಗಿರುವ
ಶಕ್ತಿ ಕೊಂಚವಾಗಿದ್ದರೂ ನೀನು ನನಗೆ ಸೇರಿದವನಲ್ಲವೆಂದು ಹೇಳದೆ ನನ್ನ ವಾಕ್ಯವನ್ನು
ಕಾಪಾಡಿದ್ದರಿಂದ ಇಗೋ, ನಿನ್ನೆದುರಿನಲ್ಲಿ ಒಂದು ಬಾಗಿಲನ್ನು ತೆರೆದಿಟ್ಟಿದ್ದೇನೆ; ಯಾರೂ ಅದನ್ನು
ಮುಚ್ಚಲಾರರು. [9]ನಾನು ನಿನಗೆ ಅನುಗ್ರಹಿಸುವದೇನಂದರೆ ತಾವು ಯೆಹೂದ್ಯರೆಂದು ಸುಳ್ಳಾಗಿ
ಕೊಚ್ಚಿಕೊಳ್ಳುವ ಸೈತಾನನ ಸಮಾಜದವರಲ್ಲಿ ಕೆಲವರು ಬಂದು ನಿನ್ನ ಪಾದಗಳ ಮುಂದೆ
ಬೀಳುವಂತೆಯೂ ನಿನ್ನನ್ನು ನಾನು ಪ್ರೀತಿಸಿದ್ದನ್ನು ತಿಳುಕೊಳ್ಳುವಂತೆಯೂ ಮಾಡುವೆನು.
[10]ನೀನು ನನ್ನ ಸಹನವಾಕ್ಯವನ್ನು ಕಾಪಾಡಿದ್ದರಿಂದ ಭೂನಿವಾಸಿಗಳನ್ನು ಪರೀಕ್ಷಿಸುವದಕ್ಕಾಗಿ
ಲೋಕದ ಮೇಲೆಲ್ಲಾ ಬರುವದಕ್ಕಿರುವ ಶೋಧನೆಯ ಸಮಯದಲ್ಲಿ ನಿನ್ನನ್ನು ತಪ್ಪಿಸಿ
ಕಾಪಾಡುವೆನು. [11]ಬೇಗನೆ ಬರುತ್ತೇನೆ; ನಿನಗಿರುವದನ್ನು ಹಿಡಿದುಕೊಂಡಿರು; ನಿನ್ನ
ಜಯಮಾಲೆಯನ್ನು ಯಾರು ಅಪಹರಿಸಬಾರದು. [12]ಯಾವನು ಜಯ ಹೊಂದುತ್ತಾನೋ
ಅವನನ್ನು ನನ್ನ ದೇವರ ಆಲಯದಲ್ಲಿ ಸ್ತಂಭವಾಗಿ ನಿಲ್ಲಿಸುವೆನು; ಅವನು ಇನ್ನು ಮುಂದೆ
ಅದರೊಳಗಿಂದ ಹೋಗುವದೇ ಇಲ್ಲ. ಇದಲ್ಲದೆ ನನ್ನ ದೇವರ ಹೆಸರನ್ನೂ ನನ್ನ ದೇವರ
ಬಳಿಯಿಂದ ಪರಲೋಕದೊಳಗಿಂದ ಇಳಿದುಬರುವ ಹೊಸ ಯೆರೂಸಲೇಮ್ ಪಟ್ಟಣವೆಂಬ ನನ್ನ
ದೇವರ ಪಟ್ಟಣದ ಹೆಸರನ್ನೂ ನನ್ನ ಹೆಸರನ್ನೂ ಅವನ ಮೇಲೆ ಬರೆಯುವೆನು. [13]ದೇವರಾತ್ಮನು
ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ.**

ಯೇಸುವು ಅತ್ಯುತ್ತಮ ಹಾಗೂ ಅತ್ಯಂಥ ಕೆಟ್ಟ ಸಭೆಗಳನ್ನು ಕೊನೆಯಲ್ಲಿ ಬಿಟ್ಟನು. ಮೊದಲನೆಯದಾಗಿ, ನಾವು ಅತ್ಯುತ್ತಮ ಸಭೆಯ ಕುರಿತು ಕಲಿಯಲಿದ್ದೇವೆ, ಅದು ಫಿಲದೆಲ್ಫಿಯ ಸಭೆಯೇ. ಫಿಲದೆಲ್ಫಿಯವು ಸಾರ್ದಿಸಿನಿಂದ ದಕ್ಷಿಣದ-ಆಗ್ನೇಯ ದಿಕ್ಕಿನಲ್ಲಿತ್ತು. ಅದೊಂದು

ಬೃಹತ್, ಸಮೃದ್ಧವಾದ, ಅಥವಾ ಕರಾವಳಿಯಲ್ಲಿರುವ ಪಟ್ಟಣಗಳಂತೆ ಹೆಚ್ಚು ಪ್ರಖ್ಯಾತವಾದ ಪಟ್ಟಣವಾಗಿರಲಿಲ್ಲ, ಆದರೆ ಆಗಲೂ ಅದು ಕೆಲವೊಂದು ಸ್ಮರಣಾರ್ಹವಾದ ಗುಣಗಳನ್ನು ಹೊಂದಿತ್ತು (ವ. 12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅದರ ಹೆಸರು ಅದರ ಸ್ಥಾಪಕನ ಗೌರವಾರ್ಥವಾಗಿತ್ತು: ಪೆರ್ಗಮದ ಅರಸನಾದ Attalus II Philadelphus. "Philadelphus" ಗ್ರೀಕ್ ಭಾಷೆಯ "ಪ್ರೀತಿ" ಎಂಬುದಕ್ಕಿರುವ φιλία (*philia*), "ಸಹೋದರ" ಎಂಬುದಕ್ಕಿರುವ ἀδελφός (*adelphos*) ಎಂಬ ಪದಗಳ ಸಂಯೋಜನೆಯಾಗಿರುತ್ತದೆ; ಹೀಗೆ ಅದು "ಸಹೋದರನೊಬ್ಬನ ಪ್ರೀತಿ" ಅಥವಾ "ಸಹೋದರ ಪ್ರೀತಿ" ಎಂದರ್ಥವನ್ನು ಕೊಡುತ್ತದೆ. ತಾನು ತನ್ನ ಹಿರಿಯ ಸಹೋದರನಾದ Eumenesನಿಗೆ ಹೊಂದಿದ್ದ ನಿಷ್ಠೆಯ ಕಾರಣದಿಂದಾಗಿ ಆ ಬಿರುದನ್ನು Attalusನು ಅನುಗ್ರಹಿಸಿದ್ದನು. ಅದೇ ರೀತಿಯಲ್ಲಿ, Pennsylvania ದ ಫಿಲದೆಲ್ಫಿಯಕ್ಕಿದ್ದ ಘೋಷವಾಕ್ಯವು "ಸಹೋದರ ಪ್ರೀತಿಯ ಪಟ್ಟಣ" ಆಗಿತ್ತು.

ಮೂಸ್ಯ, ಲುದ್ಯ, ಮತ್ತು ಫ್ರುಗ್ಯಕ್ಕೆ ಸಾಗುವ ವ್ಯಾಪಾರದ ಮಾರ್ಗಗಳಲ್ಲಿದ್ದ ಫಿಲದೆಲ್ಫಿಯವು "ಪೂರ್ವ ದಿಕ್ಕಿಗೆ ದ್ವಾರ" ಎಂದು ಪರಿಚಿತವಾಗಿತ್ತು. ಇದೊಂದು ಮಿಶನರಿ ಪಟ್ಟಣವಾಗಿ - ಲೂದ್ಯ ಮತ್ತು ಫ್ರುಗ್ಯ ಪಟ್ಟಣದೊಳಗೆ ಗ್ರೀಕ್ ಭಾಷೆ ಹಾಗೂ ಸಂಸ್ಕೃತಿಗಳನ್ನು ಹರಡಿಸುವದಕ್ಕಾಗಿ - Attalusನಿಂದ ಸ್ಥಾಪಿಸಲ್ಪಟ್ಟಿತ್ತು. ಅದೊಂದು ಬೃಹತ್ ಪಟ್ಟಣವಾಗಿರಲಿಲ್ಲ, ಆದರೆ ಅದು ಒಂದು ಫಲವತ್ತಾದ ಪ್ರಾಂತ್ಯದಲ್ಲಿತ್ತು ಮತ್ತು ಅದರ ದ್ರಾಕ್ಷಾರಸದ ಉತ್ಪಾದನೆಗೆ ಹೆಸರುವಾಸಿಯಾಗಿತ್ತು. ಅಲ್ಲಿದ್ದ ದೇವಾಲಯಗಳ ಮತ್ತು ಸಾರ್ವಜನಿಕ ಕಟ್ಟಡಗಳ ಸಂಖ್ಯೆ ಹಾಗೂ ಮನಮೋಹಕತೆಯ ಕಾರಣದಿಂದಾಗಿ, ಅದು ಕೆಲವು ಸಾರಿ "ಚಿಕ್ಕ ಅಥೇನೆ" ಎಂದು ಕರೆಯಲ್ಪಡುತ್ತಿತ್ತು.

ಈ ಪಟ್ಟಣದ ಒಂದು ಭೌಗೋಳಿಕ ವಿಶಿಷ್ಟತೆಯನ್ನು ಗಮನಿಸತಕ್ಕದ್ದು: ಅದು ಒಂದು ದೋಷಪೂರಿತ ಭೂರೇಖೆಯ ಮೇಲೆ (ಭೂಕಂಪಕ್ಕೊಳಗಾಗಬಲ್ಲ) ನಿರ್ಮಿಸಲ್ಪಟ್ಟಿತ್ತು ಮತ್ತು ತನ್ನ ಪಾಲಿಗಿಂತಲೂ ಅಧಿಕವಾದ ಭೂಕಂಪನಗಳನ್ನು ಅನುಭವಿಸಿತ್ತು.

> ಆ ಕ್ಷೇತ್ರದಲ್ಲಿದ್ದ . . . ಇತರ ಪಟ್ಟಣಗಳ ಜೊತೆಯಲ್ಲಿ [ಸಾರ್ದಿಸ್ ಪಟ್ಟಣವು ಸೇರಿದಂತೆ], ಫಿಲದೆಲ್ಫಿಯವು ಕ್ರಿ.ಶ. 17ರಲ್ಲಿ ಸಂಭವಿಸಿದ ಭಯಂಕರವಾದ ಭೂಕಂಪದಲ್ಲಿ ನಾಶಗೊಂಡಿತು . . . ಹಲವಾರು ವರ್ಷಗಳ ಕಾಲ ಜನರು ಆ ಕ್ಷೇತ್ರವನ್ನು ಕಾಡುತ್ತಿದ್ದ ನಿರಂತರವಾದ ಭೂಕಂಪನಗಳಿಂದಾಗಿ ಭಯದಲ್ಲಿ ಇಡಲ್ಪಟ್ಟರು, ಮತ್ತು ಈ ಭಯದ ಕಾರಣದಿಂದಾಗಿ ಅಲ್ಲಿನ ಜನಸಂಖ್ಯೆಯಲ್ಲಿ ಬಹಳಷ್ಟು ಮಂದಿ ಆ ಪಟ್ಟಣದ ಪಕ್ಕದಲ್ಲಿದ್ದ ಗ್ರಾಮಗಳ ಪ್ರದೇಶದಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಜೀವಿಸುತ್ತಿದ್ದರು.[8]

ಇಂದು, ಫಿಲದೆಲ್ಫಿಯದ ಜಾಗವು ಹಳೆಯ ಥುವತೈರದಂತೆಯೇ ಇರುತ್ತದೆ: ಆಧುನಿಕ-ಕಾಲದ ಗ್ರಾಮರವಾದ Alasehir ಅದೇ ಜಾಗದಲ್ಲಿಯೇ ನಿರ್ಮಿಸಲ್ಪಟ್ಟಿರುವ ಕಾರಣ ಆ ಸ್ಥಳದಲ್ಲಿ ಅಷ್ಟಾಗಿ ಉತ್ಖನನ ಮಾಡುವದಕ್ಕೆ ಸಾಧ್ಯವಾಗಿರುವದಿಲ್ಲ. Alasehirನ ಹೃದಯಭಾಗದಲ್ಲಿರುವ ಒಂದೇ ಒಂದು ಕಡೆಯಲ್ಲಿ ಮಾತ್ರವೇ ಉತ್ಖನನ ಮಾಡಲಾಗಿರುತ್ತದೆ. ಈ ಕೇರಿಯಲ್ಲಿಯೇ ಒಂದು ಪ್ರಾಚೀನ ಸಭಾ ಕಟ್ಟಡದ ಅವಶೇಷಗಳಿದ್ದರೆ - ಒಂದು ಕಾಲದಲ್ಲಿ ಯೇಸುವಿನಲ್ಲಿನ ನಂಬಿಕೆಯು ಅಲ್ಲಿ ಸಮೃದ್ಧವಾಗಿತ್ತೆಂಬುದಕ್ಕೆ ಜ್ಞಾಪಿಸುವದಾಗಿದೆ - ಅದೇ ವೇಳೆಯಲ್ಲಿ, ಒಂದು ಬೀದಿಯನ್ನು ದಾಟಿ, ಒಂದು ಬೃಹತ್ ಮುಸ್ಲಿಮ್ ಮಸೀದಿಯು ಈಗಲೂ ಅನುದಿನ ಬಳಕೆಯಲ್ಲಿರುತ್ತದೆ.

**ವಚನ 7.** ಪತ್ರವು ಹೀಗೆ ಆರಂಭಗೊಳ್ಳುತ್ತದೆ, **ಫಿಲದೆಲ್ಫಿಯದಲ್ಲಿರುವ ಸಭೆಯ ದೂತನಿಗೆ ಬರೆ** (1:16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಕರ್ತನಿಗಾದರೋ, ಆ ಪಟ್ಟಣದ ಕುರಿತಾಗಿ

ಅತ್ಯಂಥ ಪ್ರಾಮುಖ್ಯವಾದ ಸಂಗತಿಯೆಂದರೆ ಆತನ ಜನರ ಒಂದು ಸಭೆಯು ಅಲ್ಲಿ ಕೂಡಿ ಬರುತ್ತಿದ್ದರು ಎಂಬದೆ - ಗತಕಾಲದಲ್ಲಿ ಘೋರವಾಗಿ ಪರಿಶೋಧಿಸಲ್ಪಟ್ಟಿದ್ದ ಮತ್ತು ಭವಿಷ್ಯದಲ್ಲಿ ಅದಕ್ಕಿಂತಲೂ ಕೆಟ್ಟದಾದ ಸಂಕಷ್ಟಗಳನ್ನು ಎದುರಿಸಲಿದ್ದ ಒಂದು ಸಭೆ ಅದಾಗಿತ್ತು. ಈ ಸಭೆಯು ಯಾವಾಗ ಸ್ಥಾಪಿಸಲ್ಪಟ್ಟಿತೆಂಬುದು ತಿಳಿದು ಬಂದಿರುವದಿಲ್ಲ; ಅದು ಬಹುಶಃ ಎಫೆಸದಲ್ಲಿ ಪೌಲನು ಸೇವೆಯನ್ನು ಮಾಡುತ್ತಿರುವ ವೇಳೆಯಲ್ಲಿ ಆಗಿರಬಹುದು (ಅಪೊಸ್ತಲರ ಕೃತ್ಯಗಳು 19:1, 8-10). ಯಾವದೇ ಖಂಡಿಸುವಿಕೆಯನ್ನು ಒಳಗೊಂಡಿಲ್ಲದ ಯೇಸುವಿನ ಪತ್ರವು, ಆತನಿಗೆ ಅಮೂಲ್ಯವಾಗಿದ್ದ ಈ ಚಿಕ್ಕ ಗುಂಪನ್ನು ಪ್ರೋತ್ಸಾಹಿಸುವದಕ್ಕಾಗಿ ಬರೆಯಲ್ಪಟ್ಟಿತ್ತು.

ಯೇಸು ಮೊದಲು ತನ್ನ ಗುರುತನ್ನು ನೆನಪಿಸುವ ಮೂಲಕ ಸದಸ್ಯರನ್ನು ಸಂತೈಸಿದನು: **ಪರಿಶುದ್ಧನೂ ಸತ್ಯವಂತನೂ ದಾವೀದನ ಬೀಗದ ಕೈಯುಳ್ಳವನೂ ಯಾರೂ ಮುಚ್ಚಕೂಡದಂತೆ ತೆರೆಯುವವನೂ ಯಾರೂ ತೆರೆಯದಂತೆ ಮುಚ್ಚುವವನೂ ಆಗಿರುವಾತನು.**

ಯೇಸು ತನ್ನನ್ನು **ಪರಿಶುದ್ಧನೂ** ಎಂದು ಪರಿಚಯಿಸಿಕೊಂಡನು. ಗ್ರೀಕ್ ಭಾಷೆಯ ὁ ἅγιος (*ho hagios*) ಎಂಬವುಗಳು "ಪರಿಶುದ್ಧ [ನಾದವನು]" ಎಂಬ ಅರ್ಥವನ್ನು ಕೊಡುವ ಪದಗಳಾಗಿದ್ದವು; ಮೂಲ ಪದವು ದೇವರಿಗೆ ಮೀಸಲಾಗಿಡಲ್ಪಟ್ಟಿದ್ದಾಗಿತ್ತು (ಯೆಶಾಯ 40:25; ಹಬ 3:3; ಪ್ರಕಟನೆ 6:10). ಯೇಸು ಹೀಗೆ ತನ್ನ ದೇವತ್ವವನ್ನು ದೃಢಪಡಿಸಿದನು - ಆದರೆ ಆತನು ಅದಕ್ಕಿಂತ ಹೆಚ್ಚಿನದನ್ನು ಮಾಡಿದನು. ಪರಿಶುದ್ಧತೆಯ ದೇವರಾಗಿ, ಆತನು ಪಾಪವನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ ಮತ್ತು ಸಹಿಸಿಕೊಳ್ಳುವದಿಲ್ಲ. ಈ ವರ್ಣನೆಯು ದುಷ್ಕೃತ್ಯ ಮಾಡುವವರು, ನಿರ್ದಿಷ್ಟವಾಗಿ ಕ್ರೈಸ್ತರನ್ನು ಹಿಂಸಿಸುವವರು ದಂಡಿಸಲ್ಪಡುವರೆಂಬುದಕ್ಕೆ ಒಂದು ಖಾತ್ರಿಯಾಗಿತ್ತು.

ನಂತರ, ಆತನು ತನ್ನನ್ನು ಸತ್ಯವಂತನು ಎಂದು ಹೇಳಿಕೊಂಡನು, ಅದು ಅಕ್ಷರಶಃ "ಸತ್ಯ [ವಾಗಿರುವಾತನು]" ಎಂದಾಗಿದೆ. ಫಿಲದೆಲ್ಫಿಯದಲ್ಲಿ ಸುಳ್ಳು ದೇವರುಗಳು ಮತ್ತು ಸುಳ್ಳು ಯೆಹೂದ್ಯರು ಸಹ ತುಂಬಿದ್ದರು (ವ. 9), ಆದರೆ ಯೇಸುವು ಪ್ರಾಮಾಣಿಕ ಹಾಗೂ ವಿಶ್ವಾಸರ್ಹನಾಗಿದ್ದನು.

ಈ ಗುಣಗಳು ಹಿಂಸೆಯನ್ನು ಅನುಭವಿಸಿದ್ದ ಕ್ರೈಸ್ತರಿಗೆ ಆದರಣೆಯನ್ನು ಉಂಟು ಮಾಡುವಂಥವುಗಳಾಗಿದ್ದವು. 6ನೇ ಅಧ್ಯಾಯದಲ್ಲಿ, ರಕ್ತಸಾಕ್ಷಿಗಳು ಕರ್ತನನ್ನು ಕರೆಯುವಾಗ, ಅವರು ಆತನನ್ನು "ಪರಿಶುದ್ಧನೂ ಸತ್ಯವಂತನೂ" ಆಗಿರುವಾತನೇ ಎಂದು ಹೇಳಿದರು (6:10): ಆತನು ಪರಿಶುದ್ಧನಾಗಿದ್ದನಾದ್ದರಿಂದ, ಆತನು ಪಾಪಕ್ಕೆ ನ್ಯಾಯತೀರಿಸುವನೆಂದು ಅವರಿಗೆ ಗೊತ್ತಿತ್ತು. ಆತನು ಸತ್ಯವಂತನಾಗಿರುವದರಿಂದ, ಆತನು ತನ್ನ ಜನರ ನ್ಯಾಯವನ್ನು ನಿರೂಪಿಸುವನೆಂದು ಅವರಿಗೆ ತಿಳಿದಿತ್ತು.

ಅಲ್ಲದೆ ಯೇಸುವು ತಾನು ದಾವೀದನ ಬೀಗದ ಕೈಯುಳ್ಳವನು ಎಂದು ಹೇಳಿದನು. ಈ ಚಿತ್ರಣವು ಯೆಶಾಯ 22:15-25ರಿಂದ ತೆಗೆದುಕೊಳ್ಳಲ್ಪಟ್ಟಿದೆ. ಆ ವಾಕ್ಯದಲ್ಲಿ, ಹಿಜ್ಕೀಯನ ವಿಶ್ವಾಸರ್ಹ ಸೇವಕನಾಗಿದ್ದ ಎಲ್ಯಾಕೀಮನಿಗೆ "ದಾವೀದನ ಮನೆತನದ ಬೀಗ ಕೈಯನ್ನು" ಕೊಡಲಾಯಿತು. ಅರಸನ ಸನ್ನಿಧಿಯಲ್ಲಿ ಪ್ರಜೆಗಳನ್ನು ಪ್ರವೇಶಿಸುವಂತೆ ಅನುಮತಿಸುವ ಅಧಿಕಾರವು ಎಲ್ಯಾಕೀಮನಿಗೆ ಮಾತ್ರವೇ ಇತ್ತು: ಅವನು ತೆರೆದರೆ ಯಾರೂ ಮುಚ್ಚರು; ಮುಚ್ಚಿದರೆ ಯಾರೂ ತೆರೆಯರು" (ಯೆಶಾಯ 22:22).

ಒಂದು ಬೀಗದ ಕೈಯನ್ನು ಹೊಂದಿರುವದು ಒಬ್ಬನು ಅಧಿಕಾರವನ್ನು ಹೊಂದಿದ್ದಾನೆ, ಪ್ರವೇಶವನ್ನು ಅನುಮತಿಸುವ ಅಥವಾ ನಿರಾಕರಿಸುವ ನಿರ್ದಿಷ್ಟವಾದ ಅಧಿಕಾರವನ್ನು

ಹೊಂದಿದ್ದಾನೆ ಎಂಬುದನ್ನು ಸೂಚಿಸುತ್ತದೆ. "ಯೇಸು ಎಲ್ಲಾ ಮಂಡಲಗಳಲ್ಲಿಯೂ ಅಧಿಕಾರ ಹೊಂದಿದ್ದಾನೆ: ಪರಲೋಕದಲ್ಲಿಯೂ ಭೂಲೋಕದಲ್ಲಿಯೂ (ಮತ್ತಾಯ 28:18), ದೇವದೂತರು ಮತ್ತು ಅಧಿಕಾರಗಳು ಹಾಗೂ ಶಕ್ತಿಗಳ ಮೇಲೆ (1 ಪೇತ್ರ 3:22), ಸಭೆಯ ಮೇಲೆ (ಎಫೆಸ 1:20-22), ಭೂರಾಜರ ಮೇಲೆ (ಪ್ರಕಟನೆ 1:5), ಮತ್ತು ಮರಣ ಮತ್ತು ಪಾತಾಳದ ಮೇಲೆ ಆಧಿಕಾರ ಹೊಂದಿದ್ದಾನೆ (ಪ್ರಕಟನೆ 1:18)."[9] ಯೇಸುವು ದಾವೀದನ ಬೀಗದ ಕೈಯನ್ನು ಹೊಂದಿದ್ದಾನೆಂಬ ವಾಸ್ತವಾಂಶವು ಆತನು ದಾವೀದನ ವಂಶದಿಂದ ಬಂದ ಮೆಸ್ಸೀಯನಾಗಿದ್ದನು (2 ಸಮುವೇಲ 7:16) ಮತ್ತು ಈಗ ಆತನು ದಾವೀದನ ಸಿಂಹಾಸನದ ಮೇಲ ಆಳ್ವಿಕೆ ಮಾಡುತ್ತಿದ್ದಾನೆ ಎಂಬುದನ್ನು ಸಾಭಿತುಪಡಿಸುತ್ತದೆ (ಅಪೊಸ್ತಲರ ಕೃತ್ಯಗಳು 2:30-36).

ಯೇಸುವು ಮಾತ್ರವೇ ಬೀಗದ ಕೈಯನ್ನು ಹೊಂದಿದ್ದನು. ಆದುದರಿಂದ, ಆತನು ಯಾವದನ್ನು ತೆರೆಯುತ್ತಾನೋ ಅದನ್ನು ಯಾವನೂ ಮುಚ್ಚುವದಕ್ಕಾಗಲಿ, ಮತ್ತು ಆತನು ಮುಚ್ಚಿದ್ದನ್ನು ಯಾವನಿಗೂ ತೆರೆಯುವದಕ್ಕಾಗಲಿ ಸಾಧ್ಯವಿರಲಿಲ್ಲ. ಆದದರಿಂದ ತಾನು ಅವರು ಮುಂದೆ "ಒಂದು ಬಾಗಿಲನ್ನು ತೆರೆದಿಟ್ಟಿದ್ದೇನೆ; ಯಾರೂ ಅದನ್ನು ಮುಚ್ಚಲಾರರು" ಎಂಬುದಾಗಿ ಫಿಲದೆಲ್ಫಿಯದ ಕ್ರೈಸ್ತರಿಗೆ ಹೇಳಿದನು (ವ. 8). ತೆರೆಯುವವನೂ (ἀνοίγων, *anoigōn*, ಇದು ἀνοίγω, *anoigō* ಎಂಬುದರಿಂದ ಬಂದದ್ದು) ಮತ್ತು **ಮುಚ್ಚುವವನೂ** (κλείων, *kleiōn*, ಇದ್ದು κλείω, *kleiō* ಎಂಬುದರಿಂದ ಬಂದದ್ದು) ಎಂಬ ಎರಡೂ ಪದಗಳು ವರ್ತಮಾನಕಾಲರೂಪದಲ್ಲಿ ಇದ್ದು, ನಿರಂತರವಾದ ಕ್ರಿಯೆಯನ್ನು ಸೂಚಿಸುತ್ತದೆ. ಕರ್ತನು ಈಗಲೂ ತನ್ನ ಸಭೆಯ ಜೀವಿತದಲ್ಲಿ *ನಿರಂತರವಾಗಿ* ತೊಡಗಿಸಿಕೊಳ್ಳುವವನಾಗಿದ್ದಾನೆ. ಸೈತಾನನ ಶಕ್ತಿಗಳು ಕರ್ತನು ತನ್ನ ಸಭೆಗಾಗಿ ಹೊಂದಿರುವ ಯೋಜನೆಗಳಿಗೆ ತಾತ್ಕಾಲಿಕವಾಗಿ ತಡೆಗಳನ್ನು ಒಡ್ಡಬಹುದು, ಆದರೆ ಅಂತ್ಯದಲ್ಲಿ, ದೇವರ ಉದ್ದೇಶಗಳು ಸಾಧಿಸಲ್ಪಡುವವು.

**ವಚನ 8.** ಪ್ರತಿಯೊಬ್ಬರೂ ಪ್ರಶಂಸಿಸಲ್ಪಡುವದನ್ನು ಇಷ್ಟಪಡುತ್ತಾರೆ, ಮತ್ತು ಯೇಸು ಈ ನಂಬಿಗಸ್ತ ಸಭೆಗಾಗಿ ತನ್ನ ಪ್ರಶಂಸೆಯನ್ನು ವ್ಯಕ್ತಪಡಿಸಿದನು: **ನಿನ್ನ ಕೃತ್ಯಗಳನ್ನು ಬಲ್ಲೆನು; ನಿನಗಿರುವ ಶಕ್ತಿ ಕೊಂಚವಾಗಿದ್ದರೂ ನೀನು ನನಗೆ ಸೇರಿದವನಲ್ಲವೆಂದು ಹೇಳದೆ ನನ್ನ ವಾಕ್ಯವನ್ನು ಕಾಪಾಡಿದ್ದರಿಂದ.**

ಸಭೆಯು ತಕ್ಕಷ್ಟು ಬೆಳವಣಿಗೆಯಿಲ್ಲದ್ದಾಗಿತ್ತು ಆದರೆ ಫಲದಾಯಕವಾಗಿತ್ತು. ಯೇಸುವು ಸಭೆಯ **ಶಕ್ತಿ ಕೊಂಚವಾಗಿದ್ದರೂ** ಎಂಬುದಾಗಿ ಮಾತಾಡಿದನು. ಆತನು ಬಹುಶಃ ಅವರ ಸದಸ್ಯತ್ವವು ಚಿಕ್ಕದಾಗಿರುವ ಕುರಿತು, ಪ್ರತಿಭೆಯ ಕೊರತೆ, ಅಥವಾ ಆರ್ಥಿಕ ಸಂಪನ್ಮೂಲಗಳ ಮಿತಿಯನ್ನು ಕುರಿತು ಹೇಳುತ್ತಿರಬಹುದಾಗಿದೆ. ಅಲ್ಲದೆ ಕೆಲವು ಸದಸ್ಯರ ಸಾಮಾಜಿಕ ಸ್ಥಾನದ ಕಾರಣದಿಂದ ಸಮಾಜವು ಸಭೆಯನ್ನು ಹೇಗೆ ಕೀಳಾಗಿ ಕಾಣುತ್ತಿತ್ತೆಂಬ ಕುರಿತು ಸಹ ಸೂಚ್ಯಾರ್ಥವಾಗಿ ಹೇಳುತ್ತಿರಬಹುದಾಗಿದೆ (ನೋಡಿರಿ 1 ಕೊರಿಂಥ 1:26). ಯೇಸುವು ಅವರನ್ನು ಮುಜುಗರಕ್ಕೀಡು ಮಾಡಬೇಕೆಂಬುದಕ್ಕಾಗಿ ಅವರ "ಶಕ್ತಿ ಕೊಂಚವಾಗಿದೆ" ಎಂಬುದನ್ನು ಪ್ರಸ್ತಾಪಿಸಲಿಲ್ಲ, ಆದರೆ ಅವರನ್ನು ಶ್ಲಾಘಿಸುವದಕ್ಕೆ ಪ್ರಸ್ತಾಪಿಸಿದನು. ಅವರ "ಶಕ್ತಿಯು ಕೊಂಚವಾಗಿದೆ" ಎಂಬ ವಾಸ್ತವಾಂಶದ ಹೊರತಾಗಿಯೂ, ಅವರು ಏನನ್ನೂ ಮಾಡದಿರುವದಕ್ಕೆ ಅದನ್ನು ಒಂದು ನೆಪವಾಗಿ ಬಳಸಿಕೊಂಡಿರಲಿಲ್ಲ. ಬದಲಾಗಿ, ಅವರು ತಮಗಿರುವದಲ್ಲಿ ಸಾಧ್ಯವಾದದ್ದನ್ನು ಮಾಡಿದ್ದರು. Alfred Plummerನ ಪ್ರಕಾರವಾಗಿ, ವಾಕ್ಯಭಾಗದ ಈ ಭಾಗದ ಒತ್ತು ಏನೆಂದರೆ: "ನೀನು ಕೊಂಚ ಶಕ್ತಿಯನ್ನು ಹೊಂದಿದ್ದೀ, ಮತ್ತು ಆ ಕೊಂಚ ಶಕ್ತಿಯನ್ನು ಉತ್ತಮವಾಗಿ ಬಳಕೆ ಮಾಡಿಕೊಂಡಿರುವ ಕಾರಣದಿಂದ, ನಿನ್ನಿಂದ

ಯಾವನೂ ಕಸಿದುಕೊಳ್ಳಲಾಗದ ಒಂದು ಸದವಕಾಶವನ್ನು ನಿನಗೆ ಕೊಟ್ಟಿರುತ್ತೇನೆ."[10]

ಫಿಲದೆಲ್ಫಿಯದಲ್ಲಿನ ಸಭೆಯು ಹಿಂಸಿಸಲ್ಪಟ್ಟಿತ್ತು ಆದರೆ ದೃಢನಿಷ್ಠೆಯಿಂದ ಮುನ್ನಡೆದಿತ್ತು. ಕ್ರೈಸ್ತರಿಗೆ ಮಾಡಲು ಸಾಧ್ಯವಿದ್ದ - ಮತ್ತು ಮಾಡಿದ - ಒಂದು ಸಂಗತಿಯೆಂದರೆ ನಂಬಿಗಸ್ತರಾಗಿ ಉಳಿಯುವದೇ. ಯೇಸು ಹೀಗೆ ಹೇಳಿದನು, **ನೀನು ನನಗೆ ಸೇರಿದವನಲ್ಲವೆಂದು ಹೇಳದೆ ನನ್ನ ವಾಕ್ಯವನ್ನು ಕಾಪಾಡಿದ್ದರಿಂದ . . .** ವಾಕ್ಯಭಾಗದಲ್ಲಿನ "ನನ್ನ ವಾಕ್ಯವನ್ನು ಕಾಪಾಡಿದ್ದಿ" ಮತ್ತು "ನನ್ನ ಹೆಸರನ್ನು ಅಲ್ಲಗಳೆಯಲಿಲ್ಲ (ನೀನು ನನಗೆ ಸೇರಿದವನಲ್ಲವೆಂದು ಹೇಳದೆ)" ಎಂಬ ಪದಗುಚ್ಛಗಳನ್ನು ಅನುವಾದಿಸಿದ ಗ್ರೀಕ್ ಪದಗಳು ಅನಿಶ್ಚಿತಭೂತಕಾಲರೂಪದಲ್ಲಿ ಇದ್ದು, ಒಂದು-ಸಮಯ ಸಂಭವಿಸಿದ ಘಟನೆಯನ್ನು ಸೂಚಿಸುತ್ತವೆ. ಗತಕಾಲದಲ್ಲಿ, ಒಂದು ನಿರ್ದಿಷ್ಟವಾದ ಕಾಲಾವಧಿಯಲ್ಲಿ ಅವರ ನಂಬಿಕೆಯು ಘೋರವಾಗಿ ಪರಿಶೋಧಿಸಲ್ಪಟ್ಟಿತ್ತು - ಬಹುಶಃ ಅದೇ ಸಮಯದಲ್ಲಿಯೇ ಅಂತಿಪನು ಕೊಲ್ಲಲ್ಪಟ್ಟಿದ್ದನು (2:13). ಯೇಸುವನ್ನು ಅಲ್ಲಗಳೆದು ಚಕ್ರವರ್ತಿಯನ್ನು ಕರ್ತನೆಂದು ಅರಿಕೆ ಮಾಡಬೇಕೆಂಬ ಒತ್ತಡದ ಹೊರತಾಗಿಯೂ, ಅವರು ದೃಢನಿಷ್ಠೆಯಿಂದ ಮುನ್ನಡೆದಿದ್ದರು.

ಅವರ ಸ್ವಂತ "ಶಕ್ತಿಯು ಕೊಂಚ" ಆಗಿರುವ ವೇಳೆಯಲ್ಲಿ ಅವರು ಹೇಗೆ ಇದನ್ನು ಮಾಡುವದಕ್ಕೆ ಸಾಧ್ಯವಾಗಿತ್ತು? ಸ್ಪಷ್ಟವಾಗಿ ತೋರಲ್ಪಟ್ಟಿರುವ ಹಾಗೆ, ಪೌಲನ ಹಾಗೆಯೇ, ಅವರು ಕರ್ತನ ಬಲವನ್ನು ಆಶ್ರಯಿಸಿಕೊಳ್ಳುವದನ್ನು ಕಲಿತುಕೊಂಡಿದ್ದರು:

> ಅದಕ್ಕಾತನು - ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣಸಾಧಕವಾಗುತ್ತದೆ ಎಂದು ನನಗೆ ಹೇಳಿದ್ದಾನೆ. ಹೀಗಿರಲಾಗಿ ಕ್ರಿಸ್ತನ ಬಲವು ನನ್ನಲ್ಲಿ ನೆಲಸಿಕೊಂಡಿರಬೇಕೆಂದು ನನಗುಂಟಾಗುವ ನಿರ್ಬಲಾವಸ್ಥೆಗಳ ವಿಷಯದಲ್ಲಿಯೇ ಬಹು ಸಂತೋಷವಾಗಿ ಹೆಚ್ಚಳಪಡುವೆನು. ಆದದರಿಂದ ಕ್ರಿಸ್ತನ ನಿಮಿತ್ತ ನನಗೆ ನಿರ್ಬಲಾವಸ್ಥೆಯೂ . . . ಸಂಭವಿಸಿದಾಗ ಸಂತುಷ್ಟನಾಗಿದ್ದೇನೆ. ನಾನು ಯಾವಾಗ ನಿರ್ಬಲನಾಗಿದ್ದೇನೋ ಆವಾಗಲೇ ಬಲವುಳ್ಳವನಾಗಿದ್ದೇನೆ (2 ಕೊರಿಂಥ 12:9, 10; ನೋಡಿರಿ ಯೆಶಾಯ 40:29; ಇಬ್ರಿಯ 11:34).

ಫಿಲದೆಲ್ಫಿಯದಲ್ಲಿನ ಕ್ರೈಸ್ತರು ದೃಢನಿಷ್ಠೆಯಿಂದ ಇದ್ದದರ ನಿಮಿತ್ತವಾಗಿ, ಅವರ ಭವಿಷ್ಯವು ಅತ್ಯಾಶ್ಚರ್ಯಕರವಾದ ಫಲಿತಗಳಿಂದ ತುಂಬಿರುವದು. ಮೊದಲನೆಯದಾಗಿ, ಯೇಸುವು ಅವರಿಗೆ ವಿಶೇಷ ಸದವಕಾಶಗಳನ್ನು ನಿರಂತರವಾಗಿ ಕೊಡುವನು: "ಇಗೋ, ನಿನ್ನೆದುರಿನಲ್ಲಿ ಒಂದು ಬಾಗಿಲನ್ನು ತೆರೆದಿಟ್ಟಿದ್ದೇನೆ; ಯಾರೂ ಅದನ್ನು ಮುಚ್ಚಲಾರರು." ಒಂದು **ಬಾಗಿಲನ್ನು ತೆರೆದಿಟ್ಟಿರುವದು** ಎಂಬುದನ್ನು ವಿಶೇಷವಾದ ಸದವಕಾಶಗಳನ್ನು, ಅದರಲ್ಲೂ ವಿಶೇಷವಾಗಿ ಸುವಾರ್ತೆಯನ್ನು ಹರಡಿಸುವದಕ್ಕೆ ಸದವಕಾಶಗಳನ್ನು ಸೂಚಿಸುವದಕ್ಕಾಗಿ ಹೊಸ ಒಡಂಬಡಿಕೆಯಲ್ಲಿ ಬಳಸಲ್ಪಟ್ಟಿರುತ್ತದೆ (ಅಪೊಸ್ತಲರ ಕೃತ್ಯಗಳು 14:27; 1 ಕೊರಿಂಥ 16:9; 2 ಕೊರಿಂಥ 2:12; ಕೊಲೊಸ್ಸೆ 4:3). "ಬಾಗಿಲು ತೆರೆದಿಟ್ಟಿರುವದು" ಎಂಬುದರ ಇತರ ಸಂಭಾವ್ಯ ಅರ್ಥಗಳು ಸಲಹೆ ಮಾಡಲ್ಪಟ್ಟಿವೆ, ಅವುಗಳಲ್ಲಿ ಸಾಮಾನ್ಯವಾದ ಸೇವೆಗಾಗಿ ಮತ್ತು ಬೆಳವಣಿಗೆಗಾಗಿ ತೆರೆದ ಬಾಗಿಲುಗಳು ಸೇರಿರುತ್ತವೆ. ಇನ್ನೊಂದು ಅಭಿಪ್ರಾಯವೆಂದರೆ ಯೇಸುವು ನಿತ್ಯವಾದ ಪರಮಾನಂದದೊಳಗೆ ಪ್ರವೇಶಿಸಲು "ಬಾಗಿಲು ತೆರೆದಿಟ್ಟಿರುವದು" ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬಹುದು (2 ಪೇತ್ರ 1:10, 11) ಅಥವಾ ಪ್ರಕಟನೆಯ ಒಂದು "ಬಾಗಿಲು ತೆರೆದಿಟ್ಟಿರುವದು" ಆಗಿರಬಹುದು (4:1). ಹೇಗೂ, ಒಂದು "ಬಾಗಿಲು ತೆರೆದಿಟ್ಟಿರುವದು" ಎಂಬುದರ ಅತ್ಯಂಥ ಸಾಮಾನ್ಯವಾದ ಅರ್ಥವೆಂದರೆ ಒಂದು ಸದವಕಾಶವೆಂಬ ಅರ್ಥವಾಗಿರುತ್ತದೆ, ವಿಶೇಷವಾಗಿ ಸುವಾರ್ತಾಸೇವೆಯನ್ನು ಮಾಡುವದಕ್ಕೆ

ಸದವಕಾಶ. ಫಿಲದೆಲ್ಫಿಯ ಪಟ್ಟಣವು ಗ್ರೀಕ್ ಸಂಸ್ಕೃತಿಯನ್ನು ಪ್ರಸರಿಸುವದಕ್ಕಾಗಿ ಒಂದು ಮಿಶನರಿ ಪಟ್ಟಣವಾಗಿ Attalusನಿಂದ ಸ್ಥಾಪಿಸಲ್ಪಟ್ಟಿತ್ತಾದರೂ, ದೇವರು ಇದನ್ನು ಆಸ್ಯ ಸೀಮೆಯ ಪೂರ್ವ ದಿಕ್ಕಿನಲ್ಲಿನ ನಾಡುಗಳಿಗೆ ಸುವಾರ್ತೆಯನ್ನು ಪ್ರಸರಿಸುವದಕ್ಕಾಗಿ ಒಂದು ಮಿಶನರಿ ಕೇಂದ್ರವಾಗಿ ಉಪಯೋಗಿಸಲು ಶಕ್ತನಾಗಿದ್ದನು.

ಖಂಡಿತವಾಗಿಯೂ, ಸಭೆಯು ಸದವಕಾಶವನ್ನು ಬಳಸಿಕೊಳ್ಳಬೇಕಿತ್ತು. ಯೇಸು ಬಾಗಿಲನ್ನು ತೆರೆದು ನಮ್ಮನ್ನು ಒಳಗೆ ಬರುವಂತೆ ಆಮಂತ್ರಿಸುತ್ತಾನೆ, ಆದರೆ ಆತನು ನಮ್ಮನ್ನು ಒಳಗೆ ಒತ್ತಾಯದಿಂದ ತಳ್ಳುವದಿಲ್ಲ. ಫಿಲದೆಲ್ಫಿಯದಲ್ಲಿನ ಕ್ರೈಸ್ತರು ತಮಗೆ ಯೇಸು ನೀಡಿದ್ದ ಸದವಕಾಶದ ಪ್ರಯೋಜನವನ್ನು ಈಗಲೂ ತೆಗೆದುಕೊಳ್ಳುವ ಅಗತ್ಯವಿತ್ತು. ನಾವು ಪ್ರಯೋಜನವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲದಂತಹ ತೆರೆದ ಬಾಗಿಲನ್ನು ಕರ್ತನು ಎಂದಿಗೂ ನಮಗೆ ನೀಡುವದಿಲ್ಲ. ಒಬ್ಬರು ಹೀಗೆ ಹೇಳಿದ್ದಾರೆ, "ಕರ್ತನು ಆಜ್ಞಾಪಿಸುವ ವೇಳೆ, ಆತನು ಸಶಕ್ತರನ್ನಾಗಿ ಸಹ ಮಾಡುತ್ತಾನೆ."

**ಯಾರೂ ಅದನ್ನು ಮುಚ್ಚಲಾರರು** ಎಂಬ ಪದಗುಚ್ಛವು ಕೆಲವರು ಬಾಗಿಲನ್ನು ಮುಚ್ಚುವದಕ್ಕೆ *ಪ್ರಯತ್ನಿಸುವರೆಂಬ* ಸೂಚ್ಯಾರ್ಥವನ್ನು ನೀಡುತ್ತದೆ. 1 ಕೊರಿಂಥ 16:9ರಲ್ಲಿ ಪೌಲನು ಹೀಗೆ ಹೇಳಿದನು, "ಯಾಕೆಂದರೆ ಕಾರ್ಯಕ್ಕೆ ಅನುಕೂಲವಾದ ಮಹಾಸಂದರ್ಭವು (ದೊಡ್ಡ ಬಾಗಿಲು) ನನಗುಂಟು ಮತ್ತು *ವಿರೋಧಿಗಳ ಬಹಳ ಮಂದಿ ಇದ್ದಾರೆ"* (ಒತ್ತಿ ಹೇಳಿದ್ದು ನನ್ನದು) ಸುವಾರ್ತಾಸೇವೆಯು ಸುಲಭವಾಗಿರುವಂತೆ ಸೈತಾನನು ಎಂದಿಗೂ ಅವಕಾಶವನ್ನು ಕೊಡುವದಿಲ್ಲ. ಬಾಗಿಲು ತೆರೆಯಲ್ಪಟ್ಟಿರುವ ವೇಳೆ, ನೊಣಗಳು ಮತ್ತು ಇತರ ಕಿರಿಕಿರಿಯುಂಟು ಮಾಡುವ ಜೀವಿಗಳು ಒಳಗೆ ಬರಬಹುದಾಗಿದೆ ಎಂದು ಒಬ್ಬರು ಗಮನಕ್ಕೆ ತರುತ್ತಾರೆ. ಹೇಗೂ, ಫಿಲದೆಲ್ಫಿಯದಲ್ಲಿನ ಕ್ರೈಸ್ತರು ತಮ್ಮ ಸಾಮರ್ಥ್ಯಕ್ಕೆ ಸಾಧ್ಯವಾದಂಥದ್ದನ್ನು ಮಾಡುವದನ್ನು ಮುಂದುವರೆಸುವರು ಎಂಬುದರಲ್ಲಿ ಕರ್ತನಿಗೆ ಯಾವದೇ ಸಂಶಯವು ಇರಲಿಲ್ಲವೆಂದು ತೋರುತ್ತದೆ.

**ವಚನ 9.** ಇನ್ನೊಂದು ಅದ್ಭುತವಾದ ಫಲಿತಾಂಶವೆಂದರೆ ಅವರು ಆತನಲ್ಲಿಟ್ಟಿರುವ ನಂಬಿಕೆಗಾಗಿ ಸಮರ್ಥನೆ ಹೊಂದುವವರಾಗಿದ್ದರು: **ನಾನು ನಿನಗೆ ಅನುಗ್ರಹಿಸುವದೇನಂದರೆ ತಾವು ಯೆಹೂದ್ಯರೆಂದು ಸುಳ್ಳಾಗಿ ಕೊಚ್ಚಿಕೊಳ್ಳುವ ಸೈತಾನನ ಸಮಾಜದವರಲ್ಲಿ ಕೆಲವರು ಬಂದಿ ನಿನ್ನ ಪಾದಗಳ ಮುಂದೆ ಬೀಳುವಂತೆಯೂ ನಿನ್ನನ್ನು ನಾನು ಪ್ರೀತಿಸಿದ್ದನ್ನು ತಿಳುಕೊಳ್ಳುವಂತೆಯೂ ಮಾಡುವೆನು.**

**ಸೈತಾನನ ಸಮಾಜ** (ಸಭಾಮಂದಿರ) ಎಂಬ ಪದಗುಚ್ಛವು ಪುಸ್ತಕದಲ್ಲಿ ಈ ಮುಂಚೆ, ಸ್ಮುರ್ನಕ್ಕೆ ಬರೆದ ಪತ್ರದಲ್ಲಿ ಪರಿಚಯಿಸಲ್ಪಟ್ಟಿತು (2:9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ಪದವು ಒಂದು ಸಾಮಾನ್ಯವಾದ ಸಭಾಮಂದಿರವನ್ನು - ಯೇಸುವನ್ನು ಮೆಸ್ಸೀಯನೆಂದು ತಿರಸ್ಕಾರ ಮಾಡಿದ್ದ ಯೆಹೂದ್ಯರ ಒಂದು ಗುಂಪು - ಸೂಚಿಸುವದಾಗಿತ್ತು. ಯೇಸುವನ್ನು ಅಂಗೀಕರಿಸುವವರೇ "ನಿಜವಾದ" ಯೆಹೂದ್ಯರೆಂಬುದನ್ನು ಪೌಲನು ಒತ್ತಿ ಹೇಳಿದನು (ರೋಮಾ 2:28, 29). ಅಪನಂಬಿಕೆಯುಳ್ಳ ಯೆಹೂದ್ಯರು "ಸೈತಾನನ ಸಭಾಮಂದಿರ" ಎಂದು ಕರೆಯಲ್ಪಟ್ಟಿರುತ್ತಾರೆ ಯಾಕೆಂದರೆ ಅವರು ಸೈತಾನನ ಕೆಲಸವನ್ನು ಮಾಡುತ್ತಿದ್ದರು. ಯಾವದೇ ಖಂಡನೆಯನ್ನು ಪಡೆದುಕೊಳ್ಳದ ಎರಡು ಸಭೆಗಳಲ್ಲಿ - ಸ್ಮುರ್ನ ಮತ್ತು ಫಿಲದೆಲ್ಫಿಯ - ಹಲವಾರು ಸಂಗತಿಗಳು ಸಾಮಾನ್ಯವಾಗಿದ್ದವು: ಒಂದು ಸಂಗತಿಯೆಂದರೆ ಅವೆರಡೂ **ಯೆಹೂದ್ಯರಿಂದ** ಹಿಂಸೆಗೆ ಗುರಿಯಾಗಿದ್ದವು. ಕ್ರಿ.ಶ. 70ರಲ್ಲಿ ಯೆರೂಸಲೇಮಿನ ನಾಶನದ ಬಳಿಕ, ಸಭಾಮಂದಿರಗಳಲ್ಲಿ ಕ್ರೈಸ್ತರ ವಿರುದ್ಧವಾಗಿ ಹಗೆತನವು ಅಧಿಕವಾಗಿ ಹೆಚ್ಚುತ್ತಾ ಸಾಗಿತು.

ಫಿಲದೆಲ್ಫಿಯದಲ್ಲಿ, ಬಹುಶಃ ಯೆಹೂದ್ಯರು ಕ್ರೈಸ್ತರ ಮೇಲೆ ಇನ್ನೂ ಅಧಿಕವಾದ ಒತ್ತಡವನ್ನು ಹಾಕುವಂತೆ ರೋಮನ್ ಅಧಿಕಾರಿಗಳನ್ನು ಪ್ರೋತ್ಸಾಹಿಸುವದಕ್ಕೆ ತಮ್ಮ ರಾಜಕೀಯ ಪ್ರಭಾವವನ್ನು ಬಳಸುತ್ತಿದ್ದರು.

ಯೇಸುವು ಸ್ಮುರ್ನಕ್ಕೆ ಬರೆದ ಪತ್ರದಲ್ಲಿ, ಸಭೆಯು ಸೈತಾನನ ಸಭಾಮಂದಿರದಿಂದಾಗುವ ದಾಳಿಗಳನ್ನು ಸಹಿಸಿಕೊಂಡು ಉಳಿಯುವದು ಎಂಬುದನ್ನು ಆತನು ಪರೋಕ್ಷವಾಗಿ ಸೂಚಿಸಿದ್ದನು. ಆತನು ಫಿಲದೆಲ್ಫಿಯದಲ್ಲಿನ ಸಭೆಗೆ ಮಾಡಿದ ವಾಗ್ದಾನವು ಅದನ್ನು ದಾಟಿ ಸಾಗುವದಾಗಿತ್ತು: **ಅವರಲ್ಲಿ ಕೆಲವರು** [ಸೋಗಾಳಿ-ಯೆಹೂದ್ಯರು] **ಬಂದು ನಿನ್ನ ಪಾದಗಳ ಮುಂದೆ ಬೀಳುವಂತೆಯೂ ನಾನು ನಿನ್ನನ್ನು ಪ್ರೀತಿಸಿದ್ದನ್ನು ತಿಳುಕೊಳ್ಳುವಂತೆಯೂ ಮಾಡುವೆನು.** "ಪಾದಗಳ ಮುಂದೆ ಬೀಳುವಂತೆ" ಎಂಬುದನ್ನು ಅನುವಾದಿಸಿರುವ προσκυνέω (*proskuneō*) ಗ್ರೀಕ್ ಪದವು ಸಾಮಾನ್ಯವಾಗಿ "ಆರಾಧನೆ" ಎಂದು ಅನುವಾದಿಸಲ್ಪಡುವದಾಗಿದೆ (KJV). ASV ತರ್ಜುಮೆಯಲ್ಲಿ ಸಹ "ಆರಾಧನೆ" ಎಂದಿರುತ್ತದೆ, ಆದರೆ ಈ ಅಡಿಟಿಪ್ಪಣಿಯನ್ನು ಸೇರ್ಪಡೆಗೊಳಿಸಿರುತ್ತದೆ: "ಗ್ರೀಕ್ ಪದವು ಒಂದು ಗೌರವ ಸೂಚಕ ಕ್ರಿಯೆಯನ್ನು ಸೂಚಿಸುತ್ತದೆ, ಅದು ಒಂದು *ಸೃಷ್ಟಿಜೀವಿಗೆ* ಸಲ್ಲಿಸಿದ್ದಾಗಿರಬಹುದು, ಅಥವಾ ಸೃಷ್ಟಿಕರ್ತನಿಗೆ ಸಲ್ಲಿಸಿದ್ದಾಗಿರಬಹುದು" (ಒತ್ತಿ ಹೇಳಿದ್ದು ನನ್ನದು). ಅನ್ಯಜನರು ಒಂದು ದಿನ ಯೆಹೂದ್ಯರ ಪಾದಗಳಿಗೆ ಅಡ್ಡ ಬೀಳುವರು ಮತ್ತು ಅವರು ಸತ್ಯ ದೇವರನ್ನು ಆರಾಧಿಸುವವರು ಎಂಬುದನ್ನು ಒಪ್ಪಿಕೊಳ್ಳುವರು ಎಂಬುದರ ಕುರಿತು ಯೆಶಾಯನು ಹೇಳಿದ್ದನು (ನೋಡಿರಿ ಯೆಶಾಯ 49:23; 60:3, 14). ಯೇಸುವು ಈ ವಾಗ್ದಾನಕ್ಕೆ ಒಂದು ತಿರುವು ನೀಡುತ್ತಾನೆ; ಈಗ ಒಪ್ಪಿಕೊಳ್ಳುವ ಕೆಲಸವನ್ನು ಯೆಹೂದ್ಯರು ಮಾಡಲಿದ್ದರು.

೯ನೇ ವಚನವು ಫಿಲದೆಲ್ಫಿಯದಲ್ಲಿನ ಯೆಹೂದ್ಯರು ಕ್ರೈಸ್ತರಾಗುವದನ್ನು ಸೂಚಿಸುತ್ತದೆಂದು ಕೆಲವರು ನಂಬುತ್ತಾರೆ; ಅದು ಸಭೆಗಾಗಿ "ಬಾಗಿಲು ತೆರೆದಿಟ್ಟಿರುವದರ" ಭಾಗವಾಗಿತ್ತೆಂದು ಅವರು ಯೋಚಿಸುತ್ತಾರೆ. ಪತ್ರದ ಆರಂಭದಲ್ಲಿನ ಬಣ್ಣನೆಯು ಆತನ ಮೆಸ್ಸೀಯತ್ವದ ಗುಣಗಳನ್ನು ಒತ್ತಿ ಹೇಳುತ್ತದೆಂದು ಅವರು ಗಮನಕ್ಕೆ ತರುತ್ತಾರೆ. ಅಲ್ಲದೆ ಪ್ರಕಟನೆ ಪುಸ್ತಕವು ಬರೆಯಲ್ಪಟ್ಟು ಇಪ್ಪತ್ತು ವರ್ಷಗಳ ಬಳಿಕ, ಫಿಲದೆಲ್ಫಿಯದಿಂದ ಮತ್ತು ಫಿಲದೆಲ್ಫಿಯಕ್ಕೆ ಬರೆದ ಪತ್ರಗಳಲ್ಲಿ ಸಭೆಯಲ್ಲಿ ಯೆಹೂದಿಕರಣಗೊಳಿಸುವ ಬೋಧಕರ ಹಾವಳಿಯು ಇತ್ತೆಂಬುದು ಸೂಚಿಸುತ್ತದೆ - ಕೆಲವು ಯೆಹೂದ್ಯರು ಕ್ರೈಸ್ತರಾಗಿದ್ದರು[11] - ಎಂಬುದನ್ನು ಸಹ ಅವರು ಗಮನಕ್ಕೆ ತರುತ್ತಾರೆ. ವಚನವನ್ನು ಈ ವಿಧದಲ್ಲಿ ಅರ್ಥೈಸುವ ದಾರಿಯನ್ನು ಅನುಸರಿಸುವವರು "ದುರ್ದೈವಿಗಳು ಹಾಗೂ ವಿಜಯಿಶಾಲಿಗಳು ಸಮಾನವಾಗಿ ಜಯದಲ್ಲಿ ಪಾಲುಗಾರರಾಗುವರು" ಎಂಬ ಕುರಿತು ಮಾತಾಡುತ್ತಾರೆ.

ಇನ್ನು ಕೆಲವರು ಈ ವಾಗ್ದಾನವು ಮನಸ್ಸಿನಲ್ಲಿ ಬೈದುಕೊಳ್ಳುತ್ತಲೇ ಕ್ರೈಸ್ತರು ಸಹ ದೇವರ ವಿಶೇಷ ಜನರಾಗಿದ್ದಾರೆಂಬುದನ್ನು ಒಪ್ಪಿಕೊಳ್ಳುವರೆಂಬುದಾಗಿ ಅಭಿಪ್ರಾಯ ಪಡುತ್ತಾರೆ. ಆ ಪದಗಳ ಅರ್ಥವು ಬೇರೆ ಏನೇ ಆಗಿದ್ದರೂ ಸರಿಯೇ, ಎಲ್ಲಾ ಅವಿಶ್ವಾಸಿಗಳೂ ಯೇಸುವನ್ನು ದೇವರ ಕುಮಾರನೆಂದು ಒಪ್ಪಿಕೊಳ್ಳುವಂಥ ಒಂದು ದಿನವು ಬರುತ್ತದೆಂದು ಬೈಬಲ್ ಕಲಿಸುತ್ತದೆ - ಮತ್ತು ಆ ಕಾರಣದಿಂದ ಆತನನ್ನು ಹಿಂಬಾಲಿಸಿದವರು ಸರಿಯೇ ಎಂಬುದು ಸಾಭಿತುಪಡಿಸಲ್ಪಡುತ್ತದೆ:

> ನನ್ನ ಜೀವದಾಣೆ, ಎಲ್ಲರೂ ನನಗೆ ಅಡ್ಡ ಬೀಳುವರು . . . ಎಂದು ಬರೆದದೆ (ರೋಮಾ 14:11).

. . . ಸ್ವರ್ಗ ಮರ್ತ್ಯಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು (ಫಿಲಿಪ್ಪಿ 2:10, 11).

**ವಚನ 10.** ಅಲ್ಲದೆ ತಾನು ನಿರಂತರವಾಗಿ ಕಾಪಾಡುವೆನೆಂಬ ಭರವಸವನ್ನು ಸಹ ಯೇಸುವು ಫಿಲದೆಲ್ಫಿಯದ ಸಭೆಗೆ ನೀಡಿದನು: **ನೀನು ನನ್ನ ಸಹನವಾಕ್ಯವನ್ನು ಕಾಪಾಡಿದ್ದರಿಂದ ಭೂನಿವಾಸಿಗಳನ್ನು ಪರೀಕ್ಷಿಸುವದಕ್ಕಾಗಿ ಲೋಕದ ಮೇಲೆಲ್ಲಾ ಬರುವದಕ್ಕಿರುವ ಶೋಧನೆಯ ಸಮಯದಲ್ಲಿ ನಿನ್ನನ್ನು ತಪ್ಪಿಸಿ ಕಾಪಾಡುವೆನು.** ಅವರು ಗತಕಾಲದಲ್ಲಿ ಹಿಂಸಿಸಲ್ಪಟ್ಟಿದ್ದರು, ಮತ್ತು ಇನ್ನಷ್ಟು ಘೋರವಾದ ಸಂಕಷ್ಟಗಳು ಕಾದಿದ್ದವು, ಆದರೆ ಯೇಸುವು ಅವರ ಸಂಗಡ ಇರುವವನಾಗಿದ್ದನು. ಆತನು ಬಳಸಿದ ಶಬ್ದಾಡಂಭರವನ್ನು ಗಮನಿಸಿರಿ: ಅವರು ಆತನ ವಾಕ್ಯವನ್ನು **ಕಾಪಾಡಿದ್ದರಿಂದ** (ἐτήρησας, *etērēsas*), ಆತನು ಅವರನ್ನು **ಕಾಪಾಡುವೆನು** (τηρήσω, *tērēsō*) ಎಂದು ಹೇಳಿದನು.

**ನನ್ನ ಸಹನವಾಕ್ಯ** ಎಂಬುದು ಒಂದು ಸಹಜವಾದ ಪದಗುಚ್ಛವಾಗಿದ್ದು ಬಹುಶಃ "ನನ್ನ ಸ್ಥೈರಣೆಯ *ಕುರಿತು ಹೇಳುವ* ವಾಕ್ಯ" ಎಂದರ್ಥವಾಗಿರಬಹುದು. ಸ್ಥಿರವಾಗಿರುವಿಕೆಯ ವಿಷಯದಲ್ಲಿ, ಯೇಸುವು ನಮಗೊಂದು ಮಾದರಿಯನ್ನು ತೋರಿಸಿದ್ದಾನೆ (ಇಬ್ರಿಯ 12:2, 3). ಆತನು ಸಹಿಸಿಕೊಳ್ಳುವದನ್ನು ಕೇವಲ ಬೋಧಿಸಲಿಲ್ಲ (ಮತ್ತಾಯ 24:13) ಆದರೆ ಕಾರ್ಯರೂಪದಲ್ಲಿ ಸಹ ನಡೆದುಕೊಂಡನು.

**ಶೋಧನೆಯ ಸಮಯದಲ್ಲಿ** ಎಂಬ ಪದಗುಚ್ಛವು ತಕ್ಷಣದ ಭವಿಷ್ಯದಲ್ಲಿ ಹಿಂಸೆಯು ಅಧಿಕಗೊಳ್ಳುವದನ್ನು ಸೂಚಿಸುತ್ತದೆ. ಅನೇಕ ಸಹಸ್ರವರ್ಷಾಡಳಿತಪೂರ್ವವಾದಿಗಳು ಕಲಿಸುವದೇನೆಂದರೆ "ಶೋಧನೆಯ ಸಮಯ" ವು ಯೇಸುವಿನ ಸಹಸ್ರವರ್ಷ ಆಳ್ವಿಕೆಗೆ ಸ್ವಲ್ಪ ಮುಂಚೆ ಭೂಮಿಯ ಮೇಲೆ ಸಂಭವಿಸುವ ಏಳು ವರ್ಷಗಳ ಕಾಲದ ಸಂಕಷ್ಟವನ್ನು ಸೂಚಿಸುತ್ತದೆ ಎಂಬುದೆ. ಹೇಗೂ, ಈ "ಶೋಧನೆಯ ಸಮಯ" ವು **ಲೋಕದ ಮೇಲೆಲ್ಲಾ** *ಬರುವದಕಿತ್ತು* ಎಂಬುದನ್ನು ಗಮನಿಸಿರಿ (ಒತ್ತಿ ಹೇಳಿದ್ದು ನನ್ನದು). ಯೇಸುವು ಇಪ್ಪತ್ತು ಶತಮಾನಗಳ ಬಳಿಕ ಸಂಭವಿಸುವದಕ್ಕಿರುವ ಸಂಕಷ್ಟ ಕಾಲಾವಧಿಯ ಕುರಿತಾಗಿ ಮಾತಾಡುತ್ತಿಲ್ಲ, ಆದರೆ ಭವಿಷ್ಯದಲ್ಲಿ ತಕ್ಷಣದಲ್ಲಿ ಸಂಭವಿಸುವ ಸಮಸ್ಯೆಗಳ ಕುರಿತು ಹೇಳುತ್ತಿದ್ದಾನೆ. 6ರಿಂದ 19 ಅಧ್ಯಾಯಗಳು ಆ ಶೋಧನೆಯ ಭಯಂಕರವಾದ ಕಾಲವನ್ನು ಕುರಿತು ಹೇಳುವದಕ್ಕೆ ವಿವಿಧ ಸಂಕೇತಗಳನ್ನು ಬಳಸುತ್ತವೆ. ಈ "ಶೋಧನೆಯ ಸಮಯ" ವು ಕೇವಲ ಕ್ರೈಸ್ತರ ಮೇಲೆ ಮಾತ್ರವೇ ಬರುವದಾಗಿರಲಿಲ್ಲ, ಆದರೆ "ಲೋಕದ ಮೇಲೆ*ಲ್ಲಾ*" ಬರುವದಕಿತ್ತು ಎಂಬುದನ್ನು ಗಮನಿಸಿರಿ (ಒತ್ತಿ ಹೇಳಿದ್ದು ನನ್ನದು). ಈ ಪದಗುಚ್ಛವು ಇಡೀ ಭೂಮಿಯನ್ನು, ಜನರು ವಾಸಿಸುವ ಇಡೀ ಲೋಕವನ್ನು, ಅಥವಾ ರೋಮನ್ ಸಾಮ್ರಾಜ್ಯವನ್ನು ಸೂಚಿಸುತ್ತಿರಬಹುದಾಗಿದೆ. ಪ್ರಕಟನೆ ಪುಸ್ತಕದಲ್ಲಿ ರೋಮನ್ ಸಾಮ್ರಾಜ್ಯದ ಬಗ್ಗೆಯೇ ಪ್ರಾಥಮಿಕ ಕಳಿಕಳಿಯಿರುತ್ತದೆ.

ಕಠಿಣವಾದ ಸಮಯವು **ಭೂನಿವಾಸಿಗಳನ್ನು ಪರೀಕ್ಷಿಸುವ**ದಾಗಿತ್ತು. ಪ್ರಕಟನೆ ಪುಸ್ತಕದಲ್ಲಿ, "ಭೂನಿವಾಸಿಗಳು" ಎಂಬ ಯೋಚನೆಯು ಅವಿಶ್ವಾಸಿಗಳನ್ನು ಸೂಚಿಸುತ್ತದೆ (6:10; 8:13; 11:10; 13:8, 14; 17:8). ದೇವರು ಅನುಮತಿಸುವಾಗ ಸಮಸ್ಯೆಗಳು ಭೂಮಿಯ ಮೇಲೆ ಬೀಳುವವು, ಪರೀಕ್ಷಿಸುವದರ ಒಂದು ಉದ್ದೇಶವೆಂದರೆ ಜನರನ್ನು ಪಶ್ಚಾತ್ತಾಪಕ್ಕೆ ಕರೆ ತರುವದೇ ಆಗಿರುತ್ತದೆ (ನೋಡಿರಿ 2 ಪೇತ್ರ 3:9). ಪ್ರಕಟನೆ ಪುಸ್ತಕದೊಳಗೆ ಅನಂತದರಲ್ಲಿ, ಅವರ ಮೇಲೆ ದುರಂತವು ಸಂಭವಿಸಿದಾಗ "ಭೂನಿವಾಸಿಗಳು" *ಪಶ್ಚಾತ್ತಾಪ ಪಡಲಿಲ್ಲ* ಎಂಬುದು ಸ್ಪಷ್ಟವಾಗಿ

ಕಾಣಿಸುತ್ತದೆ (9:20, 21; 16:9, 11). ಹಾಗಿದ್ದರೂ, ದೇವರು ಬಣ್ಣಿಸಲಾಗಿರುವ ಭಯಾನಕ ವಿನಾಶಗಳಲ್ಲಿ ಏನನ್ನು ಸಾಧಿಸುವದಕ್ಕೆ ಪ್ರಯತ್ನಿಸುತ್ತಿದ್ದಾನೆಂಬುದನ್ನು ಅರ್ಥಮಾಡಿಕೊಳ್ಳುವದರಲ್ಲಿ ಪಶ್ಚಾತ್ತಾಪವು ಪ್ರಮುಖ ಭಾವನೆಯಾಗಿರುತ್ತದೆ. ಪರೀಕ್ಷಿಸುವದಕ್ಕಿರುವ ಇತರ ಉದ್ದೇಶಗಳನ್ನು ಪ್ರಸ್ತಾಪಿಸಬಹುದಾಗಿದೆ. ಉದಾಹರಣೆಗೆ, ಪರೀಕ್ಷಿಸುವಂತದ್ದು ಯಾವದು ಪರೀಕ್ಷಿಸಲ್ಪಡುತ್ತಿದೆಯೋ ಅದರ ನಿಜವಾದ ಸ್ವಭಾವವನ್ನು ಬಯಲಿಗೆ ತರುವದು: ಪಶ್ಚಾತ್ತಾಪ ಪಡದವರು ಪರೀಕ್ಷೆಯಲ್ಲಿ ವಿಫಲರಾಗುವರು ಮತ್ತು ಸತ್ಯ ದೇವರನ್ನು ವಿರೋಧಿಸುವವರು ಎಂಬದು ಬಯಲಿಗೆ ಬರುವದು. ಹಳೆಯ ಒಡಂಬಡಿಕೆಯಲ್ಲಿನ ಒಂದು ಸಮಾನಾರ್ಥ ಹೋಲಿಕೆಗಾಗಿ, ಧರ್ಮೋಪದೇಶಕಾಂಡ 4:34; 7:19; 29:2, 3ರಲ್ಲಿ "ಶೋಧನೆ" (ಅಂದರೆ, ಪರೀಕ್ಷೆ) ಎಂಬ ಪದವನ್ನು ಹುಡುಕಿರಿ.

10ನೇ ವಚನದಲ್ಲಿ ಯೇಸುವು ಹೇಳಲಿಚ್ಛಿಸಿದ ಪ್ರಮುಖ ಅಂಶವೆಂದರೆ ಆತನು ಕ್ರೈಸ್ತರನ್ನು "ಶೋಧನೆಯ ಸಮಯದಲ್ಲಿ" ಕಾಪಾಡುವನು (ಕಾಯುವನು ಮತ್ತು ರಕ್ಷಿಸುವನು) ಎಂಬುದೆ. **ದಲ್ಲಿ** ಎಂಬುದು ἐκ (*ek*) ಎಂಬ ಗ್ರೀಕ್ ಉಪಸರ್ಗದಿಂದ ಬಂದದ್ದಾಗಿದ್ದು ಅದರರ್ಥವು "ಅದರೊಳಗಿಂದ" ಎಂದಾಗಿರುತ್ತದೆ. ಈ ಸನ್ನಿವೇಶದಲ್ಲಿ, ಉಪಸರ್ಗವು "*ಅದರಿಂದ ನಿರೋಧತೆ*, ಅಥವಾ . . . *ಸುರಕ್ಷಿತವಾಗಿ ಅದರಿಂದ ತಪ್ಪಿಸಿ ಕರೆ ತರುವದು*" ಎಂಬುದನ್ನು ಸೂಚಿಸಬಹುದಾಗಿದೆ.[12] ಕ್ರೈಸ್ತರು ಯುದ್ಧ, ಕ್ಷಾಮ, ಮತ್ತು ವ್ಯಾಧಿಗಳಿಗೆ ಒಳಗಾಗದೆ ನಿರೋಧಕತೆಯನ್ನು ಹೊಂದಿರುವ ಹಾಗೆ ಯೇಸು ಅವರಿಗೆ ಅದ್ಭುತಕರವಾಗಿ ಪ್ರತಿರೋಧತೆಯೊಳಗೆ ತರಲಿಲ್ಲ. ಯಾವ ಖಡ್ಗವಾಗಲಿ, ಬಾಣಗಳಾಗಲಿ ಮತ್ತು ಕೊಡಲಿಗಳಾಗಲಿ ತೂರಿಕೊಂಡು ಬರಲಾಗದಂಥ ಅಗೋಚರವಾದ ತಡೆಗೋಡೆಯನ್ನು ಆತನು ಅವರ ಸುತ್ತಲೂ ನಿರ್ಮಿಸಲಿಲ್ಲ. ಪರೀಕ್ಷೆಯು ಮುಗಿಯುವದರೊಳಗೆ ಅನೇಕ ಕ್ರೈಸ್ತರು ಮರಣಿಸಲಿದ್ದರು (ನೋಡಿರಿ 6:9; 17:6). ಆದದರಿಂದ ಯೇಸುವಿನ ವಾಗ್ದಾನದ ಅರ್ಥವು ಆತನು ಪರೀಕ್ಷೆಯ ಮೂಲಕ "ಅವರನ್ನು ಸುರಕ್ಷಿತವಾಗಿ ಕರೆ ತರುವನು" ಎಂದಾಗಿರತಕ್ಕದ್ದು (7:3, 4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಫಿಲದೆಲ್ಫಿಯದ ಕ್ರೈಸ್ತರು ಆ ದಿನದ ಕೆಲವೊಂದು ಸಮಸ್ಯೆಗಳಿಂದ ತಪ್ಪಿಸಿಕೊಂಡರೆಂದು ಕೆಲವರು ನಂಬುತ್ತಾರೆ. ಭೂಕಂಪಗಳಿಗೆ ಹೆದರಿ Trajanನು ಫಿಲದೆಲ್ಫಿಯದಿಂದ ದೂರ ಉಳಿದನು, ಮತ್ತು ಕೊಳ್ಳೆ ಹೊಡೆಯುವರು ಬಾರ್ಬೆರಿಯನ್ನರು ಫಿಲದೆಲ್ಫಿಯದಲ್ಲಿ ಬೃಹತ್ ಪಟ್ಟಣಗಳಿಗಿಂತಲೂ ಕಡಿಮೆ ಐಶ್ವರ್ಯಗಳಿದ್ದ ಕಾರಣ ಅದನ್ನು ದಾಟಿಕೊಂಡು ಹೋದರು ಎಂದು ಅವರು ಹೇಳುತ್ತಾರೆ. ಈ ತಾತ್ಕಾಲಿಕವಾದ ವಿನಾಯಿತಿಗಳು ಯೇಸುವಿನ ವಾಗ್ದಾನದ ಭಾಗವಾಗಿರಬಹುದು ಅಥವಾ ಆಗಿರದೆಯೂ ಇರಬಹುದು, ಆದರೆ ಯೇಸುವು ತನ್ನ ಜನರಿಗೆ ನೀಡಿದ *ಪ್ರಾಥಮಿಕ* ಭದ್ರತೆಯು *ಆತ್ಮೀಕವಾಗಿತ್ತೇ*, ಹೊರತು ದೈಹಿಕವಲ್ಲ ಎಂಬುದನ್ನು ಪ್ರಕಟನೆಯ ಪುಸ್ತಕದ ಉಳಿದ ಭಾಗವು ಒತ್ತಿ ಹೇಳುತ್ತದೆ.

**ವಚನ 11.** ಕರ್ತನ ಅನುಗ್ರಹವು ಸಭೆಯ ನಂಬಿಗಸ್ತಿಕೆಯ ಮೇಲೆ ಅವಲಂಬಿತವಾಗಿರಲಿತ್ತು. ಅವರು ದೃಢವಾಗಿರುವದಕ್ಕಾಗಿ ಯಾವ ರೀತಿಯ ಸ್ಫೂರ್ತಿಯ ಅಗತ್ಯತೆಯು ಅವರಿಗಿದೆ ಎಂಬುದು ಯೇಸುವಿಗೆ ಗೊತ್ತಿತ್ತು. ಈ ಕ್ರೈಸ್ತರಿಗೆ ಯೇಸುವಿನ ಪ್ರಸನ್ನತೆಯ ಬಗ್ಗೆ ಭರವಸವು ನೀಡಲ್ಪಡುವ ಅಗತ್ಯವಿತ್ತು, ಆದ್ದರಿಂದ ಆತನು ಹೀಗೆ ಹೇಳಿದನು, **ಬೇಗನೆ ಬರುತ್ತೇನೆ** - ಅವರಿಗೆ ಭದ್ರತೆಯನ್ನು ನೀಡುವದಕ್ಕೆ ಮತ್ತು ಅವರ ವೈರಿಗಳನ್ನು ದಂಡಿಸುವದಕ್ಕೆ ಬರಲಿರುವನು. "ಬೇಗನೆ ಬರುತ್ತೇನೆ" ಎಂಬ ಪದಗುಚ್ಛವು ಒಂದು ತಾತ್ಕಾಲಿಕ ಬರೋಣ (ಅವರ ಜೀವಿತಾವಧಿಯಲ್ಲಿ "ಬರುವದು") ಅಥವಾ ಎರಡನೆಯ

ಬರೋಣ ಇವೆರಡರಲ್ಲಿ ಒಂದನ್ನು ಸೂಚಿಸುತ್ತಿರಬಹುದಾಗಿದೆ. ಯೇಸುವು ಯಾವ ಗಳಿಗೆಯಲ್ಲಾದರೂ ಬರಬಲ್ಲನು ಎಂಬರ್ಥದಲ್ಲಿ ಎರಡನೆಯ ಬರೋಣವನ್ನು "ಸನ್ನಿಹಿತ" ಎಂಬುದಾಗಿ ಯೋಚಿಸಬಹುದು (ನೋಡಿರಿ ಫಿಲಿಪ್ಪಿ 4:5; ಯಾಕೋಬ 5:7, 9), ಆದರೆ ಸನ್ನಿವೇಶವು ಒಂದು ತಾತ್ಕಾಲಿಕ ಬರೋಣದ ಕಡೆಗೆ ಬೆಂಬಲವನ್ನು ವ್ಯಕ್ತಪಡಿಸುತ್ತದೆ.

ಅಲ್ಲದೆ ಸೋತು ಹೋಗಬಾರದೆಂದು ಅವರನ್ನು ಪ್ರೋತ್ಸಾಹಿಸುವ ಅಗತ್ಯವೂ ಇತ್ತು, ಆದ್ದರಿಂದ ಯೇಸುವು ಅವರನ್ನು ಹೀಗೆ ಬೇಡಿಕೊಳ್ಳುತ್ತಾನೆ, **ನಿನಗಿರುವದನ್ನು ಹಿಡಿದುಕೊಂಡಿರು; ನಿನ್ನ ಜಯಮಾಲೆಯನ್ನು ಯಾರೂ ಅಪಹರಿಸಬಾರದು. ಜಯಮಾಲೆ** ಎಂಬುದು 2:10ರಲ್ಲಿ ಪ್ರಸ್ತಾಪಿಸಲಾಗಿರುವ ಅದೇ ಜಯಮಾಲೆಯೇ ಆಗಿರುತ್ತದೆ - *stephanos,* ಜಯದ ಕಿರೀಟ. ನಂಬಿಗಸ್ತನಾದ ಪ್ರತಿಯೊಬ್ಬ ಕ್ರೈಸ್ತನಿಗಾಗಿ ಪರಲೋಕದಲ್ಲಿ ಜಯಮಾಲೆಯೊಂದು ಕಾಯ್ದಿರಿಸಲ್ಪಟ್ಟಿದೆ (2 ತಿಮೊಥೆ 4:8), ಆದರೆ ಆ ಜಯಮಾಲೆಯನ್ನು ಕಳೆದುಕೊಳ್ಳುವದು ಸಾಧ್ಯವಿರುತ್ತದೆ. ಅದನ್ನು ತಡೆಗಟ್ಟಬೇಕಾದರೆ, ಫಿಲದೆಲ್ಫಿಯದ ಕ್ರೈಸ್ತರು ತಮಗಿರುವದನ್ನು ಹಿಡಿದುಕೊಂಡಿರಬೇಕಾಗಿತ್ತು. ಜಯಮಾಲೆಯು (ಅಂದರೆ, ರಕ್ಷಣೆಯು) ಕಳೆದು ಹೋಗಬಲ್ಲದು ಎಂಬುದನ್ನು ಒತ್ತಿ ಹೇಳುವದಕ್ಕೆ ಯೇಸುವು ಒಬ್ಬ ಕಳ್ಳನಿಂದ ಕದ್ದುಕೊಳ್ಳಲ್ಪಟ್ಟ ನಿಕ್ಷೇಪದ ಸಂಕೇತವನ್ನು ಬಳಸುತ್ತಾನೆ, ಆದರೆ ಆತನು ಇಲ್ಲಿ ಒಬ್ಬ ಕ್ರೈಸ್ತನ ರಕ್ಷಣೆಯನ್ನು ಬೇರೊಬ್ಬನು ತನಗೋಸ್ಕರ ತೆಗೆದುಕೊಂಡು ನಿತ್ಯತ್ವದುದ್ದಕ್ಕೂ ಆ ರಕ್ಷಣೆಯನ್ನು ಆನಂದಿಸಬಲ್ಲನು ಎಂಬುದನ್ನು ಬೋಧನೆ ಮಾಡುತ್ತಿಲ್ಲ.

ಫಿಲದೆಲ್ಫಿಯದ ಕ್ರೈಸ್ತರ ಸ್ವತ್ತು ಸ್ವಲ್ಪವೇ ಆಗಿದ್ದಿರಬಹುದು - ಆದರೆ ಪ್ರಾಮುಖ್ಯವಾದ ಸಂಗತಿಗಳ ವಿಷಯವಾಗಿ, ಅವರು ಅಧಿಕವಾಗಿ ಹೊಂದಿದ್ದರು: ಅವರಲ್ಲಿ ರಕ್ಷಣೆ, ವಾಕ್ಯ, ಕರ್ತನಲ್ಲಿ ನಂಬಿಕೆ, ದೇವರು ಅವರಿಗೆ ಕೊಟ್ಟಿದ್ದ ಕೊಂಚ ಶಕ್ತಿ, ಹೊಸ ಸದವಕಾಶಗಳು, ಮತ್ತು ಯೇಸುವಿನ ವಾಗ್ದಾನಗಳು ಇದ್ದವು. ದೇವರು ಅವರಿಗೆ ಕೊಟ್ಟಿರುವದನ್ನು ಅವರು ಗಟ್ಟಿಯಾಗಿ ಹಿಡಿದುಕೊಳ್ಳಬೇಕಾಗಿತ್ತು ಮತ್ತು ಎಂದಿಗೂ, ಎಂದೆಂದಿಗೂ ಕೈ ಬಿಟ್ಟು ಹೋಗುವದಕ್ಕೆ ಅವಕಾಶ ಕೊಡಬಾರದಿತ್ತು. ಪೌಲನು ಕ್ರೈಸ್ತರ ಒಂದು ಗುಂಪಿಗೆ "ನಾನು ಯಾವ ಸಂಗತಿಯನ್ನು ನಿಮಗೆ ಹೇಳಿ ಸುವಾರ್ತೆಯನ್ನು ತಿಳಿಸಿದೆನೋ ಅದನ್ನು ಗಟ್ಟಿಯಾಗಿ ಹಿಡುಕೊಂಡರೆ" ಅವರು ರಕ್ಷಣೆ ಹೊಂದುವರು ಎಂಬುದಾಗಿ ಹೇಳಿದನು (1 ಕೊರಿಂಥ 15:2; ಒತ್ತಿ ಹೇಳಿದ್ದು ನನ್ನದು). "ಗಟ್ಟಿಯಾಗಿ ಹಿಡುಕೊಂಡರೆ" ಎಂಬುದು ಗ್ರೀಕ್ ಭಾಷೆಯ κράτει (*kratei*, ಇದು κρατέω, *krateō* ಎಂಬುದರಿಂದ ಬಂದದ್ದು) ಒಂದೇ ಕ್ರಿಯಾಪದದ ಅನುವಾದವಾಗಿರುತ್ತದೆ, ಅದು ವರ್ತಮಾನಕಾಲ ಆಜ್ಞಾರ್ಥಕ ರೂಪದಲ್ಲಿದ್ದು, ನಿರಂತರವಾದ ಕ್ರಿಯೆಯನ್ನು ಸೂಚಿಸುತ್ತದೆ. ಅವರಿಗೆ "ಗಟ್ಟಿಯಾಗಿ ಹಿಡುಕೊಂಡಿರುವದನ್ನು" ನಿರಂತರವಾಗಿ *ಮುಂದುವರೆಸಬೇಕು* ಎಂದು ಉಪದೇಶಿಸಲ್ಪಟ್ಟರು.

**ವಚನ 12.** ಫಿಲದೆಲ್ಫಿಯದಲ್ಲಿನ ಸಭೆಗೆ ಬರೆದ ಪತ್ರದೊಳಗೆ ಈ ಹಂತದ ತನಕ, ಯೇಸುವಿನ ವಾಗ್ದಾನಗಳು ಪ್ರಾಥಮಿಕವಾಗಿ ಆತನು ಈ ಜೀವಿತದಲ್ಲಿ ನಂಬಿಗಸ್ತರಿಗೆ ಏನು ಮಾಡುವನೆಂಬುದರ ಸುತ್ತಲು ಕೇಂದ್ರಕೃತವಾಗಿತ್ತು. ಆತನು ಮುಕ್ತಾಯಗೊಳಿಸುವ ಮುನ್ನ, ಮುಂಬರುವ ಜೀವಿತದಲ್ಲಿ ಅವರಿಗಾಗಿ ಏನು ಇಡಲ್ಪಟ್ಟಿದೆ ಎಂಬುದನ್ನು ಅವರು ತಿಳಿದುಕೊಳ್ಳಬೇಕೆಂದು ಆತನು ಬಯಸಿದನು: **ಯಾವನು ಜಯ ಹೊಂದುತ್ತಾನೋ ಅವನನ್ನು ನನ್ನ ದೇವರ ಆಲಯದಲ್ಲಿ ಸ್ತಂಭವಾಗಿ ನಿಲ್ಲಿಸುವೆನು; ಅವನು ಇನ್ನು ಮೇಲೆ ಅದರೊಳಗಿಂದ ಹೋಗುವದೇ ಇಲ್ಲ.**

**ಸ್ತಂಭ**ದ ಸಂಕೇತವು ಆಸರೆಯನ್ನು ನೀಡುವ ಮತ್ತು ಪೋಷಿಸುವ ಒಂದು ಸಂಗತಿಯನ್ನು

ಸೂಚಿಸುತ್ತದೆ (1 ತಿಮೊಥೆ 3:15) ಅಥವಾ ಪ್ರಮುಖನಾಗಿರುವವನನ್ನು ಸೂಚಿಸುತ್ತದೆ (ಗಲಾತ್ಯ 2:9). ಕೆಲವು ಕಟ್ಟಡಗಳು ಸ್ತಂಭಗಳನ್ನು ಹೊಂದಿರುತ್ತವೆ, ಮತ್ತು ಪ್ರಮುಖರಾದ ವ್ಯಕ್ತಿಗಳ ವಿಷಯದಲ್ಲಿ, ನಾವು ಈಗಲೂ "ಆತನು ಬಲದ ಸ್ತಂಭವಾಗಿದ್ದನು" ಅಥವಾ "ಆತನು ಸಮುದಾಯದಲ್ಲಿ ಒಂದು ಸ್ತಂಭವಿದ್ದಂತೆ" ಎಂಬಂತಹ ಮಾತುಗಳನ್ನು ಬಳಸುತ್ತೇವೆ. ಹೊಸ ಒಡಂಬಡಿಕೆಯ ಕಾಲದಲ್ಲಿ, "ಒಂದು ಸ್ತಂಭ" ಎಂಬ ಭಾವನೆಗೆ ಇನ್ನಷ್ಟು ಅಧಿಕಾರ್ಥಗಳಿದ್ದವು. ಕೆಲವು ಸಾರಿ ವ್ಯಕ್ತಿಗಳ ಗೌರವಾರ್ಥವಾಗಿ ಸ್ತಂಭಗಳನ್ನು ನಿರ್ಮಿಸಲಾಗುತ್ತಿತ್ತು. ಆ ಸ್ತಂಭಗಳ ಮೇಲೆ ಹೆಸರುಗಳನ್ನು ಕೆತ್ತಲಾಗಿರುತ್ತಿತ್ತು, ಅದರ ಜೊತೆಗೆ ಗೌರವಿಸಲ್ಪಟ್ಟವರ ಕುರಿತ ಮಾಹಿತಿ ಇರುತ್ತಿತ್ತು, ಅವುಗಳು ಇಂದು ಪ್ರದರ್ಶನಕ್ಕೆ ಇಡಲಾಗುವ ಸ್ಮರಣೆಯ ಫಲಕಗಳು, ಅಥವಾ ಇತರ ವಿಧವಾದ ಸ್ಮಾರಕಗಳ ರೀತಿಯಲ್ಲಿಯೇ ಇದ್ದವು. ಹಲವಾರು ಪ್ರಾಚೀನ ಸ್ತಂಭಗಳು ಇಂದಿಗೂ ಫಿಲದೆಲ್ಫಿಯದಲ್ಲಿ ನಿಂತುಕೊಂಡಿರುತ್ತವೆ, ಅವುಗಳ ಮೇಲೆ ವೀರರ ಹೆಸರುಗಳು ಕೆತ್ತಲ್ಪಟ್ಟಿರುತ್ತವೆ. ಬಹುಶಃ ಯೇಸುವು ಇದೆಲ್ಲವನ್ನು - ಮತ್ತು ಇನ್ನು ಅಧಿಕವಾದದ್ದನ್ನು - ಮನಸ್ಸಿನಲ್ಲಿಟ್ಟುಕೊಂಡು ಹೀಗೆ ಹೇಳಿದನು, "ಅವನನ್ನು ನನ್ನ ದೇವರ ಆಲಯದಲ್ಲಿ ಸ್ತಂಭವಾಗಿ ನಿಲ್ಲಿಸುವೆನು." ಫಿಲದೆಲ್ಫಿಯದಲ್ಲಿನ ಕ್ರೈಸ್ತರು ಈ ಜೀವಿತದಲ್ಲಿ ದುರ್ಬಲರೆಂದು ಪರಿಗಣಿಸಲ್ಪಟ್ಟಿದ್ದರು, ಆದರೆ ಯೇಸುವು ಅವರನ್ನು ಮುಂಬರುವ ಜೀವಿತದಲ್ಲಿ "ಬಲದ ಸ್ತಂಭಗಳಾಗಿ" ಮಾಡಲಿದ್ದನು.

ಇಲ್ಲಿ **ಆಲಯ** ಎಂಬುದು ಸಭೆ ಎಂದರ್ಥವಾಗಬಲ್ಲದು, ಬೇರೆ ವಾಕ್ಯಭಾಗಗಳಲ್ಲಿ ಅದು ಸ್ಪಷ್ಟವಾಗಿ ಆ ಅರ್ಥವನ್ನು ಹೊಂದಿರುತ್ತದೆ (ನೋಡಿರಿ 1 ಕೊರಿಂಥ 3:16; ಎಫೆಸ 2:21; ಪ್ರಕಟನೆ 11:1, 2). ಹೇಗೂ, ಯೇಸುವು ಅಂತಿಮವಾಗಿ ಜಯಶಾಲಿಗಳಾಗುವವರನ್ನು ಕುರಿತು ಮಾತಾಡುತ್ತಿದ್ದಾನಾದ್ದರಿಂದ, "ಆಲಯ" ಎಂಬುದು ಬಹುಶಃ ಪರಲೋಕವನ್ನು ಸೂಚಿಸಬಹುದಾಗಿದೆ - ಪ್ರಕಟನೆ ಪುಸ್ತಕದ ಬಹುಪಾಲು ಭಾಗಗಳಲ್ಲಿ ಅದೇ ಅರ್ಥವನ್ನು ಕೊಡುತ್ತದೆ (ನೋಡಿರಿ 11:19; 14:17). ಕೆಲವರು ಈ ಅಭಿಪ್ರಾಯಕೆ ಆಕ್ಷೇಪಣೆ ಮಾಡುತ್ತಾರೆ ಯಾಕೆಂದರೆ ಯೋಹಾನನು ಅನಂತರದಲ್ಲಿ ಪರಲೋಕದಲ್ಲಿ ತಾನೊಂದು ಆಲಯ ಕಂಡೆನೆಂದು ಹೇಳುತ್ತಾನೆ (21:22). ಸಂಕೇತಗಳು ಪುಸ್ತಕದುದ್ದಕ್ಕೂ ಬದಲಾಗಬಹುದು ಮತ್ತು ಒಂದೇ ರೀತಿಯನ್ನು ಕಾಯ್ದುಕೊಂಡು ಹೋಗುವದು ಅತ್ಯಂಥ ಪ್ರಾಮುಖ್ಯ ಕಾರಣಾಂಶವಾಗಿರುವದಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ಹೇಗೂ, 3:12 ಮತ್ತು 21:22ರ ನಡುವೆ ಸಂಧಾನವನ್ನೇರ್ಪಡಿಸುವದು ಪ್ರಾಮುಖ್ಯವಾದದ್ದೆಂದು ಒಬ್ಬನು ಯೋಚಿಸುವದಾದರೆ, ಆತನು ಇದನ್ನು ಪರಿಗಣಿಸತಕ್ಕದ್ದು: ಪರಲೋಕವೆಲ್ಲಾ ದೇವರ ಆಲಯವಾಗುವದು, ಆತನ ಜನರು ಆರಾಧನೆ ಮಾಡುವ ಮತ್ತು ಸೇವಿಸುವ ಸ್ಥಳ ಅದಾಗಿರುತ್ತದೆ; ಹೀಗಿರುವದರಿಂದ ಯೋಹಾನನು ಅನಂತರದಲ್ಲಿ "ಆಲಯ" ಎಂದು ಕರೆಯಲ್ಪಡುವ ಯಾವದೇ ಕಟ್ಟಡವನ್ನು ಅಲ್ಲಿ ಕಾಣುವದಿಲ್ಲ.

12ನೇ ವಚನದ ಮೊದಲ ಭಾಗದಲ್ಲಿರುವ ಒಂದು ಪ್ರಾಮುಖ್ಯವಾದ ತೀರ್ಮಾನಕ್ಕೆ ಬರುವಿಕೆಯೆಂದರೆ ಅದು ಶಾಶ್ವತವಾದ ನಿವಾಸಸ್ಥಾನದ ಕುರಿತಾಗಿರುತ್ತದೆ. ಯೇಸು ಹೀಗೆ ಒತ್ತಿ ಹೇಳಿದನು, **ಇನ್ನು ಮೇಲೆ ಅವನು ಅದರೊಳಗಿಂದ ಹೋಗುವದೇ ಇಲ್ಲ.** ಗ್ರೀಕ್ ವಾಕ್ಯದಲ್ಲಿ ಎರಡು ನಕಾರಾತ್ಮಕ ಬಳಕೆಯು (οὐ μή, *ou mē*) ಹೇಳಿಕೆಯನ್ನು ಖಡಾಖಂಡಿತಗೊಳಿಸುತ್ತದೆ: "ಅವನು ಹೊರಗೆ ಹೋಗುವದಿಲ್ಲ, ಯಾವ ರೀತಿಯಿಂದಲೂ *ಇಲ್ಲ!*" ಫಿಲದೆಲ್ಫಿಯದ ನಾಗರೀಕರು ಕುಸಿದು ಬೀಳುತ್ತಿರುವ ಕಟ್ಟಡಗಳಿಂದ ತಪ್ಪಿಕೊಳ್ಳಲು ಅನೇಕ ಸಾರಿ ಪಟ್ಟಣದ ಹೊರ ಓಡುತ್ತಿದ್ದರು, ಆದರೆ ಪರಲೋಕದಲ್ಲಿ, ಕರ್ತನ ಸ್ತಂಭಗಳು

ಶಾಶ್ವತವಾಗಿ ನೇಡಲ್ಪಟ್ಟಿರುವವು. ಪರಲೋಕದಲ್ಲಿ, ಪರೀಕ್ಷಿಸುವ ಸಮಯವು ಮುಗಿದು ಬಿಡುವದು ಮತ್ತು ನಮ್ಮ ನಿವಾಸವು ಅಂತ್ಯವಿಲ್ಲದ ಯುಗಗಳಲ್ಲೆಲ್ಲಾ ಖಾತ್ರಿಗೊಳಿಸಲ್ಪಡುತ್ತದೆ. ಕೀರ್ತನೆಗಾರನ ಅತ್ಯಂಥ ಹಂಬಲದ ಹಾರೈಕೆಯು ಕೊನೆಗೂ ಕೈಗೂಡುವದು: "ನನ್ನ ಜೀವಮಾನದಲ್ಲೆಲ್ಲಾ ಯೆಹೋವನ ಮನೆಯಲ್ಲಿ ವಾಸಮಾಡುತ್ತಾ ಆತನ ಪ್ರಸನ್ನತೆಯನ್ನು ನೋಡುವದಕ್ಕೂ ಆತನ ಮಂದಿರದಲ್ಲಿ ಧ್ಯಾನಮಾಡುವದಕ್ಕೂ ನನಗೆ ಅಪ್ಪಣೆಯಾಗಬೇಕೆಂಬ ಒಂದೇ ವರವನ್ನು ಯೆಹೋವನಿಂದ ಕೇಳಿಕೊಂಡು ಅದನ್ನೇ ಎದುರು ನೋಡುತ್ತಿರುವೆನು" (ಕೀರ್ತನೆ 27:4). Augustine ಹೀಗೆ ಬರೆದನು, "ಯಾವ ಸ್ನೇಹಿತನೂ ಬಿಟ್ಟು ಹೊರ ಹೋಗಲಾರದಂತಹ ಮತ್ತು ಯಾವ ವೈರಿಯು ಒಳಗೆ ಬಾರದಂತಹ ಪಟ್ಟಣಕ್ಕಾಗಿ . . . ಹಂಬಲಿಸದೆ ಇರುವವರು ಯಾರು?"[13]

ಅಲ್ಲದೆ ಯೇಸು ಪ್ರತಿಯೊಂದು ಸ್ತಂಭದ ಮೇಲೆ **ನನ್ನ ದೇವರ ಹೆಸರನ್ನೂ ನನ್ನ ದೇವರ ಬಳಿಯಿಂದ ಪರಲೋಕದೊಳಗಿಂದ ಇಳಿದು ಬರುವ ಹೊಸ ಯೆರೂಸಲೇಮ್ ಪಟ್ಟಣವೆಂಬ ನನ್ನ ದೇವರ ಪಟ್ಟಣದ ಹೆಸರನ್ನೂ ನನ್ನ ಹೊಸ ಹೆಸರನ್ನೂ** ಬರೆಯುವೆನೆಂದು ಸಹ ವಾಗ್ದಾನ ಮಾಡಿದನು. ಈ ಹೆಸರುಗಳು ಸ್ತಂಭಗಳನ್ನು ವಿಸ್ತಾರಗೊಳಿಸುತ್ತವೆ ಮತ್ತು ದೇವರೊಂದಿಗಿನ ಸಂಬಂಧವನ್ನು ಸೂಚಿಸುತ್ತವೆ. 12ನೇ ವಚನದಲ್ಲಿ ದೇವರು ಘನ ಪಡಿಸಲ್ಪಟ್ಟಿದ್ದಾನೆ: **ನನ್ನ ದೇವರು** ಎಂಬ ಪದಗುಚ್ಛವು ನಾಲ್ಕು ಸಾರಿ ಕಾಣಿಸಿಕೊಳ್ಳುತ್ತದೆ. ನಮ್ಮ ಮೇಲೆ ದೇವರ ಹೆಸರು ಬರೆಯಲ್ಪಡುವದು ಯಾಕೆಂದರೆ ಆತನು ನಮ್ಮ ತಂದೆಯಾಗಿದ್ದಾನೆ, ನಮ್ಮ ಕಣ್ಣುಗಳಿಂದ ಎಲ್ಲಾ ಕಣ್ಣೀರನ್ನು ಒರೆಸಿ ಬಿಡುವವನು ಆತನಾಗಿದ್ದಾನೆ (7:17; 21:4).

**ನನ್ನ ದೇವರ ಬಳಿಯಿಂದ ಪರಲೋಕದೊಳಗಿಂದ ಇಳಿದು ಬರುವ ಹೊಸ ಯೆರೂಸಲೇಮ್ ಪಟ್ಟಣವೆಂಬ** ಎಂಬುದು ನಮ್ಮ ಪರಲೋಕ ನಿವಾಸಕ್ಕಿರುವ ಇನ್ನೊಂದು ಹೆಸರಾಗಿದೆ (ನೋಡಿರಿ 21:2, 10). ಈ ಯೆರೂಸಲೇಮ್ "ಪರಲೋಕದೊಳಗಿಂದ ಇಳಿದುಬರುವ" ದಾಗಿರುವದರಿಂದ, ಕೆಲವರು ಅದನ್ನು ಭೂಮಿಯ ಮೇಲಿರುವ ಸಭೆ ಎಂದು ಗುರುತಿಸುತ್ತಾರೆ. ಇನ್ನು ಕೆಲವರು ಇದು "ಯೇಸುವಿನ ಸಹಸ್ರವರ್ಷದ ರಾಜ್ಯ" ಎಂದು ಸಹ ಅಭಿಪ್ರಾಯ ಪಡುತ್ತಾರೆ. ಹೇಗೂ, ಬಹಳಷ್ಟು ಲೇಖಕರು ಈ ಭಾಷೆಯು ಪರಲೋಕದ ಮಂಡಲದಲ್ಲಿರುವ ಮಹಿಮೆಗೊಳಿಸಲ್ಪಟ್ಟ ಸಭೆಯನ್ನು ಸೂಚಿಸುತ್ತದೆ ಮತ್ತು "ಪರಲೋಕದೊಳಗಿಂದ ಇಳಿದು ಬರುವ" ಎಂಬುದು ನಮಗಾಗಿ ಇದು ದೇವರ ಅನುಗ್ರಹವಾಗಿದೆ ಎಂಬುದನ್ನಷ್ಟೆ ಒತ್ತಿ ಹೇಳುತ್ತದೆಂದು ಒಪ್ಪಿಕೊಳ್ಳುತ್ತಾರೆ (21:2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಕ್ರಿ.ಶ. 70ರಲ್ಲಿ, ಇಪ್ಪತ್ತುಕ್ಕೂ ಹೆಚ್ಚು ವರ್ಷಗಳ ಮುಂಚೆ ಹಳೇ ಯೆರೂಸಲೇಮ್ ನಾಶಗೊಳಿಸಲ್ಪಟ್ಟಿತು, ಆದರೆ ಕ್ರೈಸ್ತರು "ಮೇಲಿನಿಂದ ಬರುವ ಯೆರೂಸಲೇಮ್ ಪಟ್ಟಣವನ್ನು" ಎದುರು ನೋಡಬಹುದಾಗಿತ್ತು (ಗಲಾತ್ಯ 4:26; ನೋಡಿರಿ ಇಬ್ರಿಯ 12:22), ಅದು "ಶಾಶ್ವತವಾದ ಅಸ್ತಿವಾರಗಳುಳ್ಳ ಪಟ್ಟಣ . . . ದೇವರು ಸಂಕಲ್ಪಿಸಿ ನಿರ್ಮಿಸಿದ ಪಟ್ಟಣ" ಅದಾಗಿರುತ್ತದೆ (ಇಬ್ರಿಯ 11:10; ನೋಡಿರಿ ಇಬ್ರಿಯ 13:14). "ಹೊಸ ಯೆರೂಸಲೇಮ್ ಪಟ್ಟಣದ" ಹೆಸರು ನಮ್ಮ ಮೇಲೆ ಬರೆಯಲ್ಪಡುವದು ಯಾಕೆಂದರೆ ಅದು ನಮ್ಮ ಶಾಶ್ವತವಾದ ವಿಳಾಸವಾಗಿರುವದು.

ಅದರ ಜೊತೆಯಲ್ಲಿ, ಯೇಸುವಿನ **ಹೊಸ ಹೆಸರನ್ನೂ** ಪಡೆದುಕೊಳ್ಳುವನು. ಈ ಬಿರುದು ಬಹುಶಃ ಈ ಮುಂಚೆ 2:17ರಲ್ಲಿ ಪ್ರಸ್ತಾಪಿಸಲಾಗಿರುವ "ಹೊಸ ಹೆಸರು" ಆಗಿರಬಹುದು (2:17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಫಿಲದೆಲ್ಫಿಯದ ನಿವಾಸಿಗಳಿಗೆ "ಹೊಸ ಹೆಸರು" ಎಂಬ ಒಂದು ವಿಚಾರವು ವಿಶೇಷ ಮಹತ್ವಪೂರ್ಣತೆಯನ್ನು ಹೊಂದಿರಬಹುದು ಯಾಕೆಂದರೆ ಆ ಪಟ್ಟಣಕ್ಕೆ ಇಷ್ಟೊಂದು ವರ್ಷಗಳಿಂದಲೂ ಹಲವಾರು ಹೊಸ ಹೆಸರುಗಳು ಇಡಲ್ಪಟ್ಟಿದ್ದವು.

ಮದಲಿಂದಗನು ತನ್ನ ಹೆಸರನ್ನು ಮದಲಗಿತ್ತಿಗೆ ಕೊಡುವ ಪ್ರಕಾರವೇ ನಾವು ಯೇಸುವಿನ ಹೆಸರನ್ನು ಪಡೆದುಕೊಳ್ಳುವೆವು. ಕ್ರೈಸ್ತರಾಗಿ, ನಾವು ಕ್ರಿಸ್ತನ ಮದಲಗಿತ್ತಿಯಾದ ಸಭೆಯ ಭಾಗವಾಗಿದ್ದೇವೆ (ಎಫೆಸ 5:23-33). ಒಂದು ದಿನ, ಆತನು ನಮ್ಮನ್ನು ತನ್ನಲ್ಲಿ ಸೇರಿಸಿಕೊಳ್ಳುವದಕ್ಕಾಗಿ ಪ್ರತ್ಯಕ್ಷನಾಗುವನು (ನೋಡಿರಿ 19:7). ಬಳಿಕ, "ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು" (1 ಯೋಹಾನ 3:2).

**ವಚನ 13.** ಪತ್ರವು ಹೀಗೆ ಮುಕ್ತಾಯಗೊಳ್ಳುತ್ತದೆ, **ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ.** ದೇವರು ಕೊಟ್ಟಿರುವ ಸದವಕಾಶಗಳಿಗಾಗಿ ಪರಿಶ್ರಮದಿಂದ ಹುಡುಕಬೇಕು ಮತ್ತು ಅವುಗಳನ್ನು ಪ್ರಯೋಜನವನ್ನು ಪಡೆದುಕೊಳ್ಳಬೇಕು; ಆತನ ವಾಕ್ಯಕ್ಕೆ ವಿಧೇಯರಾಗುವದಕ್ಕೆ ಮತ್ತು ಆತನನ್ನು ಎಂದಿಗೂ ಅಲ್ಲಗಳೆಯದಿರಲು ತಮ್ಮ ಸಮರ್ಪಣೆಯನ್ನು ವಿನೂತನಗೊಳಿಸಿಕೊಳ್ಳಬೇಕು; ತಮ್ಮ ಜಯಮಾಲೆಯನ್ನು ಕಳೆದುಕೊಳ್ಳಬಾರದೆಂದು ಪ್ರತಿಯೊಬ್ಬ ಕ್ರೈಸ್ತನಿಗೆ ಕರೆಯನ್ನು ನೀಡುತ್ತದೆ. ವಿಶೇಷವಾಗಿ, ಎಷ್ಟೇ ಬಲಹೀನನಾಗಿದ್ದರೂ ಸರಿಯೇ, ಪ್ರತಿಯೊಬ್ಬ ಕ್ರೈಸ್ತನು ಒಂದು ದಿನ ಬಲದ ಹಾಗೂ ಸ್ಥಿರತೆಯ ಸ್ತಂಭವಾಗಬಲ್ಲನು ಎಂಬುದನ್ನು ಈ ಪತ್ರವು ನಮಗೆ ಜ್ಞಾಪಿಸುತ್ತದೆ.

## ಲವೊದಿಕೀಯ: ತಾನು ಯಶಸ್ವಿಗೊಂಡಿದ್ದೇನೆಂದುಕೊಂಡ ಸಭೆ (3:14-22)

**[14]ಲವೊದಿಕೀಯದಲ್ಲಿರುವ ಸಭೆಯ ದೂತನಿಗೆ ಬರೆ - ಆಮೆನ್ ಎಂಬಾತನು ಅಂದರೆ
ನಂಬತಕ್ಕ ಸತ್ಯಸಾಕ್ಷಿಯೂ ದೇವರ ಸೃಷ್ಟಿಗೆ ಮೂಲನೂ ಆಗಿರುವಾತನು ಹೇಳುವದೇನಂದರೆ -
[15]ನಿನ್ನ ಕೃತ್ಯಗಳನ್ನು ಬಲ್ಲೆನು; ನೀನು ತಣ್ಣಗೂ ಅಲ್ಲ, ಬೆಚ್ಚಗೂ ಅಲ್ಲ; ನೀನು ತಣ್ಣಗಾಗಲಿ
ಬೆಚ್ಚಗಾಗಲಿ ಇದ್ದರೆ ಒಳ್ಳೇದಾಗಿತ್ತು. [16]ನೀನು ಬೆಚ್ಚಗೂ ಇಲ್ಲದೆ ತಣ್ಣಗೂ ಇಲ್ಲದೆ
ಉಗುರುವೆಚ್ಚಗಿರುವದರಿಂದ ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು. [17]ನೀನು ನಿನ್ನ
ವಿಷಯದಲ್ಲಿ-ನಾನು ಐಶ್ವರ್ಯವಂತನು, ಸಂಪನ್ನನು, ಒಂದರಲ್ಲಿಯೂ ಕೊರತೆಯಿಲ್ಲದವನು
ಎಂದು ಹೇಳಿಕೊಳ್ಳುತ್ತಿ; ಆದರೆ ನೀನು ಕೇವಲ ದುರವಸ್ಥೆಯಿ ಬಿದ್ದಿರುವಂಥವನು, ದೌರ್ಭಾಗ್ಯನು,
ದರಿದ್ರನು, ಕುರುಡನು, ಬಟ್ಟೆಯಿಲ್ಲದವನು ಆಗಿರುವದನ್ನು ತಿಳಿಯದೆ ಇದ್ದೀ. [18]ನೀನು
ಐಶ್ವರ್ಯವಂತನಾಗುವಂತೆ ಬೆಂಕಿಯಲ್ಲಿ ಪುಟಹಾಕಿದ ಚಿನ್ನವನ್ನೂ, ಲಜ್ಜಾಸ್ಪದವಾದ ನಿನ್ನ
ಬೆತ್ತಲೆತನ ಕಾಣಿಸದಂತೆ ಹೊದ್ದುಕೊಳ್ಳುವದಕ್ಕಾಗಿ ಬಿಳೀವಸ್ತ್ರಗಳನ್ನೂ ಕಣ್ಣುಕಾಣುವಂತೆ ನಿನ್ನ
ಕಣ್ಣುಗಳಿಗೆ ಹಚ್ಚುವದಕ್ಕಾಗಿ ಅಂಜನವನ್ನೂ ನನ್ನಿಂದ ಕೊಂಡುಕೊಳ್ಳಬೇಕೆಂದು ನಿನಗೆ ಬುದ್ಧಿ
ಹೇಳುತ್ತೇನೆ. [19]ನಾನು ಯಾರಾರನ್ನು ಪ್ರೀತಿಸುತ್ತೇನೋ ಅವರನ್ನು ಗದರಿಸುತ್ತೇನೆ ಮತ್ತು
ಶಿಕ್ಷಿಸುತ್ತೇನೆ. ಆದದರಿಂದ ನೀನು ಆಸಕ್ತನಾಗಿರು; ದೇವರ ಕಡೆಗೆ ತಿರುಗಿಕೋ. [20]ಇಗೋ,
ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ; ಯಾವನಾದರೂ ನನ್ನ ಶಬ್ದವನ್ನು ಕೇಳಿ
ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟಮಾಡುವೆನು, ಅವನು ನನ್ನ
ಸಂಗಡ ಊಟ ಮಾಡುವನು. [21]ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ
ಕೂತುಕೊಂಡೆನು; ಹಾಗೆಯೇ ಜಯಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ
ಕೂತುಕೊಳ್ಳುವಂತೆ ಮಾಡುವೆನು. [22]ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು
ಕೇಳಲಿ.**

ಫಿಲದೆಲ್ಫಿಯದಿಂದ ಆಗ್ನೇಯಕ್ಕೆ ನಾಲ್ವತ್ತು-ಮೂರು ಮೈಲುಗಳಷ್ಟು ದೂರದಲ್ಲಿ ಲವೊದಿಕೀಯದ ವ್ಯಾಪಕವಾದ ಅವಶೇಷಗಳು ಬಿದ್ದುಕೊಂಡಿರುತ್ತವೆ. ಆ ಪಟ್ಟಣವನ್ನು ಉತ್ಖನನ ಮಾಡಿರುವದಿಲ್ಲ, ಮತ್ತು ಬೃಹತ್ ಬಿಲ್ಲಾಕಾರದ ಕಮಾನುಗಳ ಹಾಗೂ ಇತರ ಕಟ್ಟಡಗಳ ತುದಿಗಳು ಬೃಹತ್ತಾಕಾರದ ಸಮಾಧಿಕಲ್ಲುಗಳ ರೀತಿಯಲ್ಲಿ ತಾನು "ಯಶಸ್ವಿಗೊಂಡಿದ್ದೇನೆಂದು" ಭಾವಿಸಿಕೊಂಡಿದ್ದ ಒಂದು ಹೆಮ್ಮೆಯ ಪಟ್ಟಣದ ದುಃಖಕರ ಸ್ಮರಣೆಯಲ್ಲಿ ಕಲ್ಲುಗಳಿಂದ ಕೂಡಿದ ಮಣ್ಣಿನಲ್ಲಿ ಆಕಾಶವನ್ನು ದೃಷ್ಟಿಸುತ್ತಾ ಬಿದ್ದಿರುತ್ತವೆ.

ಈ ಪತ್ರವು ಆಸ್ಯ ಸೀಮೆಯಲ್ಲಿನ ಏಳು ಸಭೆಗಳಿಗೆ ಬರೆದ ಪತ್ರಗಳಲ್ಲಿ ಕೊನೆಯದ್ದಾಗಿದೆ. ಯೇಸುವು ಸಭೆಗಳಿಗೆ ಭೌಗೋಳಿಕ ಕ್ರಮಾನುಸಾರದಲ್ಲಿ ಸಂಬೋಧಿಸಿದನು. ಆತನು ಎಫೆಸದಿಂದ ಆರಂಭಿಸಿದನು, ಮತ್ತು ಬಳಿಕ ಸ್ಮುರ್ನ ಹಾಗೂ ಪೆರ್ಗಮದ ಕರಾವಳಿಯಡೆಗೆ ಸಾಗಿದನು. ಒಳನಾಡಿನೊಳಗೆ ಥುವತ್ಯೈರದ ಕಡೆಗೆ ಸಾಗಿದ ಬಳಿಕ, ಆತನು ಮುಂದೆ ಆಗ್ನೇಯ ದಿಕ್ಕಿನಲ್ಲಿರುವ ಸಾರ್ದಿಸ್, ಫಿಲದೆಲ್ಫಿಯ ಕಡೆಗೆ, ಮತ್ತು ಅಂತಿಮವಾಗಿ ಲವೊದಿಕೀಯಕ್ಕೆ ಸಾಗಿದನು. ಆ ಪಟ್ಟಣದಿಂದ, ಪಶ್ಚಿಮ ದಿಕ್ಕಿನೆಡೆಗೆ ಎಂಭತ್ತು ಮೈಲುಗಳಷ್ಟು ಪ್ರಯಾಣ ಮಾಡಿದರೆ ಒಬ್ಬನು ಪುನಃ ಎಫೆಸಕ್ಕೆ ಹಿಂದಿರುಗಬಹುದಿತ್ತು, ಅದು ಒಂದು ವೃತ್ತಾಕಾರದ ಪ್ರಯಾಣವನ್ನು ಸಂಪೂರ್ಣಗೊಳಿಸುವದಾಗಿತ್ತು.

ಲವೊದಿಕೀಯದ ಮೂರು ಗುಣಸ್ವಭಾವಗಳು ಅಲ್ಲಿರುವ ಸಭೆಗೆ ಬರೆದಿರುವ ಪತ್ರದೊಂದಿಗೆ ನೇರವಾದ ಸಂಬಂಧವನ್ನು ಹೊಂದಿರುತ್ತವೆ:

1. *ನಾಗರೀಕರಲ್ಲಿ ಅನೇಕರು ಐಶ್ವರ್ಯವಂತರಾಗಿದ್ದರು.* ಲವೊದಿಕೀಯವು ಆ ಕಾಲದಲ್ಲಿ ಅತ್ಯಂಥ ಶ್ರೀಮಂತವಾದ ವಾಣಿಜ್ಯ ನಗರಗಳಲ್ಲೊಂದಾಗಿತ್ತು. ಅದರ ಕಾರ್ಯತಂತ್ರದ ಸ್ಥಾನಮಾನವು - ಪೂರ್ವ ದಿಕ್ಕಿಗೆ ಸಾಗುವ ಅತ್ಯಂಥ ಪ್ರಾಮುಖ್ಯ ಹೆದ್ದಾರಿಯಲ್ಲಿ ಚಾಚಿಕೊಂಡಿತ್ತು - ಮಹಾನ್ ಬ್ಯಾಂಕ್‌ಗಳನ್ನೊಳಗೊಂಡ ಒಂದು ವಾಣಿಜ್ಯ ಕೇಂದ್ರವಾಗುವದಕ್ಕೆ ಸಹಾಯ ಮಾಡಿತ್ತು. ಅದು "ಆಸ್ಯ ಸೀಮೆಯ ವಾಲ್ ಸ್ಟ್ರೀಟ್" ಮತ್ತು "ಲಕ್ಷಾಧಿಪತಿಗಳ ನಗರ" ಎಂದು ಕರೆಯಲ್ಪಟ್ಟಿದೆ. ಅದರ ನಾಗರೀಕರು ತಾವು ಆರ್ಥಿಕವಾಗಿ "ಯಶಸ್ವಿಗೊಂಡವರು" ಎಂಬುದಾಗಿ ಭಾವಿಸಿಕೊಂಡಿದ್ದರು. ಯಾರಾದರೂ ಅವರಿಗೆ "ನಾನು ನಿಮಗೆ ಹೇಗೆ ಸಹಾಯ ಮಾಡಬಹುದು?" ಎಂದು ಕೇಳಿದ್ದರೆ, ಅವರ ಪ್ರತ್ಯುತ್ತರವು "ನಮಗೆ ಯಾವದರ ಅಗತ್ಯವೂ ಇರುವದಿಲ್ಲ" ಎಂದಾಗಿರುತ್ತಿತ್ತು (ನೋಡಿರಿ ವ. 17). ಲವೊದಿಕೀಯವು ಕ್ರಿ.ಶ. ೬೦ರಲ್ಲಿ ಒಂದು ಭೂಕಂಪದಿಂದ ನಾಶಗೊಳಿಸಲ್ಪಟ್ಟಾಗ, ನಾಗರೀಕರು ರೋಮನ್ ಸಾಮ್ರಾಜ್ಯದ ಸಹಾಯವನ್ನು ತಿರಸ್ಕರಿಸಿದ್ದರು ಮತ್ತು ತಮ್ಮ ಸ್ವಂತ ಖರ್ಚಿನಲ್ಲಿಯೇ ಪಟ್ಟಣವನ್ನು ಮರುನಿರ್ಮಾಣ ಮಾಡಿದ್ದರು. ಅವರ ಪಾಲಿಗೆ ಅದೊಂದು ಉದಾತ್ತ ಕಾರ್ಯವಾಗಿತ್ತು - ಆದರೆ ಶಾರೀರಿಕ ಜಗತ್ತಿನಲ್ಲಿ ಶ್ಲಾಘನೀಯವಾದದ್ದು ಅವಶ್ಯಕವಾಗಿ ಆತ್ಮೀಕ ವಿಷಯಗಳಲ್ಲಿಯೂ ಸಮರ್ಪಕವಾಗಿರಬೇಕೆಂದೇನಿಲ್ಲ. ರಕ್ಷಣೆಯ ವಿಷಯಕ್ಕೆ ಸಂಬಂಧಿಸಿದಂತೆ ಅವರು ತಮ್ಮ ಸ್ವಬಲದಿಂದ ಯಶಸ್ವಿಯನ್ನು ಹೊಂದುವದಕ್ಕೆ ಸಾಧ್ಯವಿಲ್ಲ ಎಂಬುದನ್ನು ಲವೊದಿಕೀಯದ ಕ್ರೈಸ್ತರು ಗ್ರಹಿಸಿಕೊಳ್ಳಬೇಕಾಗಿತ್ತು.

2. *ಸಾಮಾನ್ಯವಾಗಿ, ಅವರು ಆರೋಗ್ಯವಂತರಾಗಿದ್ದರು.* ಪಟ್ಟಣದ ಹೊರಗಡೆ ಹದಿಮೂರು ಮೈಲುಗಳಷ್ಟು ದೂರದಲ್ಲಿ ಒಂದು ಸುಪ್ರಸಿದ್ಧವಾದ ವೈದ್ಯಕೀಯ ಕೇಂದ್ರವು ಇತ್ತು. ಕಣ್ಣಿನ ಮುಲಾಮು ಆಗಿ ತಯಾರಿಸಲ್ಪಡಬಹುದಾಗಿದ್ದ ಫ್ರುಗ್ಯದ ಒಂದು ಪೌಡರ್ ಇಲ್ಲಿಯೇ ಉತ್ಪಾದನೆ ಮಾಡಲ್ಪಡುತ್ತಿತ್ತು. ಈ ಪೌಡರ್ ವಿಶ್ವದೆಲ್ಲೆಡೆಗೂ ಕಳುಹಿಸಲ್ಪಡುತ್ತಿತ್ತು. ಔಷಧದಿಂದ ಕೂಡಿದ ಲೋಕ-ಪ್ರಸಿದ್ಧವಾದ ಬಿಸಿ ನೀರಿನ ಒರತೆಯನ್ನು ಹೊಂದಿದ್ದ

ಹಿರಿಯಾಪೊಲಿಯ (ಕೊಲೊಸ್ಸೆ 4:13), ಇಲ್ಲಿಂದ ಕೇವಲ ಆರು ಮೈಲುಗಳಷ್ಟು ದೂರದಲ್ಲಿತ್ತು. ಅದು ಒಂದು ಪರ್ವತ ಶ್ರೇಣಿಯ ತುದಿಯಲ್ಲಿದ್ದು ಲವೊದಿಕೀಯದಿಂದ ನೋಡಿದರೆ ಗೋಚರವಾಗುವಂತಿತ್ತು. ಒಂದಿಷ್ಟು ದೂರದಿಂದ, ಈ ಪರ್ವತ ಶ್ರೇಣಿಯು ಬಿಳಿ ಬಣ್ಣವನ್ನು ಹಚ್ಚಿರುವಂತೆ ಕಾಣಿಸುತ್ತಿತ್ತು. ಈ ಬಣ್ಣಗೆಡಿಸುವಿಕೆಯು ಶಿಖರದಿಂದ ಕೆಳಕ್ಕೆ ಹರಿಯುತ್ತಿದ್ದ ನೀರಿನ ದ್ರವಗಳು ಅಲ್ಲಿ ಶೇಖರಣೆಯಾಗಿದ್ದರ ಫಲಿತವಾಗಿತ್ತು. ಪರ್ವತ ಶ್ರೇಣಿಯ ತುದಿಯಲ್ಲಿ ಅನೇಕ ಪ್ರವಾಸಿಗಳನ್ನು ಆಕರ್ಷಿಸುವಂತಹ ನೂರಾರು ಹೊಂಡಗಳಿದ್ದವು, ಈ ದಿನದಲ್ಲಿಯೂ ಆ ಹೊಂಡಗಳು ಪ್ರವಾಸಿಗಳನ್ನು ಆಕರ್ಷಿಸುತ್ತಿವೆ. ಆ ಪ್ರಾಂತ್ಯವು ದೀರ್ಘಕಾಲದಿಂದಲೂ ಒಂದು ಆರೋಗ್ಯಧಾಮ ಆಗಿರುತ್ತದೆ.

3. *ಅವರಲ್ಲಿ ಬಹುಪಾಲು ಜನರು ಉತ್ತಮವಾಗಿ ಉಡುಪು ಧರಿಸಿದವರಾಗಿದ್ದರು.* ಅಸಹಜವಾದ ನುಣುಪಾದ ಉಣ್ಣೆಯುಳ್ಳ ಕಪ್ಪು ಕುರಿಗಳು ಹತ್ತಿರದ ಬೆಟ್ಟಗಳಲ್ಲಿ ಮೇಯಿಸಲ್ಪಡುತ್ತಿದ್ದವು. ಈ ಕುರಿಗಳಿಂದ ತೆಗೆಯಲಾಗುತ್ತಿದ್ದ ಮೃದುವಾದ, ಹೊಳಪುಳ್ಳ-ಕಪ್ಪು ಉಣ್ಣೆಯು ಅತ್ಯಂಥ ಅಮೂಲ್ಯವೆಂದೆಣಿಸಲ್ಪಡುವ ಉಡುಪುಗಳಾಗಿ ಮಾಡಲ್ಪಡುತ್ತಿತ್ತು. ಈ ಉಡುಪುಗಳು ವಿಶ್ವದ ಮಾರುಕಟ್ಟೆಗಳಲ್ಲಿ ಅತ್ಯಂಥ ಹೆಚ್ಚಿನ ಬೆಲೆಗೆ ಖರೀದಿಸಲ್ಪಡುತ್ತಿದ್ದವು, ಆದರೆ ಲವೊದಿಕೀಯದ ನಾಗರೀಕರಿಗೆ ಮಧ್ಯಸ್ಥವಾದ ಬೆಲೆಗೆ ಲಭ್ಯವಿರುತ್ತಿದ್ದವು. ಇಂದು "ಕಪ್ಪು ಕುರಿ" ಎಂಬುದು ನಕಾರಾತ್ಮಕವಾದ ಅಧಿಕಾರ್ಥವನ್ನು ಹೊಂದಿದೆ (ಉದಾಹರಣೆಗೆ "ಆತನು ತನ್ನ ಕುಟುಂಬದಲ್ಲೊಂದು ಕಪ್ಪು ಕುರಿಯಾಗಿದ್ದಾನೆ"), ಆದರೆ ಪ್ರಥಮ ಶತಮಾನದ ಲವೊದಿಕೀಯದಲ್ಲಿ ಅದು ಆ ರೀತಿಯಾದ ಅಧಿಕಾರ್ಥವನ್ನು ಹೊಂದಿರಲಿಲ್ಲ. ಲವೊದಿಕೀಯದಲ್ಲಿ, ಕಪ್ಪು ಕುರಿ ಎಂದರೆ ಹಣ ಎಂದರ್ಥವಾಗಿತ್ತು.

**ವಚನ 14.** ಪತ್ರವು ಒಂದು ಅಭಿವಂದನೆಯಿಂದ ಆರಂಭಗೊಳ್ಳುತ್ತದೆ, **ಲವೊದಿಕೀಯದಲ್ಲಿರುವ ಸಭೆಯ ದೂತನಿಗೆ ಬರೆ.** ಪ್ರಕಟನೆ ಪುಸ್ತಕವು ಬರೆಯಲ್ಪಡುವ ಹೊತ್ತಿಗೆ, ಲವೊದಿಕೀಯದಲ್ಲಿನ ಸಭೆಯು ಮೂವತ್ತಕ್ಕಿಂತಲೂ ಅಧಿಕ ವರ್ಷಗಳಿಂದ ಅಸ್ತಿತ್ವದಲ್ಲಿದ್ದ ಸಭೆಯಾಗಿತ್ತು. ಸಭೆಯು ಬಹುಶಃ ಪೌಲನು ಎಫೆಸದಲ್ಲಿರುವ ವೇಳೆಯಲ್ಲಿ ಸ್ಥಾಪಿಸಲ್ಪಟ್ಟಿರಬಹುದು (ಅಪೊಸ್ತಲರ ಕೃತ್ಯಗಳು 19:1, 8-10). ಪೌಲನ ಜೊತೆಗೆಲಸದವನಾದ ಎಪಫ್ರನೆಂಬವನು ಕೊಲೊಸ್ಸೆಯಲ್ಲಿ ಒಂದು ಸಭೆಯನ್ನು ಸ್ಥಾಪಿಸಿದವನೆಂದು ಸ್ಪಷ್ಟವಾಗಿದ್ದು (ಕೊಲೊಸ್ಸೆ 1:7; 4:12), ಆತನೇ ಹತ್ತಿರದಲ್ಲಿದ್ದ ಲವೊದಿಕೀಯದಲ್ಲಿ ಸಹ ಸಭೆಯನ್ನು ಸ್ಥಾಪಿಸಿರಬಹುದಾಗಿದೆ. ಯಾವ ರೀತಿಯಲ್ಲಿದ್ದಾಗ್ಯೂ, ಅಪೊಸ್ತಲನಾದ ಪೌಲನು ಸಭೆಯ ಮತ್ತು ಅದರ ಸದಸ್ಯರನ್ನು ಬಲ್ಲವನಾಗಿದ್ದನು. ಆತನು ಲವೊದಿಕೀಯದಿಂದ ಸುಮಾರು ಹತ್ತು ಮೈಲುಗಳಷ್ಟು ದೂರದಲ್ಲಿದ್ದ ಕೊಲೊಸ್ಸೆಯವರಿಗೆ ಬರೆಯುವ ವೇಳೆ, ಆತನು ಹೀಗೆ ಹೇಳಿದನು, "ನಿಮಗೋಸ್ಕರವೂ ಲವೊದಿಕೀಯವರಿಗೋಸ್ಕರವೂ . . . ಬಹಳ ಹೋರಾಟ ಉಂಟೆಂಬುದು ನಿಮಗೆ ತಿಳಿದಿರಬೇಕೆಂದು ಅಪೇಕ್ಷಿಸುತ್ತೇನೆ" (ಕೊಲೊಸ್ಸೆ 2:1). ಆ ಪತ್ರಿಕೆಯ ಮುಕ್ತಾಯದ ಹತ್ತಿರದಲ್ಲಿ, ಆತನು ಲವೊದಿಕೀಯದಲ್ಲಿನ ಕ್ರೈಸ್ತರ ಬಗ್ಗೆ ಮತ್ತೊಂದು ಸಾರಿ ಪ್ರಸ್ತಾಪಿಸುತ್ತಾ ತಾನು ಅವರಿಗೊಂದು ಪತ್ರಿಕೆಯನ್ನು ಕಳುಹಿಸಿದ್ದೇನೆಂದು ಹೇಳುತ್ತಾನೆ:

> ಲವೊದಿಕೀಯದಲ್ಲಿರುವ ಸಹೋದರರಿಗೂ ನುಂಫಳಿಗೂ ಆಕೆಯ ಮನೆಯಲ್ಲಿ ಕೂಡುವ ಸಭೆಗೂ ವಂದನೆ ಹೇಳಿರಿ. ನಿಮ್ಮಲ್ಲಿ ಈ ಪತ್ರಿಕೆಯನ್ನು ಓದಿಸಿಕೊಂಡ ತರುವಾಯ ಲವೊದಿಕೀಯದವರ ಸಭೆಯಲ್ಲಿಯೂ ಓದಿಸಿರಿ; ಮತ್ತು ನಾನು ಬರೆದ ಪತ್ರಿಕೆಯನ್ನು ಲವೊದಿಕೀಯದಿಂದ ತರಿಸಿ ನೀವೂ ಓದಿಸಿಕೊಳ್ಳಿರಿ (ಕೊಲೊಸ್ಸೆ 4:15, 16).

ಈ ವಾಕ್ಯಭಾಗವು ಹೊಸ ಒಡಂಬಡಿಕೆಯಲ್ಲಿ ಪುಸ್ತಕಗಳು ಸಭೆಗಳೊಳಗೆ

ಸುತ್ತೋಲೆಯಾಗಿ ವಿತರಿಸಲ್ಪಡುತ್ತಿದ್ದವೆಂಬುದರ ಕುರಿತು ಒಂದು ತಿಳುವಳಿಕೆಯನ್ನು ಒದಗಿಸುತ್ತದೆ. ಪೌಲನು ಲವೊದಿಕೀಯಕ್ಕೆ ಬರೆದ ಪತ್ರಿಕೆಯ ವಿಷಯದಲ್ಲಿ, ಎರಡು ಸಾಧ್ಯತೆಗಳು ಈ ರೀತಿಯಾಗಿರುತ್ತವೆ:

1. ಅದು ಇಂದು ನಮಗಾಗಿ ನಾವು "ಎಫೆಸದವರಿಗೆ ಬರೆದ ಪತ್ರಿಕೆ" ಎಂದು ಕರೆಯುವ ಪತ್ರಿಕೆಯಾಗಿ ನಮಗೋಸ್ಕರ ಸಂರಕ್ಷಿಡಲ್ಪಟ್ಟಿದೆ. ಕೆಲವು ಪ್ರಾಚೀನ ಹಸ್ತಪ್ರತಿಗಳೊಳಗೆ ಎಫೆಸ 1:1ರಲ್ಲಿ "ಎಫೆಸದಲ್ಲಿರುವ" ಎಂಬುದಾಗಿ ಇರುವದಿಲ್ಲವಾದ್ದರಿಂದ, ಮತ್ತು ಪೌಲನು ರೂಢಿಯಾಗಿ ಮಾಡುವ ಪ್ರಕಾರ ಒಬ್ಬೊಬ್ಬ ಸದಸ್ಯರಿಗೆ ವಂದನೆಗಳನ್ನು ಹೇಳುತ್ತಾ ಪತ್ರಿಕೆಯನ್ನು ಮುಕ್ತಾಯಗೊಳಿಸಲಿಲ್ಲವಾದ್ದರಿಂದ, ಇದು ಪೌಲನಿಂದ ಬರೆಯಲ್ಪಟ್ಟಿದ್ದ ಒಂದು ಸಾರ್ವತ್ರಿಕವಾದ ಪತ್ರಿಕೆಯಾಗಿತ್ತು ಮತ್ತು ಒಂದೊಂದು ಪ್ರತಿಯಲ್ಲಿಯೂ ಆಯಾ ಸಭೆಯ ಹೆಸರನ್ನು ಆರಂಭದಲ್ಲಿ ಸೇರ್ಪಡೆಗೊಳಿಸುವ ಮೂಲಕ ವೈಯಕ್ತಿಕಗೊಳಿಸಿಕೊಳ್ಳಲಾಯಿತು ಎಂಬ ಮುಕ್ತಾಯಕ್ಕೆ ಕೆಲವರು ಬರುತ್ತಾರೆ.

2. ಲವೊದಿಕೀಯದವರಿಗೆ ಬರೆದ ಪತ್ರಿಕೆಯು ನಮಗೋಸ್ಕರ ಸಂರಕ್ಷಿಸಡಲ್ಪಟ್ಟಿರುವದಿಲ್ಲ ಯಾಕೆಂದರೆ ಅದು ಹೊಸ ಒಡಂಬಡಿಕೆಯಲ್ಲಿ ಸಿಕ್ಕುವ ಇತರ ಪುಸ್ತಕಗಳಲ್ಲಿನ ವಿಷಯಗಳನ್ನು ನಕಲು ಮಾಡಿದ್ದಾಗಿದೆ ಮತ್ತು ಆ ಕಾರಣದಿಂದ ಅದು ಅಗತ್ಯವಿಲ್ಲದ್ದಾಗಿದೆ. ನಮ್ಮ ಬಳಿಯಲ್ಲಿ ಯೇಸುವು ನುಡಿದಿರುವ ಪ್ರತಿಯೊಂದು ಮಾತು ಇರುವದಿಲ್ಲ (ಯೋಹಾನ 20:30, 31), ಪ್ರೇರಿತ ಮನುಷ್ಯರಿಂದ ಬರೆದಿರುವ ಪ್ರತಿಯೊಂದು ಮಾತುಗಳೂ ನಮ್ಮ ಬಳಿಯಲ್ಲಿ ಇರುವದಿಲ್ಲ - ಆದರೆ ನಮ್ಮ ಬಳಿಯಲ್ಲಿ ಇರಬೇಕೆಂದು ದೇವರು ಬಯಸುವ ಎಲ್ಲವನ್ನು, ಸಕಲ ಸತ್ಕಾರ್ಯಕ್ಕೆ ನಮ್ಮನ್ನು ಸನ್ನದ್ಧಗೊಳಿಸುವದಕ್ಕೆ ಅಗತ್ಯವಿರುವ ಎಲ್ಲವನ್ನು ಹೊಂದಿದ್ದೇವೆ (ನೋಡಿರಿ 2 ತಿಮೊಥೆ 3:17).

ನಮ್ಮ ಮುಂದೆ ಈಗಿರುವ ವಾಕ್ಯಭಾಗದಲ್ಲಿ, ಯೇಸುವು ಲವೊದಿಕೀಯದವರಿಗೆ ಬರೆದ ಪತ್ರವು ಲೇಖಕನ ಕುರಿತ ಒಂದು ಬಣ್ಣನೆಯೊಂದಿಗೆ ಆರಂಭವಾಗುತ್ತದೆ. ಈ ಪತ್ರವು ವಿಶಿಷ್ಟವಾದ ಗುಣಸ್ವಭಾವವನ್ನು ಹೊಂದಿದೆ: ಯೇಸುವು ತನ್ನನ್ನು ಪರಿಚಯಿಸಿಕೊಳ್ಳಲು ಬಳಸಿರುವ ಬಹಳಷ್ಟು ಪದಗಳು ಪ್ರಕಟನೆ ಪುಸ್ತಕದ ಮೊದಲನೆಯ ಅಧ್ಯಾಯದಲ್ಲಿ ಕಂಡುಬರುವ ಪದಗಳ ಪ್ರತಿಫಲನವಾಗಿಲ್ಲದಿರುವದು ಈ ಏಕೈಕ ಪತ್ರಿಕೆಯಲ್ಲಿಯೇ ಆಗಿರುತ್ತದೆ. ಒಬ್ಬ ವೈದ್ಯನು ರೋಗಿಯೊಬ್ಬನಿಗಿರುವ ವಿಶೇಷ ಅಗತ್ಯತೆಗಳಿಗೆ ಅನುಸಾರವಾಗಿ ಚಿಕಿತ್ಸೆಯನ್ನು ಆಯ್ಕೆ ಮಾಡಿಕೊಳ್ಳುವ ರೀತಿಯಲ್ಲಿಯೇ, ಯೇಸುವು ವಿಶೇಷ ಸಭೆಗಳ ಅಗತ್ಯತೆಗಳನ್ನು ಸಂಧಿಸುವಂತೆ ತನ್ನ ಪತ್ರಗಳನ್ನು ಆರಿಸಿಕೊಂಡನು. ಈ ಪತ್ರದಲ್ಲಿ ಯೇಸುವು ಪಟ್ಟಿ ಮಾಡಿರುವ ಗುಣಸ್ವಭಾವಗಳು ಲವೊದಿಕೀಯದಲ್ಲಿನ ಸಭೆಯ ಗುಣಸ್ವಭಾವಗಳಿಗೆ ತೀಕ್ಷ್ಣವಾಗಿ ತದ್ವಿರುದ್ಧವಾಗಿದ್ದವು.

ಮೊದಲನೆಯದಾಗಿ, ಅನಿಶ್ಚಿತವಾದ ಐಶ್ವರ್ಯಗಳಲ್ಲಿ ಭರವಸವನ್ನಿಟ್ಟಿದ್ದ ಒಂದು ಸಭೆಗೆ, ಯೇಸುವು ತನ್ನನ್ನು ಯಾವಾಗಲೂ ವಿಶ್ವಾಸರ್ಹನಾದ ವ್ಯಕ್ತಿಯನ್ನಾಗಿ ತನ್ನನ್ನು ಗುರುತಿಸಿಕೊಳ್ಳುತ್ತಾನೆ: **ಆಮೆನ್ ಎಂಬಾತನು ಅಂದರೆ ನಂಬತಕ್ಕ ಸತ್ಯಸಾಕ್ಷಿಯೂ** (1:5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ಉಲ್ಲೇಖದಲ್ಲಿ ಮಾತ್ರವೇ **ಆಮೆನ್** ಎಂಬುದು ಏಕೈಕ ಬಾರಿ ಬೈಬಲಿನಲ್ಲಿ ಒಂದು ಸಮರ್ಪಕವಾದ ಹೆಸರಾಗಿ ಕಾಣಿಸಿಕೊಳ್ಳುತ್ತದೆ. ಹಳೆಯ ಒಡಂಬಡಿಕೆಯಲ್ಲಿ, "ಆಮೆನ್" ಎಂಬುದು ದೇವರಿಗಾಗಿ ಒಂದು ಬಿರುದಾಗಿ ಬಳಸಲ್ಪಟ್ಟಿದೆ. ಉದಾಹರಣೆಗೆ, ಯೆಶಾಯ 65:16ರಲ್ಲಿ, "ಸತ್ಯಸಂಧನು" ಎಂಬ ಪದಗುಚ್ಛವು ಬಳಸಲ್ಪಟ್ಟಿದ್ದು ಅಲ್ಲಿ "ಸತ್ಯ" ಎಂಬುದು "ಆಮೆನ್" (אָמֵן, *āmēn*) ಎಂಬ ಪದದ ಅನುವಾದವಾಗಿದೆ. ಹೇಗೂ,

“ಆಮೆನ್” ಎಂಬುದು ಇಲ್ಲಿ ಬಳಸಲ್ಪಟ್ಟಿರುವಂತೆ ಒಂದು ಸಮರ್ಪಕವಾದ ಹೆಸರಾಗಿ ಬಳಸಲ್ಪಟ್ಟಿರಲಿಲ್ಲ.

ಕೆಲವರು “ಆಮೆನ್” ಎಂಬುದನ್ನು ಪ್ರಾರ್ಥನೆಯು ಮುಗಿಯಿತು ಎಂಬುದಕ್ಕೆ ಒಂದು ಸಂಕೇತ ಎಂಬುದಕ್ಕಿಂತಲೂ ಸ್ವಲ್ಪ ಹೆಚ್ಚಿನದ್ದಾಗಿ ಯೋಚಿಸುತ್ತಾರೆ, ಆದರೆ ಈ ಪದಕ್ಕೆ ಒಂದು ವಿಶೇಷವಾದ ಅರ್ಥವಿರುತ್ತದೆ. ಅದೊಂದು ಇಬ್ರಿಯ ಭಾಷೆಯ ಪದವಾಗಿತ್ತು, ಬಳಿಕ ಒಂದು ಗ್ರೀಕ್ ಪದವಾಗಿತ್ತು (ἀμήν, *amēn*), ಮತ್ತು ಈಗ ಆಂಗ್ಲ ಭಾಷೆಯ ಒಂದು ಪದವಾಗಿದೆ; ಆದರೆ ಪ್ರತಿ ಭಾಷೆಯಲ್ಲಿಯೂ ಇದು *ಸತ್ಯವಂತಿಕೆ* ಒಂದು ದೃಢಪಡಿಸುವಿಕೆಯಾಗಿರುತ್ತದೆ. ಕೆಲವು ಸಾರಿ “ಆಮೆನ್” ಎಂದರೆ “ಹಾಗೆಯೇ ಆಗಲಿ!” ಎಂದರ್ಥವಾಗಿದೆ ಎಂದು ಹೇಳಲಾಗುತ್ತದೆ. ಸಾರ್ವಜನಿಕವಾಗಿ ಮಾಡುವ ಒಂದು ಪ್ರಾರ್ಥನೆಗೆ ನಮ್ಮ “ಆಮೆನ್” ಸೇರ್ಪಡೆಗೊಳಿಸುವಾಗ (1 ಕೊರಿಂಥ 14:16), ಆ ಪ್ರಾರ್ಥನೆಯ ಮೇಲೆ ನಮ್ಮ ಅನುಮೋದನೆಯ ಮುದ್ರೆಯನ್ನು ಹಾಕುವವರಾಗಿರುತ್ತೇವೆ. ನಾವು ಬೈಬಲಿನ ಒಂದು ಸಂದೇಶಕ್ಕೆ “ಆಮೆನ್” ಎಂದು ಹೇಳುವಾಗ (ನೆಹಮೀಯ 5:13), ನಾವು ಹೀಗೆ ಹೇಳುವವರಾಗಿರುತ್ತೇವೆ, “ಅದು ಸರಿಯಾಗಿಯೇ ಇದೆ!” “ಆಮೆನ್” ಎಂಬುದನ್ನು ಒಂದು ಪ್ರಾರ್ಥನೆಯ ಆರಂಭದಲ್ಲಿ ಅಥವಾ ಮುಕ್ತಾಯದಲ್ಲಿ ಬಳಸಬಹುದು (ಪ್ರಕಟನೆ 7:12; 22:20, 21), ಅಥವಾ ಯಾವದೋ ಒಂದು ಸಂಗತಿಯನ್ನು ಸತ್ಯವೆಂದು ನಾವು ದೃಢಪಡಿಸುವದಕ್ಕೆ ಬಯಸುವ *ಯಾವದೇ* ಗಳಿಗೆಯಲ್ಲಿ ಅದನ್ನು ಬಳಸಬಹುದು. ಯೇಸುವು ಮಹತ್ವದ ಹೇಳಿಕೆಗಳನ್ನು ಹೇಳುವಾಗಲೆಲ್ಲಾ ಅದಕ್ಕೆ ಮುಂಚೆ “ಸತ್ಯವಾಗಿ” ಅಥವಾ “ನಿಜವಾಗಿ” (KJV) ಎಂಬುದನ್ನು ಸೇರ್ಪಡೆಗೊಳಿಸಿದನು; “ಸತ್ಯವಾಗಿ” ಎಂಬ ಪದವು ಸಹ *amēn* ಎಂಬ ಪದದ ಅನುವಾದವಾಗಿರುತ್ತದೆ (ನೋಡಿರಿ ಮತ್ತಾಯ 5:18; ಯೋಹಾನ 1:51).

**ನಂಬತಕ್ಕ ಸತ್ಯಸಾಕ್ಷಿಯೂ** ಎಂಬುದರ ಜೊತೆಗೆ “ಆಮೆನ್” ಎಂಬ ಪದವು ಜೋತೆಗೂಡಿಸಲ್ಪಡುವದಾದರೆ, ನಮ್ಮ ಮುಂದೆ ಯೇಸುವಿನ ಸಂಪೂರ್ಣ ಭರವಸಯೋಗ್ಯತೆಯ ಕುರಿತಾದ ಒಂದು ಶಕ್ತಿಶಾಲಿ ಹೇಳಿಕೆಯು ಇರುತ್ತದೆ. ಆತನು 1:5ರಲ್ಲಿ “ನಂಬತಕ್ಕ ಸಾಕ್ಷಿ” ಎಂದು ಕರೆಯಲ್ಪಟ್ಟಿದ್ದಾನೆ. ಆ ವಾಕ್ಯಭಾಗದಲ್ಲಿ, ಯೇಸುವು ಸಾಯಬೇಕಾದರೂ ನಂಬಿಗಸ್ತನಾಗಿದ್ದದರ ಮೇಲೆ ಒತ್ತು ಕೊಡಲಾಗಿರುತ್ತದೆ - ಅಂದರೆ, ಒಬ್ಬ ರಕ್ತಸಾಕ್ಷಿಯಾಗಿರುವದು. ಇಲ್ಲಿ, ಆತನ ಭರವಸಯೋಗ್ಯತೆಯ ಮೇಲೆ ಮುಖ್ಯ ಒತ್ತು ಕೊಡಲಾಗಿರುತ್ತದೆ.

ಬಹುಶಃ ತಾನು ಲವೊದಿಕೀಯದವರ ಸ್ಥಿತಿಯ ಕುರಿತು ಪರೀಕ್ಷಿಸಿ ಕಂಡುಕೊಂಡ ಮೌಲ್ಯಮಾಪನವನ್ನು ಅಂಗೀಕರಿಸಿಕೊಳ್ಳುವದು ಅವರಿಗೆ ಕಷ್ಟಕರವಾಗಿರಲಿತ್ತಾದ್ದರಿಂದ ಯೇಸು ತನ್ನ ಭರವಸಯೋಗ್ಯತೆಯ ಬಗ್ಗೆ ಒತ್ತಿ ಹೇಳಿರಬಹುದಾಗಿದೆ. ಲವೊದಿಕೀಯದಲ್ಲಿನ ಸಭೆಯು ಯಾವದೇ ಶ್ಲಾಘನೆಯನ್ನು ಪಡೆದುಕೊಳ್ಳದ ಏಕೈಕ ಸಭೆಯಾಗಿತ್ತು. ಸಾರ್ದಿಸಿನಲ್ಲಿನ ಸಭೆಯು ಒಂದು ಗುಂಪಾಗಿ ಯಾವದೇ ಶ್ಲಾಘನೆಯನ್ನು ಪಡೆದುಕೊಳ್ಳಲಿಲ್ಲ, ಆದರೆ ಆಗಲೂ ಅವರಲ್ಲಿ “ತಮ್ಮ ವಸ್ತ್ರಗಳನ್ನು ಮೈಲಿಗೆ ಮಾಡಿಕೊಳ್ಳದಿರುವ ಸ್ವಲ್ಪ ಜನರು” ಇದ್ದರು (ವ. 4). ಲವೊದಿಕೀಯದಲ್ಲಿ “ನಂಬಿಗಸ್ತರಾದ ಸ್ವಲ್ಪ ಜನರು” ಸಹ ಇರಲಿಲ್ಲ. ಆದದರಿಂದ ತನ್ನ ಮಾತುಗಳು ಎಷ್ಟೇ ಅಸಂತೋಷವನ್ನುಂಟು ಮಾಡುವಂಥ ಮಾತುಗಳಾಗಿರಲಿದ್ದರೂ, ತಾನು ಹೇಳುವದೆಲ್ಲಾ ಸತ್ಯವಾದದ್ದೆಂದು ಖಂಡಿತವಾಗಿ ಹೇಳುವ ಮೂಲಕ ಆರಂಭಿಸುತ್ತಾನೆ.

ಎರಡನೆಯದಾಗಿ, ಸ್ವಸಂತುಷ್ಟಿಯನ್ನು ಹೊಂದಿದ್ದಂಥ ಒಂದು ಸಭೆಗೆ, ಯೇಸುವು ತನ್ನನ್ನು ಅವರ ಭೌತಿಕ ಆಶೀರ್ವಾದಗಳ ಮೂಲಾಧಾರನೆಂದು ಕರೆದುಕೊಂಡನು: **ದೇವರ ಸೃಷ್ಟಿಗೆ**

**ಮೂಲನು. ಮೂಲನು** ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು NASB ಮತ್ತು KJVಗಳಲ್ಲಿ ἀρχή (*archē*) ಎಂದಿರುತ್ತದೆ. NASBಯು "ಮೂಲನು" ಎಂಬ ಪದದ ಕುರಿತು ಈ ಪಕ್ಕ ಟಿಪ್ಪಣಿಯನ್ನು ಹೊಂದಿದೆ: "ಅಂದರೆ, ಆದಿ ಅಥವಾ ಮೂಲ." ಈ ಪದವನ್ನು "ಆಳುವಾತನು" ಅಥವಾ "ಮುಖ್ಯಸ್ಥನು" ಎಂದು ಸಹ ಅನುವಾದಿಸಬಹುದು; ಆದ್ದರಿಂದ NIVಯಲ್ಲಿ "ದೇವರ ಸೃಷ್ಟಿಯನ್ನು ಆಳುವಾತನು" ಎಂದಿರುತ್ತದೆ. ಯೇಸುವು ಬಳಸಿರುವ ಪರಿಭಾಷೆಯು ಕೊಲೊಸ್ಸೆಯವರಿಗೆ ಪೌಲನು ಬರೆದ ಪತ್ರದಲ್ಲಿ ಆತನು ಬಳಸಿರುವ ಪರಿಭಾಷೆಯಂತೆಯೇ ಇರುತ್ತದೆ:

> ಆತನು ಅದೃಶ್ಯನಾದ ದೇವರ ಪ್ರತಿರೂಪನೂ ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನ ಸ್ಥಾನಹೊಂದಿದವನೂ ಆಗಿದ್ದಾನೆ. ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದ ವುಗಳೆಲ್ಲವೂ ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ ಧೊರೆತನಗಳಾಗಲಿ ಅಧಿಕಾರಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವೂ ಆತನ ಮುಖಾಂತರವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟಿತು. ಆತನು ಎಲ್ಲಕ್ಕೂ ಮೊದಲು ಇದ್ದವನು; ಆತನು ಸಮಸ್ತಕ್ಕೂ ಆಧಾರಭೂತನು (ಕೊಲೊಸ್ಸೆ 1:15-17).

"ದೇವರ ಸೃಷ್ಟಿಗೆ ಮೂಲ [ಆರಂಭ]" ಎಂಬ ಪದವನ್ನು ಯೆಹೋವನ ಸಾಕ್ಷಿಗಳು ಯೇಸುವನ್ನು ಸೃಷ್ಟಿಸಲ್ಪಟ್ಟ ಜೀವಿಯೆಂದು ಸಾಭಿತು ಪಡಿಸಲು ಪ್ರಯತ್ನಿಸುವದಕ್ಕೆ ಬಳಸುತ್ತಾರೆ. ಹೇಗೂ, ಈ ಪದಗಳ ಅರ್ಥವು "ಸೃಷ್ಟಿಸಲ್ಪಟ್ಟ ಮೊದಲಿಗನು" ಎಂದರ್ಥವನ್ನು ಕೊಡುವದಿಲ್ಲ, ಆದರೆ ಬದಲಾಗಿ "ಸಮಸ್ತವನ್ನು ಆರಂಭಗೊಳಿಸಿದವನು" ಎಂಬರ್ಥವಾಗಿದೆ. "*ಸರ್ವವೂ* ಆತನ ಮುಖಾಂತರವಾಗಿ . . . ಸೃಷ್ಟಿಸಲ್ಪಟ್ಟಿತು" ಮತ್ತು "ಆತನು ಎಲ್ಲಕ್ಕೂ *ಮೊದಲು* ಇದ್ದವನು" (ಕೊಲೊಸ್ಸೆ 1:16, 17) ಆಗಿರುವದಾದರೆ, ಯೇಸುವು ಸೃಷ್ಟಿಸಲ್ಪಟ್ಟಿರುವ ಜೀವಿಯಾಗಿರುವದಕ್ಕೆ ಸಾಧ್ಯವೇ ಇರುವದಿಲ್ಲ (ನೋಡಿರಿ ಯೋಹಾನ 1:1-3; ಇಬ್ರಿಯ 1:8, 10).

ಯೇಸುವು ಇಲ್ಲಿ ತನ್ನನ್ನು *ಆತ್ಮೀಕ* ಸೃಷ್ಟಿಯ - ಅಂದರೆ, ಸಭೆಯ - ಮೂಲಕರ್ತನೆಂದು ಸೂಚಿಸಿಕೊಂಡನೆಂದು ಕೆಲವರು ಯೋಚಿಸುತ್ತಾರೆ. ಸನ್ನಿವೇಶವು *ಶಾರೀರಿಕ* ಸೃಷ್ಟಿಯ ವಿಚಾರದ ಪರವಾಗಿ ಇರುತ್ತದೆ, ಆದರೆ ಆತ್ಮೀಕ ಸೃಷ್ಟಿಯ ಸೂಚ್ಯಾರ್ಥವು ಸಹ ಇರಬಹುದಾಗಿದೆ. ಲವೊದಿಕೀಯದವರು ತಮಗೆ ಶ್ರೇಯಸ್ಸನ್ನು ಕೊಟ್ಟುಕೊಳ್ಳುವದರ ಬದಲಾಗಿ ತಮ್ಮ ಆಶೀರ್ವಾಗಳಿಗೋಸ್ಕರ ಕರ್ತನಿಗೆ ಸ್ತೋತ್ರವನ್ನು ಸಲ್ಲಿಸುತ್ತಿರಬೇಕಾಗಿತ್ತು.

**ವಚನ 15.** ಯೇಸುವು ಸಭೆಯ ಕುರಿತಾದ ತನ್ನ ಮೌಲ್ಯಮಾಪನವನ್ನು ಹೀಗೆ ಹೇಳುವ ಮೂಲಕ ಆರಂಭಿಸುತ್ತಾನೆ, **ನಿನ್ನ ಕೃತ್ಯಗಳನ್ನು ಬಲ್ಲೆನು.** ಲವೊದಿಕೀಯದಲ್ಲಿನ ಸಭೆಯಲ್ಲಿ **ಕೃತ್ಯಗಳು** ಇರುವದನ್ನು ಅಲ್ಲಗಳೆಯಲಿಲ್ಲ; ಅವರು *ಏನೋ ಒಂದನ್ನಾದರೂ* ಮಾಡುತ್ತಿದ್ದರು. ಹೇಗೂ, ಬಹುಶಃ ಅವರು ಏನೇ ಮಾಡುತ್ತಿದ್ದಾಗ್ಯೂ, ಅದು ಹಣಕ್ಕೆ ಸಂಬಂಧಿಸಿದ್ದಾಗಿರಬಹುದು ಮತ್ತು ಅವರು ಕೊಚ್ಚಿಕೊಳ್ಳುವದಕ್ಕೆ ಸಾಧ್ಯವಾಗುವಂತದ್ದಾಗಿರಬಹುದು. ದೇವರು ಮನುಷ್ಯನನ್ನು ಭೌತಿಕವಾಗಿ ಆಶೀರ್ವದಿಸುವ ವೇಳೆ, ಎಂದಿಗೂ ವೈಯಕ್ತಿಕವಾಗಿ ಭಾಗಿಯಾಗದೆಯೇ ಹಣವನ್ನು ಕೊಡುವದಕ್ಕೆ ಅವನಿಗೆ ಸಾಧ್ಯವಾಗುತ್ತದೆ. ಒಂದು ನಿಜವಾದ ತ್ಯಾಗವನ್ನು ಮಾಡದೆಯೇ ಆತನ ಮನಸ್ಸಾಕ್ಷಿಯನ್ನು ತಣಿಸುವದಕ್ಕೆ ಅವನಿಗೆ ಸಾಧ್ಯವಾಗುತ್ತದೆ. ಲವೊದಿಕೀಯರ "ಕೃತ್ಯಗಳು" ಮನಸ್ಸಾಕ್ಷಿಯನ್ನು ತಣಿಸುವಂಥ ಗರಿಷ್ಠ ತೋರಿಸಿಕೊಳ್ಳುವಿಕೆಯ ಕೃತ್ಯಗಳಾಗಿದ್ದವು, ಹೊರತು ಆಳವಾಗಿ ಸಮರ್ಪಣೆಯುಳ್ಳ ಕ್ರೈಸ್ತರ ಉತ್ಸಾಹಭರಿತ ಕೃತ್ಯಗಳಾಗಿರಲಿಲ್ಲ ಎಂಬುದು ಸ್ಪಷ್ಟವಾಗಿ ಕಾಣಿಸುತ್ತದೆ.

ಯೇಸುವು ಬಳಿಕ ಅವರ ಸಮಸ್ಯೆಯನ್ನು ಕುರಿತು ಮಾತಾಡುತ್ತಾನೆ: **ನೀನು ತಣ್ಣಗೂ**

**ಅಲ್ಲ, ಬೆಚ್ಚಗೂ ಅಲ್ಲ. ಬೆಚ್ಚಗೆ** ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದ ζεστός (*zestos*) ಎಂಬುದರಿಂದಲೇ "zest" (ಹುಮ್ಮಸ್ಸು) ಎಂಬ ಪದವು ಬಂದಿರುತ್ತದೆ. ಅದರರ್ಥವು "ಕುದಿಯುವಷ್ಟು ಬಿಸಿ" ಎಂದಾಗಿರುತ್ತದೆ. **ತಣ್ಣಗೆ** ಎಂಬುದು *zestosಗೆ* ವಿರುದ್ಧವಾಗಿ ಹೋಲಿಸಲ್ಪಟ್ಟಿರುವದರಿಂದ "ತಣ್ಣಗೆ" ಎಂಬ ಪದದ ಅರ್ಥವು ಮಂಜುಗಡ್ಡೆಯಷ್ಟು ತಣ್ಣಗೆ ಎಂಬುದನ್ನು ಸೂಚಿಸತಕ್ಕದ್ದು (ನೋಡಿರಿ ಮತ್ತಾಯ 24:12).

ಗತಕಾಲದಲ್ಲಿ, "ಮಂಜುಗಡ್ಡೆಯಂತೆ ತಣ್ಣಗೆ" ಇರುವದೆಂದರೆ ಆತ್ಮೀಕವಾಗಿ ಅದು ಅವಿಶ್ವಾಸಿಗಳನ್ನು ಸೂಚಿಸುವದಾಗಿತ್ತು, ವಿಶೇಷವಾಗಿ ಸಭೆಯನ್ನು ಹಿಂಸಿಸುತ್ತಿದ್ದವರನ್ನು ಸೂಚಿಸುವದಾಗಿತ್ತು ಅಥವಾ ನಂಬಿಕೆಭ್ರಷ್ಟರಾದ ಕ್ರೈಸ್ತರನ್ನು ಸೂಚಿಸುವದಾಗಿತ್ತೆಂದು ಬಹುಪಾಲು ವ್ಯಾಖ್ಯಾನಕಾರರು ನಂಬಿದ್ದರು. ಇತ್ತೀಚಿನ ವರ್ಷಗಳಲ್ಲಿ, "ತಣ್ಣಗೆ" ಎಂಬ ಪದಕ್ಕೆ ಹಿನ್ನಲೆಯು ಕೊಲೊಸ್ಸೆ ಮತ್ತು ಇತರ ಕ್ಷೇತ್ರಗಳಲ್ಲಿದ್ದ ತಂಪಾದ, ಹಾಗೂ ಬಾಯಾರಿಕೆಯನ್ನಾರಿಸುವ ನದಿಗಳು ಎಂಬುದನ್ನು ಅಧಿಕ ಅಧಿಕವಾದ ಲೇಖಕರು ಮನವರಿಕೆ ಮಾಡಿಳ್ಳುತ್ತಿದ್ದಾರೆ - ಅವುಗಳು ನೆರೆಯಲ್ಲಿನ ಹಿರಿಯಾಪೊಲಿಯಲ್ಲಿದ್ದ ಔಷಧಯುಕ್ತ ಒರತೆಗಳಿಗೆ ತದ್ವಿರುದ್ಧವಾಗಿದ್ದವು. ಪ್ರಕಟನೆ 3:15, 16ರಲ್ಲಿ "ತಣ್ಣಗೆ" ಎಂಬುದನ್ನು ಅನುವಾದಿಸಿರುವ ψυχρός (*psuchros*) ಗ್ರೀಕ್ ಪದವು ಮತ್ತಾಯ 10:42ರಲ್ಲಿ "ಒಂದು ತಂಬಿಗೆ ತಂಪಾದ ನೀರು" ಎಂಬುದನ್ನು ಸೂಚಿಸಲು ಬಳಸಲ್ಪಟ್ಟಿರುತ್ತದೆಂಬುದನ್ನು ಅವರು ಗಮನಕ್ಕೆ ತರುತ್ತಾರೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಇಲ್ಲಿ ಹೇಳಲ್ಪಡುವಂತಹ ಇಷ್ಟವಾಗದಂಥ ಆತ್ಮೀಕ ಸ್ಥಿತಿಯೆಂದರೆ ಅದು ಉಗುರುಬೆಚ್ಚಗೆ ಇರುವದೇ ಆಗಿದೆ ಎಂದು ಅವರು ನಂಬುತ್ತಾರೆ. ಇವುಗಳಲ್ಲಿ ಯಾವ ನಿಲುವು ಸರಿಯಾಗಿದ್ದರೂ ಸರಿಯೇ, ಲವೊದಿಕೀಯದವರು ಕರ್ತನಿಗೋಸ್ಕರ ಜ್ವಾಲೆಯಂತಿರಲಿಲ್ಲ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಅವರು ಕೇವಲ "ಉಗುರುಬೆಚ್ಚಗೆ" ಇದ್ದರು (ವ. 16) ಯೇಸುವು ಆ ಅಸಡ್ಡೆಯಿಂದ ಇದ್ದಂಥ ಸದಸ್ಯರಿಗೆ ಹೀಗೆ ಹೇಳಿದನು, **ನೀನು ತಣ್ಣಗಾಗಲಿ ಬೆಚ್ಚಗಾಗಲಿ ಇದ್ದರೆ ಒಳ್ಳೇದಾಗಿತ್ತು.**

ಸಂಪ್ರದಾಯಿಕವಾದ ಅಭಿಪ್ರಾಯವನ್ನು ಈಗಲೂ ಅನೇಕರು ವಿಶ್ವಾಸಿಸುತ್ತಾರಾದ್ದರಿಂದ, ಕೆಲವೊಂದು ಹೆಚ್ಚುವರಿ ಟಿಪ್ಪಣಿಗಳು ಸೂಕ್ತವಾಗಿರುತ್ತವೆ: ಸಂಪ್ರದಾಯಿಕ ಅಭಿಪ್ರಾಯವು ಸರಿಯೆಂದಾದರೆ, ತಾನು ಏನನ್ನು ಬಯಸುತ್ತೇನೆಂದು ಯೇಸುವು ಹೇಳಿದ್ದು ಗೊಂದಲಕರವಾಗಿರಬಹುದು. ಅವರು ಬೆಚ್ಚಗಿರಬೇಕೆಂದು ಆತನು ಏಕೆ ಬಯಸಿದನೆಂಬುದನ್ನು ಅರ್ಥಮಾಡಿಕೊಳ್ಳುವದು ಸುಲಭವಾಗಿರುತ್ತದೆ. **ಬೆಚ್ಚಗೆ** ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ಸಾಮಾನ್ಯವಾಗಿ "ಅತ್ಯಾಸಕ್ತಿ" ಎಂದು ಅನುವಾದಿಸಲ್ಪಡುತ್ತದೆ. ಉದಾಹರಣೆಗೆ, ರೋಮಾ 12:11ರಲ್ಲಿ ಬಳಸಲ್ಪಟ್ಟಿರುವ ಆ ಪದದ ಕ್ರಿಯಾಪದ ರೂಪವು (ζέω, *zeō*), ನಮ್ಮನ್ನು "ಆಸಕ್ತಚಿತ್ತರಾಗಿದ್ದು ಕರ್ತನ ಸೇವೆಯನ್ನು ಮಾಡುವವರಾಗಿರಿ" ಎಂದು ನಮಗೆ ಕರೆ ಕೊಡುತ್ತದೆ. ಅವರು ವೈರಾಗ್ಯದಿಂದಿರಬೇಕು ಮತ್ತು ಅತ್ಯಾಸಕ್ತಿಯಿಂದ ಇರಬೇಕೆಂದು ಏಕೆ ಬಯಸಿದನೆಂಬುದನ್ನು ಅರ್ಥಮಾಡಿಕೊಳ್ಳುವದರಲ್ಲಿ ಖಂಡಿತವಾಗಿಯೂ ನಮಗೆ ಸಮಸ್ಯೆಯಿರುವದಿಲ್ಲ. ಹೇಗೂ, ಉಗುರುಬೆಚ್ಚಗೆ ಇರುವದರ ಬದಲಾಗಿ ಅವರು "ತಣ್ಣಗೆ" ಇರಬೇಕೆಂದು ಏಕೆ ಯೇಸುವು ಬಯಸುವನು? ನಾವು ಹೀಗೆ ತರ್ಕಿಸಬಹುದು, "ಒಬ್ಬ ಕ್ರೈಸ್ತೇತರನಾಗಿ ಅಥವಾ ನಂಬಿಕೆಭ್ರಷ್ಟನಾಗಿ ಇರುವದಕ್ಕಿಂತಲೂ ಒಬ್ಬ ಕ್ರೈಸ್ತನಾಗಿರುವದು - ಭಾಗಶಃ ಭಾಗಿಯಾಗಿರುವ ಒಬ್ಬ ಕ್ರೈಸ್ತನಾಗಿ ಸಹ ಇರುವದು - ಉತ್ತಮವಲ್ಲವೇ?" ಮಿತವಾದ ಸಮರ್ಪಣೆಯು ಒಂದು *ಬದಲಾವಣೆಯ* ಸ್ಥಿತಿಯ, ಆತ್ಮೀಕವಾಗಿ ಬೆಳೆಯುವದರಲ್ಲಿನ ಒಂದು ಹೆಜ್ಜೆಯಾಗಿರುವ*ದಾದರೆ* ಈ ತರ್ಕವು ಸರಿಯಾದದ್ದು. ಯಾವದೇ ಧಾರ್ಮಿಕ ಹಿನ್ನಲೆಯಿಂದ

ಬಂದಿರದಂಥ ಕ್ರಿಸ್ತನಲ್ಲಿನ ಒಬ್ಬ ಹೊಸ ಕೂಸು ಆರಾಧನೆಗಳ ಕೆಲವು ಕೂಟಗಳಿಗೆ ಹಾಜರಾಗುವದಕ್ಕೆ ಆರಂಭಿಸುವಾಗ ನಾವು ಹರ್ಷಗೊಳ್ಳುತ್ತೇವೆ. ಏನನ್ನೂ ಕೊಡದಿರುತ್ತಿದ್ದ ಆತನು ಸ್ವಲ್ಪವನ್ನಾದರೂ ಕೊಡುವವನಾಗುವದನ್ನು ನೋಡುವಾಗ ನಾವು ಸಂತೋಷ ಪಡುತ್ತೇವೆ. ಪ್ರಗತಿಯನ್ನು ತೋರಿಸುವ *ಯಾವದೇ* ಪುರಾವೆಯು - ತಾನು ಒಬ್ಬ ಕ್ರೈಸ್ತನಾಗಿ ಬೆಳೆಯುವದನ್ನು ಈಗಷ್ಟೇ ಆರಂಭಿಸಿದ್ದಾನೆ ಮತ್ತು ಇನ್ನು ಬಹಳ ದೀರ್ಘ ಪ್ರಯಾಣವನ್ನು ಮಾಡಬೇಕಿದೆ ಎಂಬುದನ್ನು ಅರ್ಥಮಾಡಿಕೊಳ್ಳುವಷ್ಟರ ವರೆಗೂ - ಕೊಂಡಾಡಲ್ಪಡುತ್ತದೆ. ಲವೊದಿಕೀಯದ ಕ್ರೈಸ್ತರ ವಿಷಯದಲ್ಲಿ ಆ ರೀತಿಯಲ್ಲಿ ಆಗಿರಲಿಲ್ಲ. ಅವರ ಉಗುರು ಬೆಚ್ಚಗಿನ ಸ್ಥಿತಿಯು ಒಂದು ನಿಷ್ಕ್ರಿಯವಾದದ್ದಾಗಿತ್ತು, ಅದೊಂದು ಜೀವನದ ರೀತಿಯಾಗಿ ಬಿಟ್ಟಿತ್ತು. ವಾಸ್ತವದಲ್ಲಿ, ಅವರ ಆತ್ಮೀಕ ಸ್ಥಿತಿಯ ವಿಷಯದಲ್ಲಿ ಅವರು ಹೆಮ್ಮೆ ಪಟ್ಟುಕೊಳ್ಳುತ್ತಿದ್ದರು (ವ. 17). ಮಿತಿಯಾದ ತೊಡಗಿಸಿಕೊಳ್ಳುವಿಕೆಯು ಒಂದು ಬದಲಾವಣೆಯ ಸ್ಥಿತಿ *ಆಗಿಲ್ಲವಾದರೆ*, ಅದನ್ನು ಆತ್ಮೀಕವಾಗಿ ಸತ್ತವರಾಗಿರುವದರ ಬದಲಾಗಿ ಬಯಸುವಂತಹ ಸ್ಥಿತಿಯಾಗಿ ಆಯ್ಕೆ ಮಾಡಿಕೊಳ್ಳಬಾರದು.

"ತಣ್ಣಗೆ" ಎಂಬುದು ಇಷ್ಟಪಡದಂತಹ ಸ್ಥಿತಿಯನ್ನು ಸೂಚಿಸುವದಾದರೆ, ಲವೊದಿಕೀಯದವರು ಉಗುರುಬೆಚ್ಚಗೆ ಇರುವದಕ್ಕಿಂತಲೂ ತಣ್ಣಗೆ ಇದ್ದರೆ ಒಳ್ಳೇದಾಗಿತ್ತೆಂದು ಬಯಸುವದಕ್ಕೆ ಮೂರು ಕಾರಣಗಳು ಇಲ್ಲಿವೆ: (1) ಮಂಜುಗಡ್ಡೆಯಂತಹ ತಂಪಾಗಿರುವದು ಹೆಚ್ಚು ಪ್ರಾಮಾಣಿಕವಾದದ್ದು, ಯಾಕೆಂದರೆ ಅದು ಕ್ರೈಸ್ತನಾಗಿರುವೆನೆಂದು ಹೇಳಿಕೊಳ್ಳುವದಿಲ್ಲ. (2) ಒಬ್ಬ ಸ್ವ-ಸಂತುಷ್ಟನಾದ, ಉಗುರುಬೆಚ್ಚಗಿರುವ ದೇವರ ಮಗುವಿಗಿಂತಲೂ ಒಬ್ಬ ಕ್ರೈಸ್ತನೆಂದು ನಾಟಕವನ್ನು ಸಹ ಆಡದವನಾದ ಮಂಜುಗಡ್ಡೆಯಂಥ ತಂಪಾಗಿರುವ ವ್ಯಕ್ತಿಯನ್ನು ಬದಲಾಯಿಸುವದಕ್ಕೆ ಹೆಚ್ಚು ನಿರೀಕ್ಷೆಯಿರುತ್ತದೆ (ನೋಡಿರಿ ಇಬ್ರಿಯ 6:4-6; 2 ಪೇತ್ರ 2:20). (3) ತಣ್ಣಗೆ ಇರುವದಕ್ಕಿಂತಲೂ ಉಗುರುಬೆಚ್ಚಗಿರುವದು ಸಭೆಗೆ ಹೆಚ್ಚು ಹಾನಿಯನ್ನು ಮಾಡುತ್ತದೆ. ಒಬ್ಬ ವ್ಯಕ್ತಿಯು ದೇವರಿಲ್ಲದ ಅನ್ಯಧರ್ಮಿಯನ ಕಡೆಗೆ ಬೆರಳು ತೋರಿಸಿ "*ಆ ಕಾರಣದಿಂದಲೇ* ನಾನು ಒಬ್ಬ ಕ್ರೈಸ್ತನಾಗಿರುವದಿಲ್ಲ!" ಎಂದು ಹೇಳುವದಿಲ್ಲ. ಆದರೆ ಸಭೆಯ ಅರೆಹೃದಯದ ಸದಸ್ಯರನ್ನು ತೋರಿಸಿ, "ನಾನೇಕೆ ಕ್ರೈಸ್ತನಾಗಬೇಕು? ನಾನು ಅವರಷ್ಟೇ ಒಳ್ಳೆಯವನಾಗಿದ್ದೇನಲ್ಲಾ" ಎಂದು ಹೇಳುವವರು ಇದ್ದಾರೆ.

ಸಾರ್ದಿಸಿನವರಿಗೆ ಬರೆದ ಪತ್ರದಂತೆಯೇ, ಲವೊದಿಕೀಯದವರಿಗೆ ಬರೆದ ಪತ್ರವು ಹಿಂಸೆಯ ಕುರಿತು ಪ್ರಸ್ತಾಪವನ್ನು ಮಾಡದಿರುವದು ಮಹತ್ವಪೂರ್ಣವಾಗಿರುತ್ತದೆ - ಈ ಪಟ್ಟಣದಲ್ಲಿ ಸಾಕಷ್ಟ ಪ್ರಮಾಣದಲ್ಲಿ ಯೆಹೂದ್ಯ ನಾಗರೀಕರ ಗುಂಪನ್ನು ಹೊಂದಿತ್ತೆಂಬ ವಾಸ್ತವಾಂಶದ ಹೊರತಾಗಿಯೂ ಹಿಂಸೆಯು ಇರಲಿಲ್ಲ. ಲವೊದಿಕೀಯವು ಸ್ಥಾಪಿಸಲ್ಪಡುತ್ತಿದ್ದ ಸಮಯದಲ್ಲಿ, ಪಟ್ಟಣದ ಆರ್ಥಿಕತೆಯನ್ನು ನಿರ್ಮಿಸುವದಕ್ಕಾಗಿ ಯೆಹೂದ್ಯರನ್ನು ಆಮದು ಮಾಡಿಕೊಳ್ಳಲಾಗಿತ್ತು. ವರ್ಷಗಳು ಗತಿಸಿದ ಹಾಗೆ, ವ್ಯಾಪರ ಮತ್ತು ಲಾಭಗಳಿಗಾಗಿ ಆಕರ್ಷಣೆಗೊಂಡು ಇನ್ನು ಕೆಲವು ಯೆಹೂದ್ಯರು ಲವೊದಿಕೀಯಕ್ಕೆ ಬಂದರು. ಸೈತಾನನು ಏಕೆ ಲವೊದಿಕೀಯದಲ್ಲಿರುವ ಕ್ರೈಸ್ತರ ತೊಂದರೆ ಮಾಡದೆ ಬಿಟ್ಟಿದ್ದನು? ಅವರು ಹೇಗೆ ಇದ್ದಾರೋ ಹಾಗೆಯೇ ಇರುವದನ್ನು ಆತನು ಇಷ್ಟಪಟ್ಟನು. ಅವರು ಎಲ್ಲಿಯ ತನಕ ತಮ್ಮ ಆತ್ಮೀಕ ತೋರ್ಕೆಯನ್ನು ಉಳಿಸಿಕೊಳ್ಳುವರೋ, ಅಲ್ಲಿಯ ತನಕ ಅವರು ರೋಮನ್ ಸಾಮ್ರಾಜ್ಯದ ಸೆರೆಯಾಳುಗಳಾಗಿ ಇರುವದಕ್ಕಿಂತಲೂ ಸ್ವತಂತ್ರ ವ್ಯಕ್ತಿಗಳಾಗಿದ್ದುಕೊಂಡೇ ಆತನ ಕೆಲಸಕ್ಕೆ ಎಷ್ಟೋ ಹೆಚ್ಚು ಸಹಾಯ ಮಾಡುವವರಾಗಿದ್ದರು.

**ವಚನ 16.** ಲವೊದಿಕೀಯದವರು ತಮ್ಮ ಆತ್ಮೀಕ ಸ್ಥಿತಿಯ ವಿಷಯದಲ್ಲಿ ತೃಪ್ತರಾಗಿ

ಇದ್ದಿರಬಹುದು, ಆದರೆ ಕರ್ತನು ತೃಪ್ತನಾಗಿರಲಿಲ್ಲ. ಆತನು ಅವರಿಗೆ ಹೀಗೆ ಹೇಳಿದನು, **ನೀನು ಬೆಚ್ಚಗೂ ಇಲ್ಲದೆ ತಣ್ಣಗೂ ಇಲ್ಲದೆ ಉಗುರುಬೆಚ್ಚಗಿರುವದರಿಂದ ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು.** ಅಕ್ಷರಶಃ, ವಾಕ್ಯಭಾಗವು ಹೀಗೆ ಹೇಳುತ್ತದೆ, "ನಾನು *ಶೀಘ್ರದಲ್ಲಿಯೇ* ನಿನ್ನನ್ನು ನನ್ನ ಬಾಯೊಳಗಿಂದ ಉಗುಳ*ಲಿದ್ದೇನೆ*" (ಒತ್ತಿ ಹೇಳಿದ್ದು ನನ್ನದು). **ಕಾರುವೆನು** ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ἐμέω (*emeō*) ಎಂದಾಗಿದ್ದು, ಅದರಿಂದಲೇ "emetic " (ವಮನಕಾರಿ) ಎಂಬ ಪದವು ಬಂದಿರುತ್ತದೆ, ಇದು ವಾಂತಿಯನ್ನು ಬರುವಂತೆ ಮಾಡುವ ಔಷಧವಾಗಿರುತ್ತದೆ. ಸರಳವಾದ ಭಾಷೆಯಲ್ಲಿ, "ನೀವು ನನಗೆ ವಾಂತಿ ಮಾಡಬೇಕೆನ್ನುವಂತೆ ಮಾಡುತ್ತೀರಿ"[14] ಎಂದು ಯೇಸುವು ಹೇಳುತ್ತಿದ್ದಾನೆ. ಉಗುರುಬೆಚ್ಚಗಿನ ನೀರು ಹೊಟ್ಟೆಯಲ್ಲಿ ಯಾವ ಪರಿಣಾಮ ಹೊಂದಿರುತ್ತದೋ ಆತ್ಮೀಕ ಸ್ವಸಂತೃಪ್ತಿಯು ಕ್ರಿಸ್ತನ ಮೇಲೆ ಅದೇ ಪರಿಣಾಮವನ್ನು ಹೊಂದಿತ್ತು. ಇಷ್ಟು ವರ್ಷಗಳಿಂದ, ಉಗುರುಬೆಚ್ಚಗಿನ ನೀರನ್ನು ವಾಂತಿ ಬರಿಸುವ ಔಷಧದಂತೆ ಬಳಸಲ್ಪಟ್ಟಿದೆ - ಜನರು ಜೀರ್ಣ ವ್ಯವಸ್ಥೆಗೆ ಹಾನಿಯಾಗುವಂಥ ಯಾವದನ್ನಾದರೂ ಸೇವಿಸಿದ್ದರೆ ಅದನ್ನು ಹೊರ ಚೆಲ್ಲುವಂತೆ ಮಾಡುವದು. ಲವೊದಿಕೀಯದ ಸುತ್ತಲು ಇದ್ದ ಪ್ರಾಂತ್ಯದಲ್ಲಿ ಬಿಸಿ-ನೀರಿನ ಬುಗ್ಗೆಗಳು ಹೇರಳವಾಗಿದ್ದವಾದ್ದರಿಂದ, ಬಹುಶಃ ಒಬ್ಬನಿಗಿಂತಲೂ ಅಧಿಕವಾದ ಬಾಯಾರಿಕೆಯುಳ್ಳ ಪ್ರಯಾಣಿಕರು ಆ ಬುಗ್ಗೆಗಳಿಂದ ಆಳವಾಗಿ ನೀರನ್ನು ನುಂಗಿದ್ದರು ಮತ್ತು ಓಕರಿಸುವಂತೆ ಮಾಡಲ್ಪಟ್ಟಿದ್ದರು.

ಹೀಗೆ, ಯೇಸುವು **ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು** ಎಂದು ಹೇಳಿದಾಗ, "ನೀವು ನನಗೆ ವಾಂತಿ ಬರುವಂತೆ ಮಾಡುತ್ತೀರಿ!" ಎಂಬುದು ಆತನ ತಾತ್ಪರ್ಯವಾಗಿತ್ತು. ಅಲ್ಲದೆ ಆತನು ಹೀಗೆ ಹೇಳುತ್ತಿದ್ದಾನೆ, "ನೀವು ಪಶ್ಚಾತ್ತಾಪ ಪಡುವ ಹೊರತು, ನೀವು ನನ್ನ ಸಂಗಡ ನಿಕಟವಾದ ಸಂಬಂಧವನ್ನು ಹೊಂದುವದಕ್ಕೆ ಸಾಧ್ಯವಿಲ್ಲ." ಅನಂತರದಲ್ಲಿ 20ನೇ ವಚನವು ಅವರು ಯೇಸುವನ್ನು ತಮ್ಮ ಜೀವಿತಗಳೊಳಗಿಂದ ಹೊರಗೆ ಹಾಕಿ ಬಿಟ್ಟಿದ್ದರೆಂಬುದನ್ನು ವಿವರಿಸುತ್ತದೆ. ಅವರು ನಿತ್ಯವಾದ ಅಂತ್ಯಾವಸ್ಥೆಯು ಗಂಡಾಂತರಕ್ಕೀಡಾಗಿತ್ತು.

**ವಚನ 17.** ಲವೊದಿಕೀಯದಲ್ಲಿರುವ ಸಭೆಯು ಬಹುಶಃ ಕರ್ತನು ಮಾಡಿದ ಮೌಲ್ಯಮಾಪನವನ್ನು ಕಂಡು ಆಘಾತಗೊಂಡಿರಬೇಕು. ಒಂದು ವಾಸ್ತವಾಂಶವು ಖಚಿತವಾಗಿತ್ತು: ಕರ್ತನು ಅವರನ್ನು ನೋಡುವ ರೀತಿಯಲ್ಲಿ ಅವರು ತಮ್ಮನ್ನು ನೋಡಿಕೊಳ್ಳಲಿಲ್ಲ. ಯೇಸು ಅವರಿಗೆ ಹೀಗೆ ಹೇಳಿದನು, **ನಾನು ಐಶ್ವರ್ಯವಂತನು, ಸಂಪನ್ನನು, ಒಂದರಲ್ಲಿಯೂ ಕೊರತೆಯಿಲ್ಲದವನು ಎಂದು ಹೇಳಿ*ಕೊಳ್ಳುತ್ತೀ*** (ಒತ್ತಿ ಹೇಳಿದ್ದು ನನ್ನದು; ನೋಡಿ ಲೂಕ 12:19). ತಮ್ಮಲ್ಲಿ ಉತ್ಸಾಹದ ಕೊರತೆಯಿದ್ದದಕ್ಕಾಗಿ ನಾಚಿಕೆಗೊಳ್ಳುವದರ ಬದಲಾಗಿ, ಅವರು ಅದರ ವಿಷಯದಲ್ಲಿ ಹೆಮ್ಮೆಯಿಂದಿದ್ದರು. ಕೆಲವರು ಆತ್ಮೀಕ ತಾಟಸ್ಥ್ಯವನ್ನು ಒಂದು ಸದ್ಗುಣವೆಂದು ಭಾವಿಸಿಕೊಂಡಿರುತ್ತಾರೆ ಮತ್ತು ಇತರ ಕ್ರೈಸ್ತರು ರೋಮಾಂಚನಗೊಳ್ಳುವಾಗ ಇವರು ಮುಜುಗರಕ್ಕೀಡಾಗುತ್ತಾರೆ.

ಮೂಲ ವಾಕ್ಯದಲ್ಲಿ ಪುನರಾವರ್ತನೆಯಿದ್ದು ಅದು ಬಹುತೇಕ ತರ್ಜುಮೆಗಳಲ್ಲಿ ಪ್ರತಿಬಿಂಬಗೊಂಡಿರುವದಿಲ್ಲ. ವಾಕ್ಯವು ಅಕ್ಷರಶಃ ಹೀಗೆ ಹೇಳುತ್ತದೆ, "ನಾನು ಐಶ್ವರ್ಯವಂತನು ಮತ್ತು ಐಶ್ವರ್ಯವುಳ್ಳವನಾಗಿದ್ದೇನೆ ಮತ್ತು ನನಗೆ ಯಾವ ಕೊರತೆಯೂ ಇರುವದಿಲ್ಲ." ಆ ಪುನರಾವರ್ತನೆಯು ಒತ್ತಿ ಹೇಳುವದಕ್ಕೋಸ್ಕರ ಆಗಿತ್ತು. ಅವರು "ನಾವು ಐಶ್ವರ್ಯವಂತರು, *ಐಶ್ವರ್ಯವಂತರು*, ಐಶ್ವರ್ಯವಂತರು!" ಬಹುಶಃ ಅವರು ಶಾರೀರಿಕ ಮತ್ತು ಆತ್ಮೀಕ ಎರಡೂ ಐಶ್ವರ್ಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಿದ್ದಿರಬಹುದು; ಅನೇಕರು ಭೂಲೋಕದ ಆಶೀರ್ವಾದಗಳನ್ನು ಪರಲೋಕದಿಂದ ದೊರೆತ ಅನುಮೋದನೆಗೆ ಪುರಾವೆ ಎಂದು ಕಾಣುತ್ತಾರೆ

(ನೋಡಿರಿ ಮತ್ತಾಯ 19:24, 25). ಒಂದು ಸಭೆಯು ಆಕರ್ಷಕವಾದ ಕಟ್ಟಡ, ಒಬ್ಬ ಜನಪ್ರಿಯ ಬೋಧಕನನ್ನು, ಕೆಲಸದ ಕುರಿತ ಒಂದು ಮನಸೆಳೆಯುವಂಥ ಕಾರ್ಯಕ್ರಮ ಹೊಂದಿದ್ದಾಗ್ಯೂ ಬಾಗಿಲಕ್ಕೆ ಹೊಡೆದಿರುವ ಮೊಳೆಯಂತೆ ಸತ್ತದ್ದಾಗಿರುವದಕ್ಕೆ ಸಾಧ್ಯವಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕೆಂಬುದು ಯೇಸುವಿನ ಬಯಕೆಯಾಗಿದೆ.

ಲವೊದಿಕೀಯದವರು ತಮ್ಮನ್ನು ಐಶ್ವರ್ಯವಂತರೆಂದು ಭಾವಿಸಿಕೊಂಡಿದ್ದರು, ಆದರೆ ತಮ್ಮನ್ನು ತಾವೇ ಮೋಸ ಪಡಿಸಿಕೊಂಡವರಾಗಿದ್ದರು. ಯೇಸುವು ಹೀಗೆ ಹೇಳಿದನು, **ಆದರೆ ನೀನು ಕೇವಲ ದುರವಸ್ಥೆಯಲ್ಲಿ ಬಿದ್ದಿರುವಂಥವನು, ದೌರ್ಭಾಗ್ಯನು, ದರಿದ್ರನು, ಕುರುಡನು, ಬಟ್ಟೆಯಿಲ್ಲದವನು ಆಗಿರುವದನ್ನು ತಿಳಿಯದೆ ಇದ್ದೀ.** ನಮಗೆ ಪುನಃ ಇಲ್ಲಿ "ದೇವರು ಮನುಷ್ಯನಂತೆ ನೋಡುವವನಲ್ಲ" ಎಂಬುದು ಜ್ಞಾಪಿಸಲ್ಪಡುತ್ತದೆ (1 ಸಮುವೇಲ 16:7).

ಯೇಸುವು ಮೊದಲು ಅವರ ಆತ್ಮೀಕ ಸ್ಥಿತಿಯನ್ನು ಸಾರಾಂಶಗೊಳಿಸುವದಕ್ಕಾಗಿ ಸಾಮಾನ್ಯವಾದ ಪದಗಳನ್ನು ಬಳಕೆ ಮಾಡುತ್ತಾನೆ. ಆತನು ಬಳಸಿದ ಒಂದು ಪದವು **ಕೇವಲ ದುರವಸ್ಥೆಯಲ್ಲಿ ಬಿದ್ದಿರುವಂಥವನು.** ಮೂಲ ವಾಕ್ಯದಲ್ಲಿ "ಕೇವಲ ದುರವಸ್ಥೆಯಲ್ಲಿ ಬಿದ್ದಿರು [ವವರು]" ಎಂದಿರುತ್ತದೆ - *ಅತ್ಯಂಥ* ದುರವಸ್ಥೆಯಲ್ಲಿ ಬಿದ್ದಿರುವವರು ಎಂಬುದನ್ನು ಸೂಚಿಸುತ್ತದೆ. "ದುರವಸ್ಥೆಯಲ್ಲಿ ಬಿದ್ದಿರುವಂಥವನು" ಎಂಬುದನ್ನು ಅನುವಾದಿಸಿರುವ ταλαίπωρος (*talaipōros*) ಎಂಬ ಗ್ರೀಕ್ ಪದವು "ಬಳಲಿ ಹೋಗಿರುವದು ಮತ್ತು ಕಲ್ಲುಗಣಿಯಲ್ಲಿ ಕೆಲಸ ಮಾಡುವವರಂತೆ ಅಥವಾ ಕಲ್ಲುಗಣಿಯಲ್ಲಿ ದುಡಿಯುವಂತೆ ತೀರ್ಪು ಹೊಂದಿರುವವರಂತೆ ಹಾನಿಕಾರಕವಾದ ಪ್ರಯಾಸಗಳಿಂದ ಆಯಾಸಗೊಂಡಿರುವದು"[15] ಎಂಬುದನ್ನು ಸೂಚಿಸುವದಾಗಿರುತ್ತದೆ. ಕರ್ತನು ಅವರನ್ನು ಲಕ್ಷಾಧಿಪತಿಗಳಂತೆ ಕಾಣಲಿಲ್ಲ; ಆತನು ನಿರಾಶ್ರಿತರಾದ ಗುಲಾಮರಂತೆ ಕಂಡನು. ಅಲ್ಲದೆ ಯೇಸು ದೌರ್ಭಾಗ್ಯನು ಎಂಬ ಪದವನ್ನು ಸಹ ಬಳಸಿದನು. ಗ್ರೀಕ್ ಭಾಷೆಯ ἐλεεινός (*eleeinos*) ಎಂಬ ಪದವು ಕನಿಕರದ ಅಗತ್ಯವಿರುವವರನ್ನು ಕುರಿತು ಮಾತಾಡುವದಾಗಿತ್ತು. ಕರ್ತನ ದೃಷ್ಟಿಯಲ್ಲಿ, ಪ್ರಶಂಸೆಗೆ ಯೋಗ್ಯರಾಗಿರುವದರ ಬದಲಾಗಿ, ಅವರು ಮರುಕ ಹುಟ್ಟಿಸುವ ಸ್ಥಿತಿಯಲ್ಲಿದ್ದರು. ಯೇಸುವು ಕಂಡು ಹಿಡಿದ ರೋಗಲಕ್ಷಣಗಳ ಪರೀಕ್ಷೆಯನ್ನು ಅವರು ಎಷ್ಟೊಂದು ದ್ವೇಷಿಸಿರಬಹುದು. ಒಬ್ಬ ಗರ್ವಿಷ್ಠ ಮನುಷ್ಯನು ಮರುಕ ಪಡುವದನ್ನು ದ್ವೇಷಿಸುವಷ್ಟು ಬೇರೆ ಇನ್ನೇನನ್ನೂ ದ್ವೇಷಿಸುವದಿಲ್ಲ.

ಬಳಿಕ ಯೇಸು ಅವರ ಆತ್ಮೀಕ ಸಮಸ್ಯೆಯನ್ನು ನಿರ್ದಿಷ್ಟವಾದ ಪದಗಳಲ್ಲಿ ಬಣ್ಣಿಸುತ್ತಾನೆ: ಅವರು ತಮ್ಮನ್ನು **ಐಶ್ವರ್ಯವಂತ**ರೆಂದು ಭಾವಿಸಿಕೊಂಡಿದ್ದರು, ಆದರೆ ನಿಜವಾಗಿಯೂ ಅವರು ದರಿದ್ರರಾಗಿದ್ದರು. "ದರಿದ್ರ" ಎಂಬುದನ್ನು ಅನುವಾದಿಸಿರುವ πτωχός (*ptōchos*) ಎಂಬ ಗ್ರೀಕ್ ಪದದ ಅರ್ಥವು "ಸ್ವಲ್ಪವಾಗಿ ಹೊಂದಿರುವದು" ಎಂಬುದಾಗಿರುವದಿಲ್ಲ; ಅದರರ್ಥವು "ಏನನ್ನೂ ಹೊಂದಿರದೆ ಇರುವದು" ಎಂದಾಗಿದೆ. ಅವರು ಆಸ್ಯ ಸೀಮೆಯಲ್ಲಿಯೇ ಅತ್ಯಂಥ ಶ್ರೀಮಂತವಾಗಿದ್ದ ನಗರದಲ್ಲಿ ನೆಲೆಸಿದ್ದರಾದರೂ, ಅವರು ಆತ್ಮೀಕವಾಗಿ ಬಡತನದಲ್ಲಿದ್ದರು. ಸ್ಮುರ್ನದಲ್ಲಿನ ಸಭೆಯು "ಐಶ್ವರ್ಯವಂತವಾಗಿದ್ದ ಬಡ ಸಭೆ" ಆಗಿದ್ದರೆ, ಲವೊದಿಕೀಯದಲ್ಲಿನ ಸಭೆಯು "ಬಡತನದಲ್ಲಿರುವ ಐಶ್ವರ್ಯವಂತ ಸಭೆ" ಆಗಿತ್ತು.

ಅವರಿಗೆ ವಿಶ್ವದಲ್ಲಿಯೇ ಅತ್ಯುತ್ತಮ ಕಣ್ಣಿನ ಆಸ್ಪತ್ರೆಯ ಸೌಕರ್ಯವು ಲಭ್ಯವಿತ್ತು, ಆದರೆ ಅವರು ಕುರುಡರಾಗಿದ್ದರು (ನೋಡಿರಿ 2 ಪೇತ್ರ 1:9). ಅವರು ತಮ್ಮ ಆತ್ಮೀಕ ಸ್ಥಿತಿಯನ್ನು ನೋಡುವದಕ್ಕೆ ಅಶಕ್ತರಾಗಿದ್ದರು ಮತ್ತು ಕ್ರೈಸ್ತತ್ವದ ನಿಜವಾದ ಸ್ವಭಾವವನ್ನು ಕಾಣುವದಕ್ಕೆ ಅಶಕ್ತರಾಗಿದ್ದರು. ಕ್ರೈಸ್ತತ್ವವು ಉತ್ಸಾಹಗೊಳ್ಳುವದಕ್ಕೆ ಯೋಗ್ಯವಾದದ್ದೆಂಬುದನ್ನು ಕಾಣುವ

ಅಗತ್ಯತೆಯು ಅವರಿಗಿತ್ತು.

Hans Christian Andersonನು "The Emperor's New Clothes" ಎಂಬ ಒಂದು ಕಥೆಯನ್ನು ಬರೆದನು, ಅದರಲ್ಲಿ ಒಬ್ಬ ಚಕ್ರವರ್ತಿಯು ತಾನೊಂದು ಮಾಂತ್ರಿಕವಾದ ವಸ್ತುವಿನಿಂತ ತಯಾರಿಸಲ್ಪಟ್ಟಿರುವ ವೈಭವವಾದ ಉಡುಪನ್ನು ಧರಿಸಿದ್ದೇನೆಂದು ನಂಬುವಂತೆ ವಂಚಿಸಲ್ಪಟ್ಟು ಕೊನೆಗೆ ಒಂದು ಮಗುವು ಆತನು ಬೆತ್ತಲೆಯಾಗಿದ್ದಾನೆಂಬುದನ್ನು ಆತನಿಗೆ ತೋರಿಸಿ ಕೊಡುತ್ತದೆ. ಆ ಚಕ್ರವರ್ತಿಯ ರೀತಿಯಲ್ಲಿಯೇ, ಲವೊದಿಕೀಯದವರು ತಾವು ಆಡಂಬರದ ಉಡಿಗೆತೊಡಿಗೆಗಳನ್ನು ಧರಿಸಿದ್ದೇವೆಂದು ಭಾವಿಸಿಕೊಂಡಿದ್ದರು ಆದರೆ ವಾಸ್ತವಿಕದಲ್ಲಿ ಅವರು **ಬಟ್ಟೆಯಿಲ್ಲದವ**ರಾಗಿದ್ದರು. ಶಾಸ್ತ್ರಗಳುದ್ದಕ್ಕೂ, ಬೆತ್ತಲೆಯು ನಾಚಿಕೆಗೆ ಪರ್ಯಾಯ ಹೆಸರಾಗಿದೆ. ಪ್ರಾಚ್ಯ ದೇಶಗಳಲ್ಲಿ, ಒಬ್ಬ ಮನುಷ್ಯನ ವಸ್ತ್ರಗಳನ್ನು ಕಿತ್ತು ಹಾಕುವದು ಆತನಿಗೆ ಅವಮಾನವುಂಟು ಮಾಡುವದಾಗಿತ್ತು (ನೋಡಿರಿ 2 ಸಮುವೇಲ 10:4; ಯೆಶಾಯ 20:4; ಯೆಹೆಜ್ಕೇಲ 16:37-39; ನಹೂಮ 3:5), ಆತನ ಬೆನ್ನ ಮೇಲೆ ಒಂದು ನಿಲುವಂಗಿಯನ್ನು ಹಾಕುವದು ಆತನಿಗೆ ಸನ್ಮಾನವನ್ನುಂಟು ಮಾಡುವದಾಗಿತ್ತು (ನೋಡಿರಿ ಆದಿಕಾಂಡ 41:42; ಎಸ್ತೇರಳು 6:6-11; ದಾನಿಯೇಲ 5:29). ಶಾರೀರಿಕವಾಗಿ, ಲವೊದಿಕೀಯದವರು ಐಶ್ವರ್ಯ, ಹೊಳಪುಗಪ್ಪಿ-ಕಪ್ಪು ಮೇಲಂಗಿಗಳನ್ನು ಹೊಂದಿದ್ದರು; ಆದರೆ ಆತ್ಮೀಕವಾಗಿ, ಕರ್ತನು ಮಾತ್ರವೇ ಕೊಡಬಲ್ಲಂಥ ನೀತಿಯೆಂಬ ಬಿಳೀವಸ್ತ್ರಗಳು ಅವರ ಬಳಿಯಲ್ಲಿ ಇರಲಿಲ್ಲ (ನೋಡಿರಿ ವ. 18).

**ವಚನ 18.** ಲವೊದಿಕೀಯದಲ್ಲಿನ ಸಭೆಯ ಆತ್ಮೀಕ ಸ್ಥಿತಿಯು ಗಂಭೀರವಾಗಿತ್ತು, ಆದರೆ ನಿರೀಕ್ಷೆಯೇ ಇಲ್ಲದ್ದೇನೂ ಆಗಿರಲಿಲ್ಲ. ಯೇಸುವು ಈ ಸಂದೇಶವನ್ನು ಅವರಿಗೆ ಕೊಡುತ್ತಾನೆ:

> ನೀನು ಐಶ್ವರ್ಯವಂತನಾಗುವಂತೆ ಬೆಂಕಿಯಲ್ಲಿ ಪುಟಾಹಾಕಿದ ಚಿನ್ನವನ್ನೂ, ಲಜ್ಜಾಸ್ಪದವಾದ ನಿನ್ನ ಬೆತ್ತಲೆತನ ಕಾಣಿಸದಂತೆ ಹೊದ್ದುಕೊಳ್ಳುವದಕ್ಕಾಗಿ ಬಿಳೀವಸ್ತ್ರಗಳನ್ನೂ ಕಣ್ಣುಕಾಣುವಂತೆ ನಿನ್ನ ಕಣ್ಣುಗಳಿಗೆ ಹಚ್ಚುವದಕ್ಕಾಗಿ ಅಂಜನವನ್ನೂ ನನ್ನಿಂದ ಕೊಂಡುಕೊಳ್ಳಬಬೇಕೆಂದು ನಿನಗೆ ಬುದ್ಧಿ ಹೇಳುತ್ತೇನೆ.

**ನಿನಗೆ ಬುದ್ಧಿ ಹೇಳುತ್ತೇನೆ** ಎಂಬ ಮಾತುಗಳು ಆಶ್ಚರ್ಯವಾದವುಗಳು. ವಿಶ್ವದ ಒಡೆಯನಾಗಿರುವ ಯೇಸುವು ಅವರನ್ನು ಖಂಡಿಸಲಿಲ್ಲ, ಆದರೆ ಅವರಿಗೆ ಬುದ್ಧಿ ಹೇಳಿದನು. ಕರ್ತನು "ಬುದ್ಧಿ" ಹೇಳುವಾಗ, ನಾವು ಕೇಳಿಸಿಕೊಂಡಿದ್ದರೆ ಉತ್ತಮವಾಗಿತ್ತು.

ಯೇಸುವು ಸಕಲ ಆತ್ಮೀಕ ಆಶೀರ್ವಾದಗಳ ಮೂಲನಾಗಿದ್ದಾನೆ (ಎಫೆಸ 1:3). ಶಾರೀರಿಕವಾದ ಐಶ್ವರ್ಯಗಳಲ್ಲಿ ಭರವಸವನ್ನಿಡುವದರ ಬದಲಾಗಿ, ಅವರು ಕರ್ತನಿಂದ ಮಾತ್ರವೇ ಹೊಂದಿಕೊಳ್ಳಬಹುದಾಗಿರುವ ನಿಜವಾದ ಐಶ್ವರ್ಯಗಳನ್ನು ಹುಡುಕಿರಬೇಕಿತ್ತು: ಅವರನ್ನು ಆತ್ಮೀಕವಾಗಿ **ಐಶ್ವರ್ಯವಂತ**ರನ್ನಾಗಿಸುವದಕ್ಕೆ **ಬೆಂಕಿಯಲ್ಲಿ ಪುಟಾಹಾಕಿದ ಚಿನ್ನ** (ನೋಡಿರಿ 1 ಪೇತ್ರ 1:7). ಪರ್ವತದ ಮೇಲಿನ ಪ್ರಸಂಗದಲ್ಲಿ, ಯೇಸುವು ಹೀಗೆ ಹೇಳಿದ್ದನು:

> ಭೂಲೋಕದಲ್ಲಿ ಗಂಟುಮಾಡಿ ಇಟ್ಟುಕೊಳ್ಳಬೇಡಿರಿ; ಇಲ್ಲಿ ಅಂತೂ ಅದು ನುಸಿಹಿಡಿದು ಕಿಲುಬು ಹತ್ತಿ ಕೆಟ್ಟುಹೋಗುವದು; ಇಲ್ಲಿ ಕಳ್ಳರು ಕನ್ನಾ ಕೊರೆದು ಕದಿಯುವರು ಆದರೆ ಪರಲೋಕದಲ್ಲಿ ಗಂಡು ಮಾಡಿ ಇಟ್ಟಕೊಳ್ಳಿರಿ; ಅಲ್ಲಿ ಅದು ನುಸಿ ಹಿಡಿದು ಕಿಲುಬುಹತ್ತಿ ಕೆಟ್ಟುಹೋಗುವದಿಲ್ಲ; ಅಲ್ಲಿ ಕಳ್ಳರು ಕನ್ನಾ ಕೊರೆಯುವದೂ ಇಲ್ಲ, ಕದಿಯುವದೂ ಇಲ್ಲ (ಮತ್ತಾಯ 6:19, 20).

ತಮ್ಮ ಸುಂದರವಾದ ಕಪ್ಪು ಉಡುಪು ಸಾಕಾದದ್ದೆಂದು ಯೋಚಿಸುವದಕ್ಕೆ ಬದಲಾಗಿ, ಯೇಸುವಿನ ವಾಚಕರಿಗೆ ತಮ್ಮನ್ನು ಮುಚ್ಚಿಕೊಳ್ಳುವದಕ್ಕೆ **ಬಿಳೀವಸ್ತ್ರಗಳ** ಅಗತ್ಯವಿತ್ತು, ಹೀಗೆ

ಅವರ ಆತ್ಮೀಕ ಬೆತ್ತಲೆತನದ ನಾಚಿಕೆಯನ್ನು ಕಾಣಿಸಿದಂತೆ ಮುಚ್ಚಿಕೊಳ್ಳಬಹುದಿತ್ತು. ಬಿಳಿ (ಅಥವಾ ನಿರ್ಮಲ) ವಸ್ತ್ರದ ಸಂಕೇತತ್ವವು ಪ್ರಕಟನೆ ಪುಸ್ತಕದಲ್ಲಿ ಎರಡು ಒತ್ತುಗಳನ್ನು ಹೊಂದಿರುತ್ತದೆ: (1) "ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡವರು" (7:13) ಯಾರೆಂದರೆ "ಯಜ್ಞದ ಕುರಿಯಾದಾತನ ರಕ್ತದಲ್ಲಿ ತಮ್ಮ ನಿಲುವಂಗಿಗಳನ್ನು ತೊಳೆದು ಶುಭ್ರಮಾಡಿಕೊಂಡವರು" (7:14). ಬಿಳೀ ವಸ್ತ್ರಗಳನ್ನು ಧರಿಸಿಕೊಳ್ಳಬೇಕೆಂದರೆ ಲವೊದಿಕೀಯದಲ್ಲಿರುವ ಕ್ರೈಸ್ತರು ಯೇಸುವಿನ ಮೇಲೆ ಅವಲಂಬಿತರಾಗಬೇಕಾಗುವದೇ ಹೊರತು ತಮ್ಮ ಮೇಲೆ ಅಲ್ಲ. (2) 19:8ರಲ್ಲಿ ಕ್ರಿಸ್ತನ ಮದಲಗಿತ್ತಿಯು "ಪ್ರಕಾಶಮಾನವೂ ನಿರ್ಮಲವೂ ಆದ ನಯವಾದ ನಾರುಮಡಿಯನ್ನು ಧರಿಸಿಕೊಂಡವಳು" ಎಂದು ಚಿತ್ರಿಸಲ್ಪಟ್ಟಿರುತ್ತಾಳೆ (KJV), ಮತ್ತು "ಆ ನಾರುಮಡಿ ಅಂದರೆ ದೇವಜನರ ಸತ್ಕಾರ್ಯಗಳೇ" ಎಂಬುದಾಗಿ ನಮಗೆ ಹೇಳಲ್ಪಟ್ಟಿದೆ. ಬಿಳೀ ವಸ್ತ್ರಗಳನ್ನು ಧರಿಸಿಕೊಳ್ಳಬೇಕಾಗಿದ್ದಲ್ಲಿ, ಈ ಕ್ರೈಸ್ತರು ದೇವರ ಮಕ್ಕಳು ಜೀವಿಸತಕ್ಕ ರೀತಿಯಲ್ಲಿ ಜೀವಿಸುವದನ್ನು ಆರಂಭಿಸಬೇಕಾಗಿತ್ತು.

ಫ್ರುಗ್ಯದ ಕಣ್ಣಿನ ಪೌಡರ್ ಮೇಲೆ ಅವಲಂಬಿತರಾಗುವದರ ಬದಲಾಗಿ, ಅವರು ಜೀವಿತವನ್ನು ನಿಜವಾಗಿಯೂ ಇರುವ ರೀತಿಯಲ್ಲಿಯೇ ಕಾಣುವಂತಾಗಲು ತಮ್ಮ **ಕಣ್ಣುಗಳಿಗೆ** ಹಚ್ಚಿಕೊಳ್ಳುವದಕ್ಕೆ ಪರಲೋಕದ **ಅಂಜನವನ್ನು** ಬಯಸಿರಬೇಕಿತ್ತು (ನೋಡಿರಿ ಯೋಹಾನ 9:39-41). ಅವರಿಗೆ ದೇವರ ವಾಕ್ಯವನ್ನು ಅಧ್ಯಯನ ಮಾಡುವದರಿಂದ ಮತ್ತು ಆತನ ಚಿತ್ತಕ್ಕೆ ವಿಧೇಯರಾಗುದವರಿಂದ ಮಾತ್ರವೇ ಬರಬಲ್ಲಂಥ ಒಂದು ನೂತನವಾದ ದೃಷ್ಟಿಕೋನದ ಅಗತ್ಯವಿತ್ತು.

ಯೇಸುವು 18ನೇ ವಚನದಲ್ಲಿ ಹೇಳುವು ಬುದ್ಧಿ ಮಾತಿನಲ್ಲಿ **ಕೊಂಡುಕೊಳ್ಳಬೇಕು** ಎಂಬ ಮಾತನ್ನು ಗಮನಿಸಿರಿ: "ನೀನು . . . ಬೆಂಕಿಯಲ್ಲಿ ಪುಟಾಹಾಕಿದ ಚಿನ್ನವನ್ನೂ . . . ಬಿಳೀವಸ್ತ್ರಗಳನ್ನೂ . . . ಅಂಜನವನ್ನೂ *ಕೊಂಡುಕೊಳ್ಳಬೇಕೆಂದು* ನಿನಗೆ ಬುದ್ಧಿ ಹೇಳುತ್ತೇನೆ" (ಒತ್ತಿ ಹೇಳಿದ್ದು ನನ್ನದು). ನಾವು ಅಕ್ಷರಶಃ ಯೇಸು ಪ್ರಸ್ತಾಪಿಸಿದ ಆತ್ಮೀಕ ವಸ್ತುಗಳನ್ನು ಖರೀದಿಸುವದಕ್ಕೆ ಸಾಧ್ಯವಿಲ್ಲ (ನೋಡಿರಿ ರೋಮಾ 4:1-5; ಎಫೆಸ 2:8, 9), ಆದರೆ ಆಗಲೂ ಅವುಗಳಿಗೆ ಏನಾದರೂ ವೆಚ್ಚವು ಇದ್ದೇ ಇರುತ್ತದೆ; ಒಂದು ಬೆಲೆಯನ್ನು ಕಟ್ಟಲೇ ಬೇಕಾಗಿರುತ್ತದೆ. ಲವೊದಿಕೀಯದವರಿಗೆ ತಮ್ಮ ಅಸಡ್ಡೆಯನ್ನು, ಸ್ವಸಂತೃಪ್ತಿಯನ್ನು, ಮತ್ತು ತಮ್ಮ ಗರ್ವವನ್ನು ಬಿಟ್ಟುಬಿಡುವ ಅಗತ್ಯವಿತ್ತು.

**ವಚನ 19.** ಯೇಸುವು ನಮ್ಮನ್ನು ದ್ವೇಷಿಸುತ್ತಾನೆಂಬದಾಗಿ ಲವೊದಿಕೀಯದ ಸಭೆಯು ಅಂತಿಮ ನಿರ್ಧಾರಕ್ಕೆ ಬರುವಷ್ಟರ ಮಟ್ಟಿಗೆ ಆತನು ಬಿರುನುಡಿಗಳನ್ನು ಬಳಸಿದ್ದನು. ಆದ್ದರಿಂದ ಆತನು ಅವಸರದಿಂದ ಈ ಮಾತುಗಳನ್ನು ಸೇರಿಸುತ್ತಾನೆ, **ನಾನು ಯಾರಾರನ್ನು ಪ್ರೀತಿಸುತ್ತೇನೋ ಅವರನ್ನು ಗದರಿಸುತ್ತೇನೆ ಮತ್ತು ಶಿಕ್ಷಿಸುತ್ತೇನೆ.** ಗ್ರೀಕ್ ಭಾಷೆಯಲ್ಲಿ ವಾತ್ಸಲ್ಯವುಳ್ಳ "ಪ್ರೀತಿ" ಗೆ ಇರುವ φιλέω (*phileō*) ಎಂಬ ಪದವು ಇಲ್ಲಿ ಬಳಸಲ್ಪಟ್ಟಿದೆ. ಕೆಲವರು ತಪ್ಪನ್ನು ಖಂಡಿಸುವಿಕೆ ಮತ್ತು ತಿದ್ದುವಿಕೆಯನ್ನು ಹಗೆತನಕ್ಕೆ ಸಮಾನಗೊಳಿಸುತ್ತಾರೆ, ಆದರೆ ದೈವಿಕ ಶಿಕ್ಷೆಯು ಪ್ರೀತಿಯ ಒಂದು ವ್ಯಕ್ತಪಡಿಸುವಿಕೆಯಾಗಿರುತ್ತದೆ. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೀಗೆ ಬರೆಯುತ್ತಾನೆ, "ಕರ್ತನು ತಾನು *ಪ್ರೀತಿಸುವವನನ್ನೇ* ಶಿಕ್ಷಿಸುತ್ತಾನೆ; ತಾನು ಸೇರಿಸಿಕೊಳ್ಳುವ ಪ್ರತಿಯೊಬ್ಬ ಮಗನನ್ನು ಹೊಡೆಯುತ್ತಾನೆ" (ಇಬ್ರಿಯ 12:6; ಒತ್ತಿ ಹೇಳಿದ್ದು ನನ್ನದು; ನೋಡಿರಿ ಕೀರ್ತನೆ 119:75; ಜ್ಞಾನೋಕ್ತಿ 3:12). "ಪ್ರೀತಿ" ಎಂಬುದಕ್ಕೆ ಹೊಸ ಒಡಂಬಡಿಕೆಯಲ್ಲಿ ಅತ್ಯಂಥ ಸಾಮಾನ್ಯವಾಗಿ ಬಳಸಲಾಗಿರುವ ἀγάπη (*agapē*) ಎಂಬ ಪದವು ಇಬ್ರಿಯ 12:6ರಲ್ಲಿ ಬಳಸಲ್ಪಟ್ಟಿದೆ, ಆದರೆ ಮೂಲಭೂತ ಅರ್ಥವು

ಪ್ರಕಟನೆ 3:19ರಲ್ಲಿರುವಂತೆಯೇ ಇರುತ್ತದೆ.

ಬಳಿಕ ಅವರು ತಮ್ಮ ಮನೋಭಾವವನ್ನು ಬದಲಾಯಿಸಿಕೊಂಡು ತಮ್ಮ ಉತ್ಸಾಹದ ಕಿಡಿಯನ್ನು ಪುನಃ ಹೊತ್ತಿಸಿಕೊಳ್ಳುವ ಅಗತ್ಯತೆಯಿದೆ ಎಂಬುದನ್ನು ಒತ್ತಿ ಹೇಳಿದನು: **ಆದದರಿಂದ ಆಸಕ್ತನಾಗಿರು; ದೇವರ ಕಡೆಗೆ ತಿರುಗಿಕೋ. ಆಸಕ್ತನಾಗಿರು** ಎಂಬ ಆಜ್ಞೆಯಲ್ಲಿ ವರ್ತಮಾನಕಾಲರೂಪದ ಅಜ್ಞಾರ್ಥಕವು (ζήλευε, *zēleue*, ಇದು ζηλεύω, *zēleuō* ಎಂಬುದರಿಂದ ಬಂದದ್ದು) ಬಳಸಲಾಗಿದ್ದು ಅದು ನಿರಂತರವಾಗಿ ಮುಂದುವರೆಯುವ ಕ್ರಿಯೆಯನ್ನು ಸೂಚಿಸುತ್ತದೆ. ಅವರು ಗತಕಾಲದಲ್ಲಿ *ನಿರಂತರವಾಗಿ* ಉಗುರುಬೆಚ್ಚಗೆ ಇದ್ದ ರೀತಿಯಲ್ಲಿಯೇ, ಭವಿಷ್ಯದಲ್ಲಿ ಅವರು *ನಿರಂತರವಾಗಿ* ಆಸಕ್ತರಾಗಿರಬೇಕೆಂದು ಯೇಸುವಿನ ಬಯಕೆಯಾಗಿತ್ತು. ಅತ್ಯಾಸಕ್ತಿಯುಳ್ಳ ದೇವರ ಮಗುವು ಮಾತ್ರವೇ ಆಶೀರ್ವದಿಸಲ್ಪಡಬಲ್ಲನು. **ದೇವರ ಕಡೆಗೆ ತಿರುಗಿಕೋ** (ಪಶ್ಚಾತ್ತಾಪ ಪಡು; μετανόησον, *metanoēson*, from μετανοέω, *metanoeō*) ಎಂಬುದು ಅನಿಶ್ಚಿತ ಭೂತಕಾಲರೂಪದಲ್ಲಿ ಇದ್ದು ಒಂದೇ ಸಮಯದಲ್ಲಿ ನಡೆದ, ನಿರ್ಣಾಯಕವಾದ ಕ್ರಿಯೆಯನ್ನು ಸೂಚಿಸುತ್ತದೆ.

**ವಚನ 20.** ಅವರ ಮೇಲಿದ್ದ ಪ್ರೀತಿಯ ಒಂದು ವ್ಯಕ್ತಪಡಿಸುವಿಕೆಯಾಗಿ, ಯೇಸುವು ಶಾಸ್ತ್ರಗಳಲ್ಲಿಯೇ ಅತ್ಯಂಥ ಮನತಟ್ಟುವಂಥ ಆಮಂತ್ರಣಗಳಲ್ಲೊಂದನ್ನು ಲವೊದಿಕೀಯದ ಕ್ರೈಸ್ತರಿಗೆ ನೀಡಿದನು: **ಇಗೋ, ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ.** ಇಲ್ಲಿ ವರ್ತಮಾನಕಾಲ ರೂಪವು ಬಳಸಲ್ಪಟ್ಟಿದೆ κρούω (*krouō*); ಯೇಸು ಇಂದಿಗೂ ತಟ್ಟುವದನ್ನು ಮುಂದುವರೆಸಿರುತ್ತಾನೆ. ತಟ್ಟುವದು ಮತ್ತು ಕರೆಯುತ್ತಿರುವರದು ("ನನ್ನ ಶಬ್ದವನ್ನು ಕೇಳಿ" ಎಂಬುದರಿಂದ ಪರೋಕ್ಷವಾಗಿ ಸೂಚಿಸಲ್ಪಟ್ಟಿರುತ್ತದೆ) ಎಂಬುದು ಯೇಸುವಿಗೆ ನಮ್ಮ ಹೃದಯಗಳಲ್ಲಿ ಮತ್ತು ಜೀವಿತಗಳಲ್ಲಿ ಆಮಂತ್ರಿಸಲ್ಪಡಬೇಕೆಂಬ ಉತ್ಕಟವಾದ ಬಯಕೆಯು ಇರುತ್ತದೆಂಬುದನ್ನು ತೋರಿಸುತ್ತದಷ್ಟೆ. ಇಂದು, ಯೇಸುವು "ಪರಿಸ್ಥಿತಿಗಳ ಮೂಲಕವಾಗಿ ತಟ್ಟುತ್ತಾನೆ ಮತ್ತು ತನ್ನ ವಾಕ್ಯದ ಮೂಲಕವಾಗಿ ಆತನು ಕರೆಯುತ್ತಾನೆ."[16] ಯೇಸುವು ಮುಂದುವರೆದು ಹೀಗೆ ಹೇಳುತ್ತಾನೆ, **ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು** [ನೋಡಿರಿ ಯೋಹಾನ 14:23], **ಅವನು ನನ್ನ ಸಂಗಡ ಊಟ ಮಾಡುವನು. ಊಟ ಮಾಡುವನು** ಎಂಬುದು ಗ್ರೀಕ್ ಭಾಷೆಯ δειπνέω (*deipneō*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ. *Deipneō* ಎಂಬಬುದು ಹಗಲಿನಲ್ಲಿ ತಿನ್ನುವ ಪ್ರಮುಖ ಊಟಕ್ಕಾಗಿ ಬಳಸುವ ಪದದ ಒಂದು ರೂಪವಾಗಿದೆ, δεῖπνον (*deipnon*) ಎಂಬುದು ಆರಾಮವಾಗಿ ಕುಳಿತು ತಿನ್ನುವ ಊಟವಾಗಿತ್ತಾದ್ದರಿಂದ ಅದು ಅವಸರದಿಂದ ತಿನ್ನುವ ಉಪಹಾರದಂತೆ ಆಗಿರಲಿಲ್ಲ.

ಈ ಮಾತುಗಳು ಲವೊದಿಕೀಯದವರಿಗೆ ಆಘಾತವನ್ನುಂಟು ಮಾಡಿರಬಹುದಾಗಿದೆ, ಯಾಕೆಂದರೆ ಅವರು ತನ್ನನ್ನು ತಮ್ಮ ಹೃದಯಗಳಿಂದ ಮತ್ತು ಜೀವಿತಗಳಿಂದ ಹೊರಗೆ ದೊಬ್ಬಿದ್ದಾರೆಂಬುದನ್ನು ಆತನು ಅವರಿಗೆ ಬಯಲುಗೊಳಿಸುತ್ತಿದ್ದಾನೆ. ಬಹುಶಃ ಅವರಿಗೆ ತಾವು ಹಾಗೆ ಮಾಡಿದ್ದೇವೆಂಬ ಪರಿಜ್ಞಾನವು ಸಹ ಇರಲಿಲ್ಲವೆಂದು ತೋರುತ್ತದೆ. ಈ ದುರಂತವು ನಮ್ಮಲ್ಲಿ ಯಾರಿಗೆ ಬೇಕಾದರೂ ಸಂಭವಿಸಬಹುದಾಗಿದೆ, ವಿಶೇಷವಾಗಿ ನಾವು ಕರ್ತನಿಗೆ ಹೊಂದಿರುವ ನಮ್ಮ ಸಮರ್ಪಣೆಯ ವಿಷಯದಲ್ಲಿ ಸ್ವಸಂತೃಪ್ತಿಯುಳ್ಳವರಾಗುವದಾದರೆ ಅದು ಸಂಭವಿಸಬಲ್ಲದು.

ಅದೇ ವೇಳೆಯಲ್ಲಿ, ಯೇಸುವಿನ ಮಾತುಗಳು ಲವೊದಿಕೀಯದವರನ್ನು ಪ್ರೋತ್ಸಾಹಗೊಳಿಸರಬೇಕು, ಯಾಕೆಂದರೆ ತಾನು ಪುನಃ ಅವರೊಂದಿಗೆ ಆಪ್ತ

ಸಂಬಂಧವನ್ನಿಟ್ಟುಕೊಳ್ಳಲು ಬಯಸುತ್ತಾನೆಂಬುದನ್ನು ಅವರಿಗೆ ನಿಶ್ಚಯಗೊಳಿಸಿದನು. ಆ ದಿನಗಳಲ್ಲಿ, ಈ ದಿನಗಳಲ್ಲಿಯೂ ಸಾಮಾನ್ಯವಾಗಿ ಸತ್ಯವಾಗಿರುವ ಪ್ರಕಾರವೇ, ಒಬ್ಬರ ಸಂಗಡ ಊಟ ಮಾಡುವದೆಂದರೆ ಅವನೊಂದಿಗೆ ನಿಕಟವಾದ ಅನ್ಯೋನ್ಯತೆಯನ್ನು ಇಟ್ಟುಕೊಳ್ಳುವದು ಎಂದರ್ಥವಾಗಿತ್ತು. ಇಲ್ಲಿ "ಪರಲೋಕದಲ್ಲಿ ಔತಣ" ಎಂಬ ಸೂಚ್ಯಾರ್ಥವು ಸಹ ಇರಬಹುದಾಗಿದೆ (ನೋಡಿರಿ ಲೂಕ 22:30; ಪ್ರಕಟನೆ 19:9). ಸಹವಾಸವನ್ನು ತಿರಿಗಿ ಸ್ಥಾಪಿಸುವದಕ್ಕೆ *ಸಾಧ್ಯವಿದೆ* ಎಂಬುದನ್ನು ಯೇಸುವಿನ ಪತ್ರವು ಸೂಚಿಸುತ್ತದೆ - ಈ ಕ್ರೈಸ್ತರು ಆತನ ಬಳಿಗೂ ಆತನ ಮಾರ್ಗಕ್ಕೂ ಹಿಂದಿರುಗುವ*ದಾದರೆ* ಅದು ಸಾಧ್ಯವಿರುತ್ತದೆ.

ಯೇಸುವು ಅವರ ಪುನಃಸ್ಥಾಪನೆಯನ್ನು ಎಷ್ಟೊಂದು ಬಯಸಿದ್ದಾಗ್ಯೂ, ಆತನು ಅವರ ಜೀವಿತಗಳೊಳಗೆ ತನ್ನ ಇಷ್ಟವನ್ನು ಒತ್ತಾಯದಿಂದ ಹಾಕುವವನಾಗಿರಲಿಲ್ಲ; ಆತನು ಯಾರ ಹೃದಯದ ಬಾಗಿಲನ್ನು ಒಡೆದುಕೊಂಡು ಒಳಗೆ ಹೋಗುವವನಲ್ಲ. ಬದಲಾಗಿ, ಆತನು ಬಾಗಿಲಿನ ಹೊರಗೆ ತಾಳ್ಮೆಯಿಂದ ಕಾಯುತ್ತಿದ್ದನು, ಅವರ ಗಮನವನ್ನು ಸೆಳೆಯುವದಕ್ಕೆ ಪ್ರಯತ್ನಿಸುತ್ತಿದ್ದನು ಮತ್ತು ಒಳಗೆ ಬಿಡುವಂತೆ ಕೇಳಿಕೊಳ್ಳುತ್ತಿದ್ದನು. ತೀರ್ಮಾನವು ಅವರಿಗೆ ಬಿಟ್ಟದ್ದಾಗಿತ್ತು. ಅವರು ಆತನ ಕರೆಯನ್ನು ನಿರ್ಲಕ್ಷ್ಯಿಸುವದಾದರೆ, ನ್ಯಾಯತೀರ್ಪು ಕಾದಿರುತ್ತದೆ. ಯಾಕೋಬ 5:9 ಹೇಳುವ ಪ್ರಕಾರ, "ಅಗೋ, ನ್ಯಾಯಾಧಿಪತಿಯು ಬಾಗಲಿನ ಹತ್ತಿರದಲ್ಲೇ ನಿಂತಿದ್ದಾನೆ."

**ವಚನ 21.** ಲವೊದಿಕೀಯದಲ್ಲಿನ ಸಭೆಯವರು ತಮ್ಮ ನಿಷ್ಕ್ರಿಯತೆಯನ್ನು ಜಯಿಸಿದವರಾಗುವದಾದರೆ, ಮುಂದೆ ಅದ್ಭುತಕರವಾದ ಆಶೀರ್ವಾದಗಳು ಕಾದಿದ್ದವು. ಯೇಸು ಹೀಗೆ ಹೇಳಿದನು, **ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡೆನು; ಹಾಗೆಯೇ ಜಯಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು.** ತಾನು ಈಗಾಗಲೆ ಅನುಭವಿಸದೆ ಇರುವ ಯಾವದನ್ನೂ ಅವರು ಅನುಭವಿಸಬೇಕಾಗಿಲ್ಲ ಎಂಬುದನ್ನು ಯೇಸು ಮತ್ತೊಂದು ಸಾರಿ ಅವರಿಗೆ ನಿಶ್ಚಯಗೊಳಿಸುತ್ತಾನೆ. ಆತನು ಮರಣವನ್ನು ಎದುರಿಸಿದ್ದನು - ಮತ್ತು ಜಯ ಹೊಂದಿದ್ದನು. ಆತನು ತನ್ನ ಪುನರುತ್ಥಾನದ ಮೂಲಕವಾಗಿ ಶಿಲುಬೆಯನ್ನು ಜಯಿಸಿದನು. ಬಳಿಕ ಆತನು ಪುನಃ ಪರಲೋಕಕ್ಕೆ ಆರೋಹಣಗೊಂಡನು ಮತ್ತು ದೇವರ ಬಲಗಡೆಯಲ್ಲಿ ಕೂತುಕೊಂಡನು (ಅಪೊಸ್ತಲರ ಕೃತ್ಯಗಳು 2:30-36). ಯೇಸುವಿನ ಸಂಗಡ ಆತನ ಸಿಂಹಾಸನದ ಮೇಲೆ ಕೂತುಕೊಳ್ಳುವದೆಂದರೆ ಆತನೊಂದಿಗೆ ಆಳ್ವಿಕೆ ಮಾಡುವದು ಆಗಿದೆ. ಕ್ರೈಸ್ತರು ಯೇಸುವಿನ ಸಂಗಡ ಆಳ್ವಿಕೆ ಮಾಡುವರು ಎಂಬ ವಾಸ್ತವಾಂಶವು ಪ್ರಕಟನೆ ಪುಸ್ತಕದಲ್ಲಿ ಒಂದು ಶ್ರೇಷ್ಠವಾದ ಸತ್ಯವಾಗಿರುತ್ತದೆ (5:10; 20:4, 6; 22:5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈಗ ರಾಜವಂಶಸ್ತ ಕುಟುಂಬದ ಭಾಗವಾಗಿ ನಾವು ಆತನೊಂದಿಗೆ ಆಳ್ವಿಕೆ ಮಾಡುವವರಾಗಿದ್ದೇವೆ (1:6; 5:10; ನೋಡಿರಿ ರೋಮಾ 8:17; ಎಫೆಸ 2:6). ಸಾಯಬೇಕಾದರೂ ನಂಬಿಗಸ್ತರಾಗಿರುವವರು ಆತನ ಸಂಗಡ "ಯುಗಯುಗಾಂತರಗಳಲ್ಲಿಯೂ" ಆಳುವರು (22:5; ನೋಡಿರಿ 2 ತಿಮೊಥೆ 2:12). ಲವೊದಿಕೀಯದಲ್ಲಿ ಜೀವಿಸಿದವರು ಆ ಪಟ್ಟಣದ ಒಬ್ಬ ನಾಗರೀಕರಾಗಿ ಇರುವದನ್ನು ಒಂದು ಸನ್ಮಾನವೆಂದು ಪರಿಗಣಿಸಿಕೊಂಡಿದ್ದರು; ಯೇಸುವಿನ ಸಂಗಡ ಆತನ ಸಿಂಹಾಸನದ ಮೇಲೆ ಆಳ್ವಿಕೆ ಮಾಡುವದು ಅದಕ್ಕಿಂತ ಎಷ್ಟೋ ಶ್ರೇಷ್ಠವಾದ ಸನ್ಮಾನವಾಗಿದೆ.

**ವಚನ 22.** ಮತ್ತೊಂದು ಸಾರಿ, ನಾವು ವೈಯಕ್ತಿಕ ಅನ್ವಯಿಕೆಯನ್ನು ಮಾಡಿಕೊಳ್ಳುವಂತೆ ಯೇಸು ಹೇಳುತ್ತಾನೆ: **ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ.**

# ಅನ್ವಯಿಸುವಿಕೆ

## ಸಾರ್ದಿಸಿನವರಿಗೆ ಬರೆದ ಪತ್ರ (3:1-6)

ಈ ಪತ್ರದ ಮೇಲೆ ಮಾಡಲಾಗುವ ಪ್ರಸಂಗಗಳ ಬಿರುದುಗಳು ಸಾಮಾನ್ಯವಾಗಿ ಸಭೆಯ ನಿರ್ಜೀವತ್ವವನ್ನು ಒತ್ತಿ ಹೇಳುತ್ತವೆ: "ಸಮಾಧಿಯಲ್ಲಿದ್ದ ಸಭೆ," "ಸಮಾಧಿ ಕಲ್ಲಿನ ಪ್ರಾಂತ್ಯದಲ್ಲಿದ್ದ ಸಭೆ," "ಒಂದು ಗೋಪುರವಿದ್ದಂಥ ಶವಾಗಾರ," "ಶವವಾಗಿ ಅಥವಾ ಜೀವಂತವಾಗಿ," "ಬಡಕಲ ಸಭೆ," ಮತ್ತು "ಜೀವಂತ ಶವಗಳ ಸಭೆ." ಇತರ ಶೀರ್ಷಿಕೆಗಳು ತಮ್ಮನ್ನು ಮೈಲಿಗೆ ಮಾಡಿಕೊಳ್ಳದ ಸ್ವಲ್ಪ ಜನರ ಮೇಲೆ ಒತ್ತು ಕೊಡುತ್ತವೆ: "ನಂಬಿಗಸ್ತರಾದ ಸ್ವಲ್ಪ ಜನರನ್ನೊಳಗೊಂಡಿದ್ದ ಅಪನಂಬಿಗಸ್ತಿಕೆಯ ಸಭೆ," "ಸ್ವಲ್ಪ ಜನ, ಗರ್ವಿಷ್ಠ, ಮತ್ತು ಬಲಪಡಿಸುವಾತನು," "ನಂಬಿಗಸ್ತರಾದ ಸ್ವಲ್ಪ ಜನರಲ್ಲಿ ಒಬ್ಬನಾಗಿರು," "ನಂಬಿಗಸ್ತರಾದ ಸ್ವಲ್ಪ ಜನರಿಗೋಸ್ಕರ ದೇವರಿಗೆ ಸ್ತೋತ್ರ!" ಇತರ ಸಂಭಾವ್ಯ ಶೀರ್ಷಿಕೆಗಳೆಂದರೆ "ಗತಕಾಲದ ವೈಭವ ಮತ್ತು ವರ್ತಮಾನಕಾಲದ ಕ್ಷೀಣತೆ" ಮತ್ತು "ಒಬ್ಬ ಕಳ್ಳನ ರೀತಿಯಲ್ಲಿ."

J. Wayne Kilpatrickನು ಸತ್ತಿರುವ ಮತ್ತು ಸಾಯುತ್ತಿರುವ ಸಭೆಗಳ ಗುಣಸ್ವಭಾವಗಳ ಕುರಿತು ಬೋಧಿಸುವದಕ್ಕೆ ಸಾರ್ದಿಸಿನ ಸಭೆಗೆ ಬರೆದ ಪತ್ರವನ್ನು ಬಳಸಿದನು.[17] ಪ್ರಸಂಗದ ಮೊದಲ ಭಾಗದಲ್ಲಿ, ಆತನು ಗಮನಕ್ಕೆ ತರುವದೇನೆಂದರೆ ಸಭೆಗಳು ಸಾಯುತ್ತವೇ ಯಾಕೆಂದರೆ ಅವುಗಳ ಕೊರತೆಯಿರುತ್ತದೆ, ಏನೆಂದರೆ (1) ತೊಡಗಿಸಿಕೊಳ್ಳುವಿಕೆ, (2) ಸಮರ್ಪಣೆ, (3) ದರ್ಶನ, (4) ನಂಬಿಕೆ, ಮತ್ತು (5) ನಾಯಕತ್ವ. Kilpatrickನು ಮುಂದುವರೆದು ಸಾಯುತ್ತಿರುವ ಸಭೆಯ ಗುಣಸ್ವಭಾವಗಳನ್ನು ತಿಳಿಸುತ್ತಾ ಸಾಗುತ್ತಾನೆ: (1) ಮಹಾ ಆದೇಶವನ್ನು ಅಪಾರ್ಥಮಾಡಿಕೊಳ್ಳುವದು, (2) ನಂಬಿಕೆಯನ್ನು ಕಾಪಾಡುವದರ ಮತ್ತು ವಿಸ್ತರಿಸುವದರ ಕಡೆಗೆ ಗಮನ ಕೊಡುವದಕ್ಕಿಂತಲೂ ಹೆಚ್ಚಾಗಿ ತಮ್ಮ ಸಮಯವನ್ನು ಕೇವಲ ನಂಬಿಕೆಯನ್ನು ಕಾಪಾಡುವದಕ್ಕೆ ಕೊಡುತ್ತಾರೆ, (3) ಅವರು ಹಠಮಾರಿ ಧೋರಣೆಯಿರುವವರು ಮತ್ತು ಬದಲಾಗುವದಕ್ಕೆ ಮನಸ್ಸಿಲ್ಲದವರು, (4) ಸ್ಫೂರ್ತಿದಾಯಕವಲ್ಲದ ಆರಾಧನಾ ಕೂಟಗಳು, (5) ಶಿಷ್ಯರನ್ನು ಅಭಿವೃದ್ಧಿ ಪಡಿಸುವದಿಲ್ಲ, (6) ಸುವಾರ್ತೆಯನ್ನು ಸಾರುವದಿಲ್ಲ, ಮತ್ತು (7) ದೇವರ ಮೇಲೆ ಅವಲಂಬಿತರಾಗುವದಿಲ್ಲ.

## "ಸತ್ತವನಾಗಿದ್ದೀ" (3:1)

ಸಾರ್ದಿಸಿನ ಕ್ರೈಸ್ತರಿಗೆ ಯೇಸುವು ಮಾಡಿದ ಮೌಲ್ಯಮಾಪನವು (ವ. 1) ಎಷ್ಟೊಂದು ಆಘಾತಕರವಾಗಿತ್ತೆಂಬುದನ್ನು ಅರ್ಥಮಾಡಿಕೊಳ್ಳಬೇಕಾದರೆ, ತನ್ನ ದೈಹಿಕ ಪರಾಕ್ರಮದ ಬಗ್ಗೆ ಯಾವಾಗಲೂ ಹೆಮ್ಮೆ ಪಟ್ಟುಕೊಳ್ಳುತ್ತಿದ್ದ ಒಬ್ಬ ಮನುಷ್ಯನನ್ನು ಕಲ್ಪನೆ ಮಾಡಿಕೊಳ್ಳಿರಿ - ನಾವು ಆತನನನ್ನು ಮಿಸ್ಟರ. ಜೋನ್ಸ್ ಎಂದು ಕರೆಯೋಣ. ಮಿಸ್ಟರ್. ಜೋನ್ಸ್ ತನ್ನ ಯೌವನ ಪ್ರಾಯದಲ್ಲಿ ಒಬ್ಬ ಗಮನಾರ್ಹವಾದ ಕ್ರೀಡಾಪಟುವಾಗಿದ್ದನು ಮತ್ತು ಈಗಲೂ ಆರೋಗ್ಯದ ಚಿತ್ರದಂತೆ ಕಾಣುತ್ತಾನೆ. ಒಂದು ದಿನ ಆತನು ವಾಡಿಕೆಯಂತೆ ಪರೀಕ್ಷೆಗೆ ಹೋಗುವ ಪ್ರಕಾರವೇ ವೈದ್ಯರ ಬಳಿಗೆ ಹೋಗುತ್ತಾನೆ. ಪರೀಕ್ಷೆಗಳು ಪೂರ್ತಿಗೊಂಡ ಬಳಿಕ, ವೈದ್ಯನು ಪರೀಕ್ಷೆಯ ಕೋಣೆಗೆ ಹಿಂದಿರುಗುತ್ತಾನೆ, ಆತನ ಕಣ್ಣಲ್ಲಿ ಕಣ್ಣಿಟ್ಟು ನೋಡಿ ಹೀಗೆ ಹೇಳುತ್ತಾನೆ, "ಮಿಸ್ಟರ್. ಜೋನ್ಸ್, ನೀನೊಬ್ಬ ಸತ್ತಿರುವಂಥ ಮನುಷ್ಯನು!" ಅಂದು ಯೇಸುವಿನ ಆತ್ಮೀಕ ಕೂಲಂಕುಷ ಪರೀಕ್ಷೆಯು ಸಾರ್ದಿಸಿನವರಿಗೆ ಉಂಟುಮಾಡಿದ್ದಷ್ಟೇ ಆಘಾತವನ್ನು ಆ ವೈದ್ಯಕೀಯ ಕೂಲಂಕೂಷ ಪರೀಕ್ಷೆಯು ಮಿಸ್ಟರ್. ಜೋನ್ಸ್‌ಗೆ ಉಂಟು ಮಾಡಿತ್ತು.

"ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದೀರಿ" (ಎಫೆಸ 2:1) ಎಂದು ವೈದ್ಯಕೀಯವಾಗಿ ಪರೀಕ್ಷೆ ಮಾಡಿ ಹೇಳಲ್ಪಡುವವರಲ್ಲಿ ಇವರು ಮೊದಲನೆಯವರಾಗಲಿ ಅಥವಾ ಕಡೆಯವರಾಗಲಿ ಆಗಿರಲಿಲ್ಲ. ಒಂದು ಭಾನುವಾರ ಮುಂಜಾನೆಯಂದು, ಸಾಯಂಕಾಲದ ಆರಾಧನೆಯ ವೇಳೆಯಲ್ಲಿ ಒಬ್ಬ ಬೋಧಕನು ತಾನು ಒಬ್ಬ ಪ್ರಮುಖ ಸದಸ್ಯನ ಶವಸಂಸ್ಕಾರದ ಆರಾಧನೆಯಲ್ಲಿ ಬೋಧಿಸಲಿದ್ದೇನೆಂದು ಪ್ರಕಟಿಸಿದನು. ಆ ರಾತ್ರಿಯಂದು, ಏನೆಂದು ತಿಳಯದೆ ಗೊಂದಲದಲ್ಲಿದ್ದ ಸದಸ್ಯರು ಕಟ್ಟಡದ ಎದುರಿನಲ್ಲಿ ಒಂದು ಶವಪೆಟ್ಟಿಗೆಯನ್ನು ಕಂಡರು. ಬೋಧಕನು ಪ್ರಸಂಗ ಮಾಡುವ ಸಮಯವು ಬಂದಾಗ, ಸತ್ತವನ ಕುರಿತಾಗಿ ಸಾಮಾನ್ಯವಾದ ಪದಗಳಲ್ಲಿ ಮಾತಾಡಿದನು. ಅಂತಿಮವಾಗಿ, ಆತನು ಹೇಳಿದ್ದೇನೆಂದರೆ, "ನಿಮ್ಮಲ್ಲಿ ಕೆಲವರು ಸತ್ತಿರುವವರು ಯಾರಿರಬಹುದೆಂದು ಚಕಿತಗೊಂಡಿರುವಿರಿ. ನೀವು ಶವಪೆಟ್ಟಿಗೆಯಲ್ಲಿ ಒಂದು ದೃಷ್ಟಿಯನ್ನು ಹಾಕುತ್ತಾ ಸಾಗಬೇಕೆಂದು ನಿಮ್ಮನ್ನು ಆಮಂತ್ರಿಸುತ್ತೇನೆ." ಸದಸ್ಯರು ಸಾಲಾಗಿ ನಿಂತುಕೊಂಡವರಾಗಿ ಶವಪೆಟ್ಟಿಗೆಯೊಳಗೆ ಒಂದು ಕನ್ನಡಿಯನ್ನು . . . ಅದರಲ್ಲಿ ಅವರ ಮುಖಗಳು ಪ್ರತಿಫಲನಗೊಳ್ಳುವದನ್ನು ಕಂಡರು. ಅದು ಸಭೆಗೆ ಆತ್ಮೀಕ ಉಜ್ಜೀವನದ ಅಗತ್ಯವಿದೆ ಎಂದು ತಿಳಿಸುವದಕ್ಕೆ ಸಭಾಪಾಲಕನು ಆರಿಸಿಕೊಂಡ ಮಾರ್ಮಿಕವಾದ ದಾರಿಯಾಗಿತ್ತು (ನೋಡಿರಿ ಕೀರ್ತನೆ 85:6; 119:25).

## ನಂಬಿಗಸ್ತರಾದ ಸ್ವಲ್ಪ ಜನ (3:4)

ಈ ಲೋಕದ ಮಾನದಂಡಗಳು ಕೆಟ್ಟು ಹೋಗುವಾಗ, "ದುಷ್ಟರೂ ವಂಚಕರೂ . . . ಹೆಚ್ಚಾದ ಕೆಟ್ಟತನಕ್ಕೆ ಹೋಗುವರು" (2 ತಿಮೊಥೆ 3:13), ಅನೇಕರು ತಮ್ಮ ಕೈಗಳನ್ನು ಚೆಲ್ಲಿ ಹಿಂದೆ ಸರಿಯುವರು - ಆದರೆ ನಂಬಿಗಸ್ತರಾದ ಸ್ವಲ್ಪ ಜನರು ಯಾವಾಗಲೂ ಮುಂದೆ ಸಾಗುತ್ತಲಿರುವರು. ಕೆಲವು ಸ್ಥಳಗಳಲ್ಲಿ, ವಿವಾಹದ ಪದ್ಧತಿಯು ಕುಸಿದು ಹೋಗುತ್ತಿರುವಾಗ ಮತ್ತು ಲೈಂಗಿಕ ಪಾಪವು ಸರ್ವಸಾಧಾರಣವಾಗುತ್ತಿರುವಾಗ, ಅನೇಕರು "ನಾನು ಪ್ರಯತ್ನವನ್ನಾದರೂ ಏಕೆ ಮಾಡಬೇಕು?" ಎಂದು ತರ್ಕಿಸುತ್ತಾರೆ - ಆದರೆ ನಂಬಿಗಸ್ತರಾದ ಸ್ವಲ್ಪ ಜನರು ಯಾವಾಗಲೂ "ನಾನೊಬ್ಬ ಕ್ರೈಸ್ತನಾದ್ದರಿಂದ ಪ್ರಯತ್ನಿಸಬೇಕು; ಆ ಕಾರಣದಿಂದಲೇ" ಎಂದು ಉತ್ತರಿಸುವರು. ಅಸಡ್ಡೆ ಮತ್ತು ಸ್ವಸಂತೃಪ್ತಿಗಳು ದೇಶದಲ್ಲಿ ತುಂಬಿಕೊಳ್ಳುವಾಗ, ಅನೇಕರಿಗೆ ಅಗಲವಾದ ದಾರಿಯಲ್ಲಿ, ಜನಪ್ರಿಯವಾಗಿರುವ ದಾರಿಯಲ್ಲಿ ಸಾಗುವದು ಸುಲಭವೆನ್ನಿಸುತ್ತದೆ - ಆದರೆ ನಂಬಿಗಸ್ತರಾದ ಸ್ವಲ್ಪ ಜನರು ಯಾವಾಗಲೂ ಇಕ್ಕಟ್ಟಾದ ದಾರಿಯಲ್ಲಿ, ಏಕಾಂಗಿಯಾದ ದಾರಿಯಲ್ಲಿ ನಿಷ್ಠೆಯಿಂದಿರುತ್ತಾರೆ (ಮತ್ತಾಯ 7:13, 14). ನಂಬಿಗಸ್ತರಾದ ಸ್ವಲ್ಪ ಜನರಿಗಾಗಿ ದೇವರಿಗೆ ಸ್ತೋತ್ರ!

ಕರ್ತನ ಸಭೆಯ ವ್ಯಕ್ತಿಗತವಾದ ಸಭಿಕರೊಳಗೆ ನಂಬಿಗಸ್ತರಾದ ಸ್ವಲ್ಪ ಜನರು ಇರುತ್ತಾರೆ: ಎಲ್ಲಾ ಆರಾಧನೆಯ ಕೂಟಗಳಿಗೆ ಹಾಜರಾಗುವರೆಂದು ಅವರನ್ನು ವಿಶ್ವಾಸಿಸಬಹುದಾಗಿದೆ, ಬಹುಪಾಲು ಹಣವನ್ನು ಕೊಡುವವರು, ಬಹುಪಾಲು ಕೆಲಸವನ್ನು ಮಾಡುವವರು, ದೀಕ್ಷಾಸ್ನಾನ ಮಾಡಿಸಿಕೊಂಡ ಮತ್ತು ತಿದ್ದಿ ಸರಿಮಾಡಲ್ಪಟ್ಟಿರುವವರಲ್ಲಿ ಬಹುಸಂಖ್ಯೆಯವರನ್ನು ಸಂಧಿಸುವವರು. ಬೋಧಕರು ಕೆಲವು ಸಾರಿ ನಿರಾಶೆಗೊಳ್ಳುವರು ಯಾಕೆಂದರೆ ದೇವರ ಸಂದೇಶದಿಂದ ಯಾವದೇ ಪ್ರಭಾವಕ್ಕೊಳಗಾಗದೆ ಇರುವವರನ್ನು ಅವರು ನೋಡುತ್ತಾರೆ; ಅವರು "ನೀತಿಗಾಗಿ ಹಸಿದು ಬಾಯಾರಿರುವ" ಸ್ವಲ್ಪ ಜನರನ್ನು ನೋಡುವದಾದರೆ ಅವರಿಗೆ ಉತ್ತಮವಾಗಿರುವದು (ಮತ್ತಾಯ 5:6). ನಂಬಿಗಸ್ತರಾದ ಸ್ವಲ್ಪ ಜನರಿಗಾಗಿ ದೇವರಿಗೆ ಸ್ತೋತ್ರ!

### “ಒರಸಿ ಬಿಡುವದು” (3:5)

ಯೇಸುವು ಸಾರ್ದಿಸಿನ ಕ್ರೈಸ್ತರಿಗೆ ಹೀಗೆ ವಾಗ್ದಾನ ಮಾಡಿದನು: “ಜಯಶಾಲಿಗೆ . . . ಜೀವಬಾಧ್ಯರ ಪಟ್ಟಿಯಿಂದ ಅವನ ಹೆಸರನ್ನು ನಾನು ಅಳಿಸಿಬಿಡುವದಿಲ್ಲ . . .” (ವ. 5). “ಅಳಿಸಿ ಬಿಡು” (“ತೊಡೆದುಹಾಕು,” KJV) ಎಂಬ ಪದವು ಗ್ರೀಕ್ ಭಾಷೆಯ ἐξαλείφω (*exaleiphō*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ. ಜೀವಬಾಧ್ಯರ ಪುಸ್ತಕದಿಂದ ತನ್ನ ಹೆಸರನ್ನು ಅಳಿಸಿ ಹಾಕಿಸಿಕೊಳ್ಳುವದು ಒಬ್ಬ ವ್ಯಕ್ತಿಗೆ ನಿತ್ಯವಾದ ದಂಡನೆಯು ಖಚಿತ ಎಂಬರ್ಥವಾಗುತ್ತದೆ (20:15). ಪ್ರಕಟನೆ ಪುಸ್ತಕದೊಳಗೆ ಅನಂತರದಲ್ಲಿ, *exaleiphō* ಎಂಬ ಇದೇ ಪದವು ತೀವ್ರವಾಗಿ ಬೇರೆಯಾದ ಸನ್ನಿವೇಶದಲ್ಲಿ ಬಳಸಲ್ಪಟ್ಟಿದ್ದು ಅಲ್ಲಿ ಅದು “ಒರೆಸಿ ಬಿಡುವನು” ಎಂದು ಅನುವಾದಿಸಲ್ಪಟ್ಟಿದೆ: “[ದೇವರು] ತಾನೇ ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು” (21:4; ನೋಡಿರಿ 7:17). ಬೆಂಕಿಯ ಕೆರೆಯಲ್ಲಿ (ನರಕ) ಹಾಕಲ್ಪಡುವವರ ಹೆಸರುಗಳು ಜೀವಭಾದ್ಯರ ಪಟ್ಟಿಯಿಂದ ಸಂಪೂರ್ಣವಾಗಿ ಒರಸಿ ಹಾಕಲ್ಪಡುವವು, ಆದರೆ ದೇವರ ಸನ್ನಿಧಿಯಲ್ಲಿ (ಪರಲೋಕ) ಜೀವಿಸುವವರ ಕಣ್ಣೀರು ಸಂಪೂರ್ಣವಾಗಿ ಒರಸಿ ಹಾಕಲ್ಪಡುವದು.

### ಫಿಲದೆಲ್ಫಿಯದವರಿಗೆ ಬರೆದ ಪತ್ರ (3:7-13)

ಬೋಧಕರು ಅನೇಕ ಸಾರಿ 3:7-13ರ ಮೇಲಿನ ಪ್ರಸಂಗಕ್ಕೆ “ತೆರೆದ ಬಾಗಿಲನ್ನು ಹೊಂದಿದ್ದ ಸಭೆ” ಅಥವಾ ಕೇವಲ “ತೆರೆದ ಬಾಗಿಲು” ಎಂಬ ಶೀರ್ಷಿಕೆಯನ್ನು ಕೊಡುತ್ತಾರೆ ಮತ್ತು ಸದವಕಾಶಗಳನ್ನು, ವಿಶೇಷವಾಗಿ ಸುವಾರ್ತಾಸೇವೆಯನ್ನು ಮಾಡುವದಕ್ಕೆ ಇರುವ ಸದವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳುವದನ್ನು ಒತ್ತಿ ಹೇಳುತ್ತಾರೆ. ಅಂಥ ಪಾಠವನ್ನು “ಸಹೋದರ ಪ್ರೀತಿಯಿದ್ದ ಸಭೆ” ಎಂದು ಸಹ ಕರೆಯಬಹುದು, ಅಲ್ಲಿ ಒಬ್ಬರನ್ನೊಬ್ಬರು ಪ್ರೀತಿಸುವ ಅಗತ್ಯತೆಯ ಬಗ್ಗೆ ಒತ್ತು ಕೊಡಬಹುದು (ಯೋಹಾನ 13:34; ರೋಮಾ 5:5; 1 ಥೆಸಲೋನಿಕ 4:9; 1 ಯೋಹಾನ 4:19). ಆತ್ಮೀಕವಾಗಿ ಮಾತಾಡುವದಾದರೆ, ನಾವೆಲ್ಲರೂ ಸಹೋದರ ಪ್ರೀತಿಯ ನಗರವಾಗಿರುವ ಫಿಲದೆಲ್ಫಿಯದಲ್ಲಿ ವಾಸಿಸತಕ್ಕದ್ದು.

### ನಮಗಿರುವದನ್ನು ಬಳಸಿಕೊಳ್ಳುವರದು (3:8)

ನಾವು ಏನನ್ನು ಮಾಡುವದಕ್ಕೆ ಸಮರ್ಥರಾಗಿದ್ದೇವೋ ಅದಕ್ಕಿಂತಲೂ ಅಧಿಕವಾದದ್ದನ್ನು ಮಾಡುವಂತೆ ದೇವರು ಎಂದಿಗೂ ನಮ್ಮಿಂದ ಎದುರು ನೋಡುವವನಲ್ಲ, ಆದರೆ ಆತನು ನಮಗೆ ಕೊಡುವಂಥ ಸಂಪನ್ಮೂಲಗಳನ್ನು ನಾವು ಬಳಸಿಕೊಳ್ಳಬೇಕೆಂಬುದನ್ನಂತೂ ನಮ್ಮಿಂದ ಅಪೇಕ್ಷಿಸುವವನಾಗಿದ್ದಾನೆ. ಕೆಲವು ವ್ಯಕ್ತಿಗತ ಕ್ರೈಸ್ತರು ಹಾಗೂ ಸಭೆಗಳು “ನಾವು ಸ್ವಲ್ಪವಾದದ್ದನ್ನೇ ಮಾಡಬಲ್ಲೆವಾದ್ದರಿಂದ, ನಾವು ಏನನ್ನೂ ಮಾಡುವದಿಲ್ಲ” ಎಂಬ ತತ್ವವನ್ನು ಇಟ್ಟುಕೊಂಡಿರುತ್ತಾರೆ. ಇನ್ನೊಂದೆಡೆಯಲ್ಲಿ, ಫಿಲದೆಲ್ಫಿಯದಲ್ಲಿನ ಸಭೆಯು ಮಾರ್ಕ 14:8ರಲ್ಲಿ ಯೇಸುವು ಶ್ಲಾಘನೆ ಮಾಡಿದ ಸ್ತ್ರೀಯಂತೆ ಇತ್ತು, ಆಕೆಯು “ತನ್ನ ಕೈಲಾಗುವಷ್ಟು ಮಾಡಿದ್ದಳು.”

### ನಮ್ಮ ಕರ್ತನು ಬಲಿಷ್ಠನು (3:8)

ಒಬ್ಬ ಮನುಷ್ಯನು ಒಂದು ದೊಡ್ಡ ಹಳ್ಳದಷ್ಟು ಉದ್ದವಾಗಿ ಹಾಕಲಾಗಿರುವ ಸೇತುವೆಯ ಬಳಿಗೆ ಬಂದಾಗ, “ನನ್ನ ಕಾಲುಗಳು ಈ ದೊಡ್ಡ ಹಳ್ಳವನ್ನು ಜಿಗಿಯುವಷ್ಟು ಬಲಿಷ್ಠವಾಗಿಯೋ?” ಎಂದು ಕೇಳಿಕೊಳ್ಳುವದಿಲ್ಲ. ಬದಲಾಗಿ, ಆತನು ಹೀಗೆ ಕೇಳಿಕೊಳ್ಳುವನು, “ನಾನು ಅದರ ಮೇಲೆ ನಡೆದು ಸಾಗುವಾಗ ಈ ಸೇತುವೆಯು ನನ್ನನ್ನು ಬೀಳದಂತೆ ಆಸರೆಯಾಗಿರುವಷ್ಟು ಬಲಿಷ್ಠವಾಗಿದೆಯೋ?” ಅದೇ ರೀತಿಯಲ್ಲಿಯೇ, ನಾವು ಜೀವನದ ಸಂಕಷ್ಟಗಳನ್ನು

ಎದುರಿಸುವಾಗ, ಎದುರಾಗುವ ಪ್ರಶ್ನೆಯು "ನಾವು ಸಾಕಷ್ಟು ಬಲಿಷ್ಠರಾಗಿದ್ದೇವೋ" ಎಂದಿರಬಾರದು, ಆದರೆ "*ನಮ್ಮ ಕರ್ತನು* ಸಾಕಷ್ಟು ಬಲಿಷ್ಠನೋ?" ಎಂದಾಗಿರತಕ್ಕದ್ದು. ಫಿಲದೆಲ್ಫಿಯದಲ್ಲಿನ ಸಭೆಯು ಆ ಪ್ರಶ್ನೆಗೆ ಪ್ರತಿಧ್ವನಿಗೊಳ್ಳುವಂತೆ "ಹೌದು!" ಎಂದು ಉತ್ತರಿಸಿತ್ತು.

## ಸಂಕಷ್ಟಗಳಲ್ಲಿ ಬದುಕುಳಿಯುವದು (3:10)

ಕ್ರೈಸ್ತರಾಗಿ, ನಮಗೆ ಸಂಕಷ್ಟಗಳಿಂದ ಸ್ವಾತಂತ್ರ್ಯವಾಗಿರುವೆವು ಎಂಬ ವಾಗ್ದಾನ ಮಾಡಲ್ಪಟ್ಟಿಲ್ಲ, ಆದರೆ ಬದುಕುಳಿಯುವದಕ್ಕೆ ಬೇಕಾದ ಆತ್ಮೀಕ ಸಂಪನ್ಮೂಲಗಳ ವಾಗ್ದಾನವಂತೂ ನಮಗೆ ಮಾಡಲ್ಪಟ್ಟಿದೆ (2 ಕೊರಿಂಥ 12:9; 2 ತಿಮೊಥೆ 3:12; 4:18; ಇಬ್ರಿಯ 4:16). ಯೇಸುವು ಕ್ರೈಸ್ತರಿಗೆ ನೀಡುವ ಅನುಗ್ರಹದಲ್ಲಿರುವ ಮುಖ್ಯ ಕಾರಣಾಂಶವೆಂದರೆ ಒಂದು ನೂತನ ಮನೋಭಾವ - ಯಾವದು ಪ್ರಾಮುಖ್ಯವಾಗಿರುತ್ತದೆ ಮತ್ತು ಯಾವದು ಪ್ರಾಮುಖ್ಯವಲ್ಲ ಎಂಬುದರ ಕುರಿತಾಗಿ ಒಂದು ಬದಲಾಗಿರುವ ದೃಷ್ಟಿಕೋನ. ನಿರ್ದಾಕ್ಷಿಣ್ಯವಾಗಿ ಹಿಂಸಿಸಲ್ಪಟ್ಟ ಪೌಲ ಮತ್ತು ಇತರರು ಆ ಮನೋಭಾವ ಮಾದರಿಯಾಗಿರುವರು:

> . . . ನಾವು ಧೈರ್ಯಗೆಡುವದಿಲ್ಲ. ನಮ್ಮ ದೇಹವು ನಾಶವಾಗುತ್ತಾ ಇದ್ದರೂ ನಮ್ಮ ಆಂತರ್ಯವು ದಿನೇದಿನೇ ಹೊಸದಾಗುತ್ತಾ ಬರುತ್ತದೆ (2 ಕೊರಿಂಥ 4:16).
>
> ಕರ್ತನು ನನ್ನ ಸಹಾಯಕನು, ಭಯಪಡೆನು, ಮನುಷ್ಯನು ನನಗೆ ಏನು ಮಾಡಾನು? ಎಂದು ನಾವು ಧೈರ್ಯವಾಗಿ ಹೇಳಬಲ್ಲೆವು (ಇಬ್ರಿಯ 13:6).
> ನನಗಂತೂ ಬದುಕುವದೆಂದರೆ ಕ್ರಿಸ್ತನೇ, ಸಾಯುವದು ಲಾಭವೇ (ಫಿಲಿಪ್ಪಿ 1:21).

ಇತರ ಕಾರಣಾಂಶಗಳು ಸೇರಿರುತ್ತವೆ, ಉದಾಹರಣೆಗೆ ನಮಗೆ ಸಹಿಸಿಕೊಳ್ಳುವದಕ್ಕೆ ಸಾಧ್ಯವಾಗುವದಕ್ಕಿಂತಲೂ ಹೆಚ್ಚಾದ ಶೋಧನೆಯು ನಮಗಾಗುವದಿಲ್ಲ ಎಂಬ ಕರ್ತನ ವಾಗ್ದಾನವು ನಮಗಿರುತ್ತದೆ (1 ಕೊರಿಂಥ 10:13). ಸಂಕಷ್ಟಗಳು ಬರುವ ವೇಳೆ ತಾನು ಅವರನ್ನು ಕೈ ಬಿಡುವದಿಲ್ಲ ಎಂದು ಯೇಸುವು ಫಿಲದೆಲ್ಫಿಯದಲ್ಲಿನ ಕ್ರೈಸ್ತರಿಗೆ ವಾಗ್ದಾನ ಮಾಡಿದನು. ಆತನು ಈ ದಿನದಲ್ಲಿ *ನಮ್ಮನ್ನು* ಸಹ ಕೈ ಬಿಡುವವನಲ್ಲ (ಇಬ್ರಿಯ 13:5).

## ಲವೊದಿಕೀಯದವರಿಗೆ ಬರೆದ ಪತ್ರ (3:14-22)

ಈ ವಾಕ್ಯಭಾಗದ ಮೇಲೆ ಒಂದು ಆರಂಭಿಕ ಪ್ರಸಂಗಕ್ಕೆ "ಯಶಸ್ವಿಗೊಂಡಿದ್ದೇನೆಂದು ಭಾವಿಸಿಕೊಂಡಿದ್ದ ಸಭೆ," "ಯೇಸುವಿಗೆ ವಾಂತಿ ಬರಿಸುವಂತೆ ಮಾಡಿದ ಸಭೆ," ಅಥವಾ "ಬಡತನದಲ್ಲಿದ್ದ ಐಶ್ವರ್ಯವಂತ ಸಭೆ" ಎಂಬ ಶೀರ್ಷಿಕೆಯನ್ನು ಇಡಬಹುದು. ಲವೊದಿಕೀಯದ ಕುರಿತಾದ ಎರಡನೆಯ ಪಾಠಕ್ಕೆ "ಅತ್ಯುತ್ತಮ ವಾಗ್ದಾನ" ಅಥವಾ "ಮುಚ್ಚಿದ ಬಾಗಿಲುಳ್ಳ ಸಭೆ" - ತೆರೆದ ಬಾಗಿಲನ್ನು ಹೊಂದಿದ್ದ ಫಿಲದೆಲ್ಫಿಯದ ಸಭೆಗೆ ತದ್ವಿರುದ್ಧವಾದದ್ದು - ಎಂದು ಶೀರ್ಷಿಕೆಯನ್ನು ಕೊಡಬಹುದು. Warren Wiersbeನು ಲವೊದಿಕೀಯದ ಸಭೆಯನ್ನು "ಮೂರ್ಖ ಸಭೆ" ಎಂದು ಕರೆಯುತ್ತಾ ಅವರು ತಮ್ಮ ಹುರುಪನ್ನು (ವಚನಗಳು 16, 17), ತಮ್ಮ ಮೌಲ್ಯಗಳನ್ನು (ವಚನಗಳು 17, 18), ತಮ್ಮ ದರ್ಶನವನ್ನು (ವ. 18) ಮತ್ತು ತಮ್ಮ ಉಡಿಗೆತೊಡಿಗೆಗಳನ್ನು ಕಳೆದುಕೊಂಡಿದ್ದರು ಎಂದು ಹೇಳುತ್ತಾನೆ.[18]

Ronnie Whiteನು ಈ ಪತ್ರದ ಮೇಲೆ ಒಂದು ಶಕ್ತಿಶಾಲಿಯಾದ ಪಾಠವನ್ನು ಬರೆದು ಅದಕ್ಕೆ "Church Enemy Number One"[19] ಎಂದು ಹೆಸರಿಟ್ಟನು. ಸಭೆಯು ಎದುರಿಸುವ

ಅತ್ಯಂಥ ದೊಡ್ಡ ವೈರಿಯೆಂದರೆ ಉಗುರುಬೆಚ್ಚಗೆತನ. Whiteನು ಪಾಠವನ್ನು ಎರಡು ವಿಭಾಗಗಳಲ್ಲಿ ವಿಂಗಡಿಸಿದನು: (1) ಕರುಣಾಜನಕ ಚಿತ್ರಣ, (2) ವೈಯಕ್ತಿಕ ಮನವಿ. ಮೊದಲ ವಿಭಾಗವು ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟಿರುತ್ತದೆ: ಸಭೆಯ ಸ್ಥಿತಿ (ವಚನಗಳು 15, 16), ಕ್ರಿಸ್ತನ ಟೀಕೆ (ವ. 17), ಕ್ರಿಸ್ತನ ಬುದ್ಧಿವಾದ (ವಚನಗಳು 18, 19), ಮತ್ತು ಕ್ರಿಸ್ತನ ಕರೆ (ವ. 20).

## ಉಗುರುಬೆಚ್ಚಗಿನ ಕ್ರೈಸ್ತತ್ವ (3:14-22)

ಲವೊದಿಕೀಯದಲ್ಲಿನ ಸಭೆಯು ತಣ್ಣಗಾಗಲಿ ಬೆಚ್ಚಗಾಗಲಿ ಇರಲಿಲ್ಲ, ಆದರೆ ಉಗುರುಬೆಚ್ಚಗೆ ಇತ್ತು. ಇಲ್ಲಿ ಎರಡು ವಾಸ್ತವಾಂಶಗಳನ್ನು ಒತ್ತಿ ಹೇಳತಕ್ಕದ್ದು: (1) ಲವೊದಿಕೀಯದಲ್ಲಿದ್ದ ಸಮಸ್ಯೆಯು ಕೇವಲ ಸಭೆಯದ್ದಾಗಿರದೆ ಅದು ವೈಯಕ್ತಿಕವಾಗಿತ್ತು. ಲವೊದಿಕೀಯದಲ್ಲಿನ ಸಭೆಯು ಉಗುರುಬೆಚ್ಚಗೆ ಇತ್ತು ಯಾಕೆಂದರೆ ಅದರ ವ್ಯಕ್ತಿಗತ ಸದಸ್ಯರು ಉಗುರುಬೆಚ್ಚಗೆ ಇದ್ದರು. ಒಂದು ಸಭೆಯಲ್ಲಿನ ಉಗುರುಬೆಚ್ಚಗಿನ ಸ್ಥಿತಿಯನ್ನು ಹೋಗಲಾಡಿಸಬೇಕೆಂದರೆ, ಪ್ರತಿಯೊಬ್ಬ ಸದಸ್ಯನು ವೈಯಕ್ತಿಕವಾದ ವಿವರಣಾಪಟ್ಟಿಯನ್ನು ಸಿದ್ಧಗೊಳಿಸಿಕೊಂಡು ಬಳಿಕ ವೈಯಕ್ತಿಕವಾದ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು. (2) ಲವೊದಿಕೀಯದಲ್ಲಿನ ಸಮಸ್ಯೆಯು ಜಾಗತಿಕವಾಗಿತ್ತು, ಹೊರತು ಪ್ರಾಂತೀಯವಲ್ಲ. ಲವೊದಿಕೀಯದವರ ಸಮಸ್ಯೆಯು ವಿಶಿಷ್ಟವಾದದ್ದಲ್ಲ, ಮತ್ತು ಉಗುರುಬೆಚ್ಚಗಿನ ಸ್ಥಿತಿಯು ವರ್ಷಗಳುದ್ದಕ್ಕೂ ಸಭೆಯನ್ನು ಬಾಧಿಸುತ್ತಲೇ ಇರುವದಾಗಿದೆ ಎಂದು ಕರ್ತನು ಬಲ್ಲವನಾಗಿದ್ದನಾದ್ದರಿಂದ ಆತನು ಈ ಪತ್ರವನ್ನು ಸಂರಕ್ಷಿಸಿಟ್ಟನು. ನಮ್ಮೆಲ್ಲರಿಗೂ ಧಾರ್ಮಿಕವಾಗಿ ಸ್ವಸಂತೃಪ್ತಿಯುಳ್ಳವರಾಗುವದು ಸುಲಭವಾಗಿರುತ್ತದೆ.

ಪ್ರತಿಯೊಬ್ಬ ವ್ಯಕ್ತಿಯು ತನ್ನನ್ನು ಪರೀಕ್ಷಿಸಿಕೊಳ್ಳಬೇಕು. ನೀನು ಒಡೆಯನಿಗೆ ಮಾಡುವ ಸೇವೆಯಲ್ಲಿ ಉಗುರುಬೆಚ್ಚಗೆಗೊಂಡಿದ್ದೀಯೋ? ನೀನು ನಿನ್ನ ಹುಮ್ಮಸ್ಸನ್ನು ಕಳೆದುಕೊಂಡಿದ್ದೀಯೋ? ನೀನು ಒಂದು ಸುಖಕರವಾದ ಆತ್ಮೀಕ ರೂಢಿಯ ಜಾಡಿನಲ್ಲಿ ನೆಲೆಗೊಂಡು ಬಿಟ್ಟಿದ್ದೀಯೋ? ಹಾಗಿರುವದಾದಲ್ಲಿ, ಇಂದು ಕರ್ತನಿಗೆ ನಿನ್ನ ಸಮರ್ಪಣೆಯನ್ನು ನವೀಕರಿಸಿಕೋ. ನೀನು ಆತನಿಗೆ ಮಾಡುವ ಸೇವೆಯಲ್ಲಿ ವೈರಾಗ್ಯದಿಂದಿರಬೇಕೆಂದು ಆತನು ಬಯಸುತ್ತಾನೆ.

## ನ್ಯೂನತೆಗಳೊಂದಿಗೆ ಪ್ರೀತಿಸುವದು (3:14-22)

ಸಭೆಯ ನ್ಯೂನತೆಗಳಿಲ್ಲದ್ದಾಗಿದ್ದರೆ ಒಳ್ಳೇದಾಗಿತ್ತೆಂದು ಬಯಸುತ್ತೇವೆ. ದೈವಿಕದ ಕಡೆಯಿಂದ ನೋಡುವದಾದರೆ, ಅದು ನ್ಯೂನತೆಗಳಿಲ್ಲದ್ದೇ ಆಗಿದೆ; ದೇವರು ಸಭೆಗಾಗಿ ಹೊಂದಿರುವ ಪರಲೋಕದ ರಚನೆಯು ದೋಷಗಳಿಲ್ಲದ್ದಾಗಿದೆ. ಹೇಗೂ, ಮಾನವ ಕಡೆಯಿಂದ ನೋಡುವದಾರೆ, ಸಭೆಯು ಸಮಸ್ಯೆಗಳಿಂದ ತುಂಬಿರುತ್ತದೆ - ಅದು ಜನರಿಂದ ತುಂಬಿರುವ ಕಾರಣದಿಂದ, ಮತ್ತು ಜನರು ಸಮಸ್ಯೆಗಳನ್ನು ಹೊಂದಿರುವರು. ಈ ವಾಸ್ತವಾಂಶವು ಕೆಲವರಿಗೆ ಮುಜುಗರವನ್ನುಂಟು ಮಾಡುತ್ತದೆ ಮತ್ತು ಅವರು ಸಭೆಯ ನ್ಯೂನತೆಗಳನ್ನು ಬಚ್ಚಿಡುವದಕ್ಕೆ ಪ್ರಯತ್ನಿಸುತ್ತಾರೆ. ಇದು ಕೆಲವರಿಗೆ ಅವರು ಎಷ್ಟೊಂದು ಬೇಸರವುಂಟು ಮಾಡುತ್ತದೆಂದರೆ ಕೊನೆಗೆ ಅವರು ಸಭೆಯನ್ನೇ ತೊರೆದು ಬಿಡುತ್ತಾರೆ.

ಸಭೆಯ ದೋಷಗಳನ್ನು ಎತ್ತಿ ಹೇಳುವದರಲ್ಲಿ ಕರ್ತನು ಯಾವಾಗಲೂ ಮುಚ್ಚುಮರೆಯಿಲ್ಲದವನಾಗಿದ್ದಾನೆ. ಏಳು ಸಭೆಗಳಿಗೆ ಬರೆದ ಪತ್ರಗಳ ಮೇಲಿನ ವ್ಯಾಖ್ಯೆಗಳಲ್ಲಿ, ತನ್ನ ಸಭೆಯು ದೇವರಿಗಾಗಿ ಹೊಂದಿರುವ ತನ್ನ ಪ್ರೀತಿಯನ್ನು ಕಳೆದುಕೊಳ್ಳುವದು (2:4), ಭಕ್ತಿಹೀನ ಜೀವಿತಗಳನ್ನು ಜೀವಿಸುವದು (2:14, 15, 20), ಮತ್ತು ಕಪಟತನದಿಂದ ಸಹ

ತುಂಬಿರುವದಕ್ಕೆ ಸಾಧ್ಯವಿರುತ್ತದೆ (3:1, 2) ಎಂಬುದನ್ನು ಬಯಲುಗೊಳಿಸುವದಕ್ಕೆ ಯೇಸುವು ಮುಜುಗರ ಪಡಲಿಲ್ಲ ಎಂಬುದನ್ನು ನಾವು ನೋಡಿದ್ದೇವೆ.

ಏಳು ಸಭೆಗಳಿಗೆ ಬರೆದ ಪತ್ರಗಳನ್ನು ಓದುವದೆಂದರೆ ನೀವು ಬರುತ್ತಿರುವಿರೆಂದು ಮುನ್ನೆಚ್ಚರಿಕೆಯನ್ನು ನೀಡದೆಯೇ ಒಬ್ಬ ಸ್ತ್ರೀಯ ಮನೆಗೆ ಭೇಟಿಯನ್ನು ಕೊಡುವ ರೀತಿಯಲ್ಲಿರುತ್ತದೆ. ನೀವು ಆ ಮನೆಗೆ ಭೇಟಿ ಕೊಡುವಾಗ, ನೀವು ಅದು ಹೇಗೆ ಕಾಣಬೇಕೆಂದು ಆಕೆಯು ಬಯಸುತ್ತಾಳೋ ಆ ರೀತಿಯಲ್ಲಿರುವದರ ಬದಲಾಗಿ ಅದು ಯಾವಾಗಲೂ ಇರುವಂತೆಯೇ ಇರುವದನ್ನು ನೀವು ಕಾಣುವ ಸಾಧ್ಯತೆಯಿರುತ್ತದೆ: ಹಳೆಯ ಸುದ್ದಿ ಪತ್ರಿಕೆಗಳು ಹಾಗೂ ಮ್ಯಾಗಜಿನ್‌ಗಳ ರಾಶಿ, ಅಲ್ಲಲ್ಲಿ ಹರಿಡಿರುವ ಆಟದ ಸಾಮಾನುಗಳು, ನೆಲದ ಮೇಲೆ ಬಟ್ಟೆಗಳು ಬಿದ್ದಿರುವದು, ತಿಂದು ಉಳಿದ ಊಟದ ತಟ್ಟೆಗಳು, ಕುಡಿದು ಅರ್ಧಕ್ಕೆ ಬಿಟ್ಟಿರುವ ತಂಪು ಪಾನೀಯ ಬಾಟಲಿಗಳು, ಮೂಲೆಗಳಲ್ಲಿ ಶೇಖರಣೆಯಾಗಿರುವ ಧೂಳು ಇತ್ಯಾದಿಗಳನ್ನು ಕಾಣುವಿರಿ- ಮತ್ತು ಇದೆಲ್ಲಾ ಕೇವಲ ಮುಂದಿನ ಕೋಣೆಯಲ್ಲಿದ್ದ ಸ್ಥಿತಿಯಷ್ಟೆ!

ಕರ್ತನು ವಿವಿಧ ಸಭೆಗಳಲ್ಲಿದ್ದ ಪಾಪವನ್ನು ಅನುಮೋದಿಸಲಿಲ್ಲವಾದಾಗ್ಯೂ - ಮತ್ತು ಅವರನ್ನು ಪಶ್ಚಾತ್ತಾಪ ಪಡುವಂತೆ ಆದೇಶಿಸಿದನು - ಅವರ ಮೇಲೆ ಆಗಲೂ ಆತನಿಗೆ *ಪ್ರೀತಿಯಿತ್ತು*. ಇದು ಲವೊದಿಕೀಯದಲ್ಲಿನ ಸಭೆಗೆ ಬರೆದ ಪತ್ರದಲ್ಲಿ ಅಲ್ಲದೆ ಬೇರೆ ಇನ್ನೇಲ್ಲೂ ಅಷ್ಟೊಂದು ಹೆಚ್ಚು ಸ್ಪಷ್ಟವಾಗಿರುವದಿಲ್ಲ. ಈ ಸಭೆಯ ಸದಸ್ಯರ ವಿಷಯದಲ್ಲಿ ಯೇಸುವಿನ ಬಳಿಯಲ್ಲಿ ಒಳ್ಳೇದನ್ನು ಹೇಳಲು ಏನೂ ಇರಲಿಲ್ಲ, ಆದರೆ ಆಗಲೂ ಆತನು ಅವರನ್ನು ಪ್ರೀತಿಸಿದನು (3:19). ಅದೇ ರೀತಿಯಲ್ಲಿಯೇ, ಸಭೆಯು ನ್ಯೂನತೆಗಳನ್ನು ಹೊಂದಿರುವಾಗಲೂ ಅದನ್ನು ನಾವು ಪ್ರೀತಿಸುವವರಾಗಿರಬೇಕು. ನ್ಯೂನತೆಗಳನ್ನು ಹೊಂದಿರುವ ಸಭೆಯನ್ನು ನಾವು ಪ್ರೀತಿಸುವದಕ್ಕೆ ಕಲಿಯದಿದ್ದಲ್ಲಿ, ನಾವು ಅದನ್ನು ಎಂದಿಗೂ ಪ್ರೀತಿಸುವದೇ ಇಲ್ಲ - ಯಾಕೆಂದರೆ ಅದು ಯಾವಾಗಲೂ ನ್ಯೂನತೆಗಳನ್ನು ಹೊಂದಿತ್ತು, ಮತ್ತು ಮುಂದೆಯೂ ಹೊಂದಿರುವದು.

### "Trojan Horse [ಟ್ರಾಯ್ ನಗರದ ಕುದುರೆ]" (3:14-22)

ಯಾರೋ ಒಬ್ಬರು ಉಗುರು ಬೆಚ್ಚತನವನ್ನು ಸಭೆಯ "ಟೊಳ್ಳು ಕುದುರೆ" ಎಂದು ಕರೆದಿರುತ್ತಾರೆ. "Trojan Horse [ಟ್ರಾಯ್ ನಗರದ ಕುದುರೆ]" ಎಂಬ ಪದವು ಗ್ರೀಕ್-ಟ್ರಾಯ್ ಪದದಿಂದ ಬಂದಿರುತ್ತದೆ. ಈ ಯುದ್ಧವು Homerನ *Iliad* and the *Odyssey* ಎಂಬ ಮಹಾಕಾವ್ಯದ ವಿಷಯವಾಗಿತ್ತು. ಈ ಬರವಣಿಗೆಗಳು ಗ್ರೀಕ್ ಪೌರಾಣಿಕತೆಯಿಂದ ತುಂಬಿದೆಯಾದರೂ, ವಾಸ್ತವದಲ್ಲಿ ಅವುಗಳು ಕ್ರಿ.ಪೂ. ಹನ್ನೆರಡನೆಯ ಶತಮಾನದಲ್ಲಿ ಸಂಭವಿಸಿದ ನಿಜವಾದ ಘಟನೆಗಳನ್ನು ಆಧರಿಸುವದು ಸ್ಪಷ್ಟವಾಗಿರುತ್ತದೆ. ಯುದ್ಧ ಸಂಭವಿಸುತ್ತಿದ್ದ ವೇಳೆಯಲ್ಲಿ, ಗ್ರೀಕ್‌ರು ಆಸ್ಯ ಸೀಮೆಯ ವಾಯುವ್ಯ ದಿಕ್ಕಿಗಿರುವ ಟ್ರಾಯ್ ಪಟ್ಟಣಕ್ಕೆ ಮುತ್ತಿಗೆ ಹಾಕಿದರು. ಯುದ್ಧವು ದಿಗ್ಬಂಧನದ ಸ್ಥಿತಿಯಲ್ಲಿರುವಾಗ Ulysses (ಗ್ರೀಕ್ ಭಾಷೆಯಲ್ಲಿ Odysseus)ನು ಟ್ರಾಯ್ ನಗರದವರಿಗೆ ಒಂದು ಕಟ್ಟಿಗೆಯ ಕುದುರೆಯನ್ನು ಉಡುಗೋರೆಯಾಗಿ ಕೊಡುವ ಉಪಾಯವನ್ನು ಮಾಡಿದನು. ಟ್ರಾಯ್ ನಗರದ ಅರಸನ ಮಗಳಾದ Cassandraಳು ಈ ಉಡುಗೋರೆಯನ್ನು ತಿರಸ್ಕರಿಬೇಕೆಂದು ಬೇಡಿಕೊಂಡಿದ್ದಳು: "ಗ್ರೀಕ್‌ರ ಉಡುಗೋರೆಗಳನ್ನು ಹೊತ್ತುಕೊಂಡಿದ್ದರೂ, ನನಗೆ ಅವರ ಬಗ್ಗೆ ಭಯವಿದೆ." Cassandraಳ ಸಲಹೆಯನ್ನು ನಿರ್ಲಕ್ಷಿಸಲಾಯಿತು, ಮತ್ತು ಉಡುಗೋರೆಯಾಗಿ ಬಂದ ಕುದುರೆಯನ್ನು ಗೋಡೆಗಳ ಒಳಗೆ ಎಳೆದುಕೊಳ್ಳಲಾಗಿತ್ತು. ಆ ರಾತ್ರಿ, ಗ್ರೀಕ್ ಸೈನಿಕರು ಆ ಕುದುರೆಯೊಳಗಿಂದ ಹೊರ ಹೊಮ್ಮಿದ್ದರು, ದ್ವಾರಗಳನ್ನು ತೆರೆದಿದ್ದರು, ಮತ್ತು ಗ್ರೀಕ್ ಸೈನ್ಯವನ್ನು ಒಳಗೆ ಬರುವಂತೆ ಅವಕಾಶ ಮಾಡಿ ಕೊಟ್ಟಿದ್ದರು. ಟ್ರಾಯ್ ನಗರದವರನ್ನು

ಸೋಲಿಸಲಾಯಿತು, ಮತ್ತು ನಗರವು ನಾಶಗೊಳಿಸಲ್ಪಟ್ಟಿತು.

ಸಭೆಯಲ್ಲಿರುವ ಉಗುರುಬೆಚ್ಚತನವು "ಟ್ರಾಯ್ ನಗರದ ಕುದುರೆ" ಎಂದು ಕರೆಯಲ್ಪಟ್ಟಿದೆ ಯಾಕೆಂದರೆ ಅದು ನಮ್ಮ ಮಧ್ಯದಲ್ಲಿ ನಾವು ಸಹಿಸಿಕೊಂಡಿರುವ ಗಂಡಾಂತರವಾಗಿರುತ್ತದೆ. ಅದು ಸಕ್ರಿಯವಾಗಿ ಕರ್ತನ ಕೆಲಸಕ್ಕೆ ವಿರೋಧವನ್ನು ಮಾಡುವದಿಲ್ಲ ಮತ್ತು ಒಬ್ಬ ಮಿತ್ರನಂತೆ ನಟಿಸುತ್ತದೆಯಾದ ಕಾರಣ ಅದು ಅಪಾಯಕರವೆಂದು ಕಾಣಿಸುವದಿಲ್ಲ. ಹೇಗೂ, ಉಗುರುಬೆಚ್ಚಗಿನ ಸ್ಥಿತಿಯು ಸೈತಾನನ ದಂಡುಗಳಿಗೆ ದ್ವಾರವನ್ನು ತೆರೆದು ಕೊಡುತ್ತದೆ. ಅದು ಸಭೆಯನ್ನು ನಾಶನಗೊಳಿಸುವದರಲ್ಲಿ ಫಲಿತಗೊಳ್ಳಬಹುದಾಗಿದೆ. ಅದು ಯೇಸುವಿಗೆ ವಾಂತಿ ಬರಿಸುವಂತೆ ಮಾಡಿತು, ಮತ್ತು ಅದು ನಮಗೆ ಸಹ ವಾಂತಿ ಬರಿಸುವಂತೆ ಮಾಡತಕ್ಕದ್ದು. ಉಗುರುಬೆಚ್ಚಗಿನ ಸ್ಥಿತಿಯು ಲವೊದಿಕೀಯದವರನ್ನು "ಕೇವಲ ದುರವಸ್ಥೆಯಲ್ಲಿ ಬಿದ್ದವನು, ದರಿದ್ರನು" ಎಂಬ ಸ್ಥಿತಿಗೆ ತಂದಿತ್ತು (ವ. 17).

## ನಿರ್ಲಕ್ಷ್ಯತೆಯ ಕ್ರೈಸ್ತರು (3:14-22)

ಪ್ರತಿಯೊಂದು ಸಭೆಯಲ್ಲಿಯೂ ಅದರ ಉಗುರುಬೆಚ್ಚಗಿರುವ ಸದಸ್ಯರು ಇರುತ್ತಾರೆ - ಖಾಸಗಿ ಪ್ರಾರ್ಥನೆ ಬೈಬಲ್ ಅಧ್ಯಯನ, ಮತ್ತು ಸ್ವ-ಪರೀಕ್ಷೆ ಇವುಗಳಲ್ಲಿ ನಿರ್ಲಕ್ಷ್ಯದಿಂದಿರುವವರು; ಸಭೆಗೆ ಆಗಾಗ ಗೈರಾಗುವವರು; ತಮ್ಮ ಕೊಡುವಿಕೆಯಲ್ಲಿ ಎಂದಿಗೂ ತ್ಯಾಗವನ್ನು ಮಾಡದವರು; ಸ್ಥಳೀಯ ಸಭೆಯ ಕಾರ್ಯಕ್ರಮಗಳಿಗಾಗಿ ಅಷ್ಟಾಗಿ ಕಳಕಳಿಯನ್ನು ತೋರಿಸದವರು; ಅವರು ರೋಗದಲ್ಲಿರುವವರನ್ನು ಭೇಟಿ ಮಾಡುವದು, ದುಃಖದಲ್ಲಿರುವವರನ್ನು ಸಂತೈಸುವದು, ಅಥವಾ ಕಳೆದು ಹೋದವರಿಗೆ ಉಪದೇಶಿಸುವದು ಇತ್ಯಾದಿಗಳನ್ನು ಮಾಡುವದು ಅತಿ ವಿರಳವಾಗಿರುತ್ತದೆ; ಇವರು "ಎಂದಿಗೂ ತಮ್ಮನ್ನು ಅನಾನುಕೂಲತೆಗಳಿಗೆ ಒಳಪಡಿಸಿಕೊಂಡವರು, ಯಾವದೇ ನಿಂದನೆಗಳನ್ನು ಸಹಿಸಿಕೊಂಡವರು, ಅಥವಾ ಕ್ರಿಸ್ತನ ನಿಮಿತ್ತವಾಗಿ ಯಾವದೇ ಸುಖವನ್ನು ತೊರೆದು ಬಿಟ್ಟವರು . . . "[20] ಆಗಿರುವದೇ ಇಲ್ಲ.

## ವೈಯಕ್ತಿಕ ಆಮಂತ್ರಣ (3:20-22)

20ರಿಂದ 22ರ ವರೆಗಿನ ವಚನಗಳಲ್ಲಿರುವ ಯೇಸುವಿನ ಮಾತುಗಳು ಲವೊದಿಕೀಯದ ಸಭೆಗೆ ಬರೆದ ಪತ್ರಕ್ಕೆ ಒಂದು ಸೂಕ್ತವಾದ ಮುಕ್ತಾಯದ ಮಾತುಗಳು ಮಾತ್ರವೇ ಆಗಿರುವದಿಲ್ಲ, ಆದರೆ ಅವುಗಳು ಎಲ್ಲಾ ಪತ್ರಗಳಿಗೂ ಒಂದು ಸಮರ್ಪಕವಾದ ಮುಕ್ತಾಯವನ್ನು ಒದಗಿಸುತ್ತವೆ:

> ಇಗೋ, ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ; ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು, ಅವನು ನನ್ನ ಸಂಗಡ ಊಟ ಮಾಡುವನು. ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡೆನು; ಹಾಗೆಯೇ ಜಯಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು. ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ.

ಯೇಸುವಿನ ಆಮಂತ್ರಣ ಮತ್ತು ವಾಗ್ದಾನಗಳು ಸಭೆಗಾಗಿ ಅಲ್ಲ, ಆದರೆ ವ್ಯಕ್ತಿಗೆ ಆಗಿರುತ್ತದೆ: "*ಯಾವನಾದರೂ* ನನ್ನ ಶಬ್ದವನ್ನು ಕೇಳಿ . . . ಜಯಹೊಂದುವವನನ್ನು . . ." (ಒತ್ತಿ ಹೇಳಿದ್ದು ನನ್ನದು). ಯೇಸು ತನ್ನ ಬಾಹುಗಳನ್ನು ಪ್ರತಿಯೊಬ್ಬ ವ್ಯಕ್ತಿಗಾಗಿಯೂ

ಚಾಚಿಕೊಂಡಿರುತ್ತಾನೆ.

ಯೇಸುವು ತನ್ನನ್ನು ತಮ್ಮ ಜೀವಿತಗಳಲ್ಲಿ ಎಂದಿಗೂ ಒಳಗೆ ಬಿಟ್ಟುಕೊಂಡಿರದ ಜನರನ್ನು ಆಮಂತ್ರಿಸುತ್ತಾನೆ. "ಎಲ್ಲಾ ಮನುಷ್ಯರು ರಕ್ಷಣೆ ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ಆತನ ಚಿತ್ತವಾಗಿದೆ" (1 ತಿಮೊಥೆ 2:4). ನೀವು ಆತನಲ್ಲಿ ನಂಬಿಕೆಯನ್ನು ಹೊಂದಿರುವದಾದರೆ, ನೀವು "ಕ್ರಿಸ್ತನಲ್ಲಿ" ದೀಕ್ಷಾಸ್ನಾನ ಮಾಡಿಸಿಕೊಳ್ಳಬಹುದು ಮತ್ತು ಹೀಗೆ "ಕ್ರಿಸ್ತನನ್ನು" ಧರಿಸಿಕೊಳ್ಳಬಹುದಾಗಿದೆ (ಗಲಾತ್ಯ 3:26, 27). ನೀವು ಆತನ ಒಂದು ಅಂಗವಾಗುವಿರಿ, ಮತ್ತು ಆತನು ನಿಮ್ಮ ಒಂದು ಅಂಗವಾಗುವನು.

ಹೇಗೂ, 20ನೇ ವಚನದಲ್ಲಿರುವ ಆಮಂತ್ರಣವು ಮೊಟ್ಟ ಮೊದಲನೆಯದಾಗಿ ದೇವರ ಭಾವಶೂನ್ಯನಾದ ಮಗುವಿಗೆ ನೀಡಿದ್ದಾಗಿರುತ್ತದೆ. ಲವೊದಿಕೀಯದವರ ಹಾಗೆಯೇ, ಕ್ರೈಸ್ತರಾಗಿರುವವರಾದ ನಾವು ಕ್ರಿಸ್ತನನ್ನು ನಮಗೆ ಅರಿವು ಸಹ ಇಲ್ಲದೆಯೇ ನಮ್ಮ ಜೀವಿತಗಳಿಂದ ಹೊರಗೆ ದೊಬ್ಬಿ ಬಾಗಿಲನ್ನು ಮುಚ್ಚಿಕೊಳ್ಳಲು ಸಾಧ್ಯವಿರುತ್ತದೆ. ಸಮಯವನ್ನು ತೆಗೆದುಕೊಂಡು ನಿಮ್ಮ ಸ್ವಂತ ಜೀವಿತವನ್ನೊಮ್ಮೆ ನೋಡಿಕೊಳ್ಳಿರಿ: ಒಂದು ಕಾಲದಲ್ಲಿ ನೀವು ಕ್ರೈಸ್ತತ್ವದ ಕುರಿತು ಅಧಿಕವಾಗಿ ಉತ್ಸಾಹದಿಂದ ಇದ್ದವರಾಗಿದ್ದಿರೋ? ಗತಕಾಲದಲ್ಲಿ, ಆತನ ಪ್ರಸನ್ನತೆಯ ಅರಿವು ನಿಮಗೆ ಅಧಿಕವಾಗಿತ್ತೋ? ಈಗ ಯೇಸು ನಿಮ್ಮ ಹೃದಯದ ಬಾಗಿಲಿನ ಹೊರಗೆ ನಿಂತುಕೊಂಡು ತಟ್ಟುತ್ತಿರುವ ಸಾಧ್ಯತೆಯು ಇರುತ್ತದೋ? ನೀವು ಮಾಡುವ ಸೇವೆಯಲ್ಲಿ ಉಗುರುಬೆಚ್ಚಗಿನ ಸ್ಥಿತಿಯುಳ್ಳವಾಗಿರುವದಾದರೆ, ಈ ದಿನವೇ ನೀವು ಪಶ್ಚಾತ್ತಾಪ ಪಟ್ಟು ಆತನ ಬಳಿಗೆ ಹಿಂದಿರುಗಿ ಬರುವಂತಾಗಬೇಕೆಂದು ನಾವು ಪ್ರಾರ್ಥಿಸುತ್ತೇವೆ (ಅಪೊಸ್ತಲರ ಕೃತ್ಯಗಳು 8:22; ಯಾಕೋಬ 5:16; 1 ಯೋಹಾನ 1:9).

## ಬಾಗಿಲ ಬಳಿಯಲ್ಲಿ ಕ್ರಿಸ್ತನು (3:20)

ಕ್ರಿಸ್ತನು ಬಾಗಿಲ ಬಳಿಯಲ್ಲಿ ನಿಂತಿರುವ ಅತ್ಯಂಥ ಪ್ರಸಿದ್ಧವಾದ ಚಿತ್ರಣವೆಂದರೆ Holman Huntನು ರಚಿಸಿರುವ "The Light of the World" ಎಂಬ ಚಿತ್ರವೇ. ಆ ಚಿತ್ರದಲ್ಲಿ, ಯೇಸು ತನ್ನ ಕೈಯಲ್ಲೊಂದು ದೀಪವನ್ನು ಹಿಡಿದವನಾಗಿ ಒಂದು ಬಾಗಿಲ ಮುಂದೆ ನಿಂತಿರುತ್ತಾನೆ. ಆ ಬಾಗಿಲು ಎಷ್ಟೊಂದು ಕಾಲದಿಂದ ಮುಚ್ಚಿರುತ್ತದೆಂದರೆ ಅದರ ಮೇಲೊಂದು ನಿತ್ಯ ಹಸುರಿನ ಬಳ್ಳಿಯೊಂದು ಬೆಳೆದಿರುತ್ತದೆ, ಹಾಗಿದ್ದರೂ ಯೇಸುವು ತಾಳ್ಮೆಯಿಂದ ತಟ್ಟುತ್ತಲೇ ಇದ್ದಾನೆ. ಶ್ರೀ. Huntನು ಆ ಚಿತ್ರ ರಚಿಸುವದನ್ನು ಮುಗಿಸಿದಾಗ, ಅದನ್ನು ತನ್ನ ಒಬ್ಬ ಸ್ನೇಹಿತನಿಗೆ ನೋಡುವಂತೆ ಹೇಳಿದನೆಂಬ ಕಥೆಯು ಹೇಳಲ್ಪಡುತ್ತದೆ. ಆ ಸ್ನೇಹಿತನು ಚಿತ್ರವನ್ನು ಅಧ್ಯಯನ ಮಾಡಿದನು ಮತ್ತು ಬಳಿಕ ಹೀಗೆ ಹೇಳಿದನು, "ಆದರೆ ಈ ಚಿತ್ರವು ಪೂರ್ತಿಗೊಂಡಿರುವದಿಲ್ಲ. ನೀನು ಬಾಗಿಲಿನ ಹೊರಗೆ ಅಗುಳಿ ಬೀಗವನ್ನು ಬಿಡಿಸುವದಕ್ಕೆ ಮರೆತು ಬಿಟ್ಟಿರುವಿ." ಶ್ರೀ. Hunt ಹೀಗೆ ಹೇಳಿದನು, "ನಾನು ಉದ್ದೇಶಪೂರ್ವವಾಗಿಯೇ ಆ ರೀತಿಯಲ್ಲಿ ಚಿತ್ರಿಸಿದ್ದೇನೆ. ವಿಷಯ ಏನೆಂದರೆ, ಬಾಗಿಲು ಮಾನವ ಹೃದಯವಾಗಿದೆ - ಮತ್ತು ಹೃದಯವು ಒಳಗಿನಿಂದ ಮಾತ್ರವೇ ತೆರೆಯಲ್ಪಡುವದಕ್ಕೆ ಸಾಧ್ಯ."

## ಲವೊದಿಕೀಯದ ಸಭೆಗೆ ಬರೆದ ಪತ್ರ (3:22)

ಯಾರಾದರೂ ಏಳು ಸಭೆಗಳ ಕುರಿತು ಬೋಧಿಸುವ ವೇಳೆ, ಅವರು "ಸ್ಥಳೀಯ ಸಭೆಗೆ ಬರೆದ ಪತ್ರ" ಎಂದು ಸೇರ್ಪಡೆಗೊಳಿಸುತ್ತಾರೆ. ಇಲ್ಲಿ ಒಂದು ಪ್ರಶ್ನೆಯು ಎಬ್ಬಿಸಲ್ಪಡುತ್ತದೆ, "ಕರ್ತನು ಇಲ್ಲಿಯ ಸಭೆಗೆ ಪತ್ರವನ್ನು ಬರೆದದ್ದಾಗಿದ್ದರೆ, ಆತನು ಏನು ಹೇಳುವನು?" ಬಹುಪಾಲು ಸಭೆಗಳು ಆಸ್ಯ ಸೀಮೆಯ ಏಳು ಸಭೆಗಳಲ್ಲಿದ್ದಂಥ ಸಾಮರ್ಥ್ಯಗಳನ್ನು ಮತ್ತು

ದುರ್ಬಲತೆಗಳನ್ನು ಒಳಗೊಂಡಿರುತ್ತವೆ. ಬಹುಶಃ ಅದಕ್ಕಿಂತ ಅಧಿಕ ಪ್ರಾಮುಖ್ಯವಾದ ಪ್ರಶ್ನೆಯೆಂದರೆ, "ಕರ್ತನು *ನನಗೆ* ಪತ್ರವೊಂದನ್ನು ಬರೆಯುವದಾದರೆ, ಆತನು ಏನು ಹೇಳುವನು?" ಬಹಳಷ್ಟು ಜನರು ತಮ್ಮ ಸ್ವಂತ ದೋಷಗಳನ್ನು ಎತ್ತಿ ತೋರಿಸಿಕೊಳ್ಳುವದಕ್ಕಿಂತಲೂ ಸಭೆಗಳ ದೋಷಗಳನ್ನು ಎತ್ತಿ ತೋರಿಸುವದಕ್ಕೆ ಇಷ್ಟ ಪಡುತ್ತಾರೆ.

---

## ಅಡಿಟಿಪ್ಪಣಿಗಳು

[1]Herodotus *Histories* 1.84. [2]William Barclay, *Letters to the Seven Churches* (Philadelphia: Westminster Press, 1957), 84. [3]J. W. Roberts, *The Revelation to John (The Apocalypse)*, The Living Word Commentary, ed. Everett Ferguson (Austin, Tex.: Sweet Publishing Co., 1974), 47. [4]Warren W. Wiersbe, *The Bible Exposition Commentary*, vol. 2 (Wheaton, Ill.: Victor Books, 1989), 577. [5]Leon Morris, *Revelation*, rev. ed., The Tyndale New Testament Commentaries, ed. Leon Morris (Grand Rapids, Mich.: Wm. B. Eerdmans Publishing Co., 1987), 76 (emphasis added). [6]Ibid. [7]James M. Tolle, *The Seven Churches of Asia* (Pasadena, Tex.: Haun Publishing Co., 1968), 62. [8]Homer Hailey, *Revelation* (Grand Rapids, Mich.: Baker Book House, 1979), 149. [9]Ibid., 150. [10]Alfred Plummer, *Revelation*, The Pulpit Commentary, ed. H. D. M. Spence and Joseph S. Exell, vol. 22 (Grand Rapids, Mich.: Wm. B. Eerdmans Publishing Co., 1950), 111 (ಒತ್ತಿ ಹೇಳಿದ್ದು ನನ್ನದು).

[11]ಉದಾಹರಣೆಗೆ, ನೋಡಿರಿ Ignatius *Philadelphians* 6. [12]Henry Alford, *James-Revelation*, Alford's Greek Testament (London: Rivington's, 1875; reprint, Grand Rapids: Mich.: Guardian Press, 1976), 585 (ಒತ್ತಿ ಹೇಳಿದ್ದು ಆತನದ್ದು). [13]Tolle, 69ರಲ್ಲಿ ಉಲ್ಲೇಖಿಸಲ್ಪಟ್ಟದ್ದು. [14]Eugene H. Peterson, *The Message: New Testament With Psalms and Proverbs*. [15]Tolle, 75. [16]Wiersbe, 581. [17]J. Wayne Kilpatrick, "Autopsy of a Dead Church," *Preacher's Periodical* 5 (June 1984): 29–31. [18]Wiersbe, 579–81. [19]Ronnie White, "Church Enemy Number One," *Preacher's Periodical* 6 (November 1985): 45–46, 50. [20]Boyd Carpenter, Tolle, 73ರಲ್ಲಿ ಉಲ್ಲೇಖಿಸಲ್ಪಟ್ಟದ್ದು.